Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 134
ಶುಕ್ರವಾರ,15 ಮೇ 2026 | ಪುಟಗಳು: 12+10 | ಬೆಲೆ: ₹ 5.00
C
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಬಂಗಾಳದಲ್ಲಿ ಸುವೇಂದು ಸರಕಾರದಿಂದ ಪ್ರಾಣಿ ವಧೆಗೆ ಹೊಸ ಮಾರ್ಗಸೂಚಿ ಪ್ರಕಟ

ಪುಟಿದೆದ್ದ ಮಾರುಕಟ್ಟೆ: ಸೆನ್ಸೆಕ್ಸ್ 789 ಅಂಕ ಏರಿಕೆ

ದಿಲ್ಲಿಯಲ್ಲಿ ಸರಕಾರಿ ನೌಕರರಿಗೆ ವಾರದಲ್ಲಿ 2 ದಿನ ವರ್ಕ್ ಫ್ರಮ್ ಹೋಮ್: ಸಿಎಂ ರೇಖಾ ಗುಪ್ತಾ

ಏಷ್ಯನ್ ವೇಟ್‌ಲಿಫ್ಟಿಂಗ್: ಅಜಿತ್‌ಗೆ ಕಂಚು

ಗಾಂಧಿನಗರ: ಇಲ್ಲಿ ನಡೆಯುತ್ತಿರುವ ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸ್ಪರ್ಧಿಗಳು ಗಮನಾರ್ಹ ಪ್ರದರ್ಶನ ಮುಂದುವರಿಸಿದ್ದಾರೆ. ಗುರುವಾರ ನಡೆದ ಪುರುಷರ 71 ಕೆ.ಜಿ ವಿಭಾಗದಲ್ಲಿ ಅಜಿತ್ ನಾರಾಯಣ ಅವರು ಕಂಚಿನ ಪದಕ ಜಯಿಸಿದ್ದಾರೆ.

ಏಷ್ಯಾದ ಪ್ರಮುಖ ವೇಟ್‌ಲಿಫ್ಟರ್‌ಗಳ ವಿರುದ್ಧ ಸೆಣಸಿದ ಅಜಿತ್, ಕ್ಲೀನ್ ಮತ್ತು ಜರ್ಕ್‌ನಲ್ಲಿ 174 ಕೆ.ಜಿ ಸೇರಿದಂತೆ ಒಟ್ಟು 314 ಕೆ.ಜಿ ಭಾರ ಎತ್ತುವುದರೊಂದಿಗೆ ಮೂರನೇ ಸ್ಥಾನ ಗಳಿಸಿದರು. ಇದರೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಮೂರನೇ ಭಾರತೀಯ ಎಂಬ ಗೌರವಕ್ಕೆ ಅಜಿತ್ ಪಾತ್ರರಾಗಿದ್ದಾರೆ. ಕೋಮಲ್ ಕೋಹಾರ್ ಕಂಚು ಗೆದ್ದು ಭಾರತದ ಪರ ಖಾತೆ ತೆರದರೆ, ಜ್ಞಾನೇಶ್ವರಿ ಯಾದವ್ ಬೆಳ್ಳಿಗೆ ಮುತ್ತಿಟ್ಟಿದ್ದರು.

ಭಾರತ 'ಎ' ತಂಡಕ್ಕೆ ಸೂರ್ಯವಂಶಿ ಆಯ್ಕೆ

ಹೊಸದಿಲ್ಲಿ: ಹದಿಹರೆಯದ ಬ್ಯಾಟಿಂಗ್ ದೈತ್ಯ ವೈಭವ್ ಸೂರ್ಯವಂಶಿಗೆ ಶ್ರೀಲಂಕಾದಲ್ಲಿ ಜೂನ್ 9ರಿಂದ ಆರಂಭವಾಗಲಿರುವ ಮೂರು ರಾಷ್ಟ್ರಗಳ 50 ಓವರ್‌ಗಳ ಸರಣಿಗೆ ಗುರುವಾರ ಪ್ರಕಟಿಸಲಾದ 15 ಸದಸ್ಯರ ಭಾರತ 'ಎ' ತಂಡದಲ್ಲಿ ಸ್ಥಾನ ಕಲ್ಪಿಸಲಾಗಿದೆ.

ಆತಿಥೇಯ ಶ್ರೀಲಂಕಾವಲ್ಲದೆ, ಅಫಘಾನಿಸ್ತಾನ 'ಎ' ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ 3ನೇ ರಾಷ್ಟ್ರವಾಗಿದೆ. ಎಲ್ಲಾ ಪಂದ್ಯಗಳು ದಂಬುಲ್ಲಾದಲ್ಲಿ ನಡೆಯಲಿವೆ. ಭಾರತ 'ಎ' ತಂಡ ಗಾಲೆಯಲ್ಲಿ ಎರಡು ಚತುರ್ದಿನ ಪಂದ್ಯಗಳನ್ನು ಸಹ ಆಡಲಿದ್ದು, ಇದಕ್ಕೆ ತಡವಾಗಿ ತಂಡವನ್ನು ಘೋಷಿಸಲಾಗುತ್ತದೆ ಎಂದು ಬಿಸಿಸಿಐ ಹೇಳಿದೆ. ಭಾರತ 'ಎ' ತಂಡವು ಶ್ರೀಲಂಕಾ ವಿರುದ್ಧ (ಜೂನ್ 9 ಮತ್ತು 15), ಅಫಘಾನಿಸ್ತಾನ ವಿರುದ್ಧ (ಜೂನ್ 11 ಮತ್ತು 17) ಸೆಣಸಲಿದೆ. ಜೂನ್ 21ರಂದು ಅಗ್ರ ಎರಡು ತಂಡಗಳು ಫೈನಲ್ ಪಂದ್ಯದಲ್ಲಿ ಎದುರಾಗಲಿವೆ.

ಭಾರತ 'ಎ': ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್, ಆಯುಷ್ ಬದೋನಿ, ನಿಶಾಂತ್ ಸಿಂಧು, ಹರ್ಷ್ ದುಬೆ, ಸೂರ್ಯಾಂಶ್ ಶೆಡ್ಗೆ, ಪ್ರಭ್‌ಸಿಮ್ರನ್ ಸಿಂಗ್, ಕುಮಾರ್ ಕುಶಾಗ್ರ, ವಿಪ್ರಜ್ ನಿಗಮ್, ಯಶ್ ಠಾಕೂರ್, ಯುದ್ವಿರ್ ಸಿಂಗ್, ಅಂಶುಲ್ ಕಾಂಬೋಜ್, ಅರ್ಷದ್ ಖಾನ್.

ಜೊಕೊವಿಕ್ ದಾಖಲೆ ಮುರಿದ ಜನ್ನಿಕ್ ಸಿನ್ನರ್

ರೋಮ್: ವಿಶ್ವದ 14ನೇ ರ‍್ಯಾಂಕ್‌ನ ಆಂಡ್ರೆ ರುಬ್ಲೆವ್ ಅವರನ್ನು 6-2, 6-4ರಲ್ಲಿ ಮಣಿಸಿದ ಜನ್ನಿಕ್ ಸಿನ್ನರ್, ಇಟಲಿನ್ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಸೆಮಿಫೈನಲ್ಸ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಅರ್ಧ ಶತಮಾನದಲ್ಲಿ ತವರಿನಲ್ಲಿ ಇಟಲಿಯನ್ ಓಪನ್ ಗೆದ್ದ ಮೊದಲ ಆಟಗಾರ ಎಂಬ ಹಿರಿಮೆಗೆ ಪಾತ್ರರಾಗಲು ಸಿನ್ನರ್‌ಗೆ ಕೇವಲ ಎರಡು ಗೆಲುವುಗಳು ಅಗತ್ಯವಿದೆ.

ಗುರುವಾರ ನಡೆದ ಪಂದ್ಯದಲ್ಲಿ ರುಬ್ಲೆವ್ ಅವರ ಸವಾಲನ್ನು ಮೆಟ್ಟಿನಿಂತ ಸಿನ್ನರ್, ಮಾಸ್ಟರ್ಸ್ 1000 ಟೂರ್ನಿಯಲ್ಲಿ ಸತತ 32 ಪಂದ್ಯಗಳಲ್ಲಿ ಜಯ ಗಳಿಸಿದ್ದ 24 ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳ ವಿಜೇತ ನೊವಾಕ್ ಜೊಕೊವಿಕ್ ಅವರ ದಾಖಲೆಯನ್ನೂ ಹಿಂದಿಕ್ಕಿದ್ದಾರೆ.

ಪಂಜಾಬ್ ಕಿಂಗ್ಸ್ ಸೋತರೂ ಪ್ಲೇಆಫ್ ಆಸೆ ಜೀವಂತ | ಪ್ರಭ್‌ಸಿಮ್ರನ್ ಹೋರಾಟ ವ್ಯರ್ಥ

ಮುಂಬಯಿ ಇಂಡಿಯನ್ಸ್‌ಗೆ ಗೆಲುವಿನ ತಿಲಕ

ಧರ್ಮಶಾಲಾ: ತಿಲಕ್ ವರ್ಮಾ (75*; 33 ಎಸೆತ, 6 ಫೋರ್, 6 ಸಿಕ್ಸರ್) ಅವರ ಕೆಚ್ಚೆದೆಯ ಹೋರಾಟದ ಫಲವಾಗಿ ಮುಂಬಯಿ ಇಂಡಿಯನ್ಸ್ ತಂಡ ಒಂದು ಎಸೆತ ಬಾಕಿ ಇರುವಂತೆಯೇ 6 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ತಂಡವನ್ನು ಪರಾಭವಗೊಳಿಸಿತು. ಈಗಾಗಲೇ ಪ್ಲೇಆಫ್ ಸ್ಪರ್ಧೆಯಿಂದ ನಿರ್ಗಮಿಸಿರುವ ಮುಂಬಯಿ, ಸದ್ಯ 4ನೇ ಜಯ ದಾಖಲಿಸಿತು. ಅತ್ತ ಸತತ 5ನೇ ಸೋಲಿಗೆ ಒಳಗಾದ ಪಂಜಾಬ್ ಕಿಂಗ್ಸ್, ಪ್ಲೇಆಫ್ ಹಂತ ಪ್ರವೇಶಿಸಬೇಕಾದರೆ ಮುಂದಿನ ಎರಡು ಪಂದ್ಯಗಳಲ್ಲಿ (ಆರ್‌ಸಿಬಿ ಮತ್ತು ಲಖನೌ) ವಿರುದ್ಧ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿತು.

ತಿಲಕ್ ವರ್ಮಾ

201 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ಮುಂಬಯಿ, 19.5 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 205 ರನ್ ಪೇರಿಸಿತು. ಕೊನೆಯ ಓವರ್‌ನಲ್ಲಿ ಸತತ ಎರಡು ಸಿಕ್ಸರ್ ಸಿಡಿಸಿದ ತಿಲಕ್ ತಂಡಕ್ಕೆ ರೋಚಕ ಗೆಲುವು ತಂದುಕೊಟ್ಟರು. ಇದಕ್ಕೂ ಮುನ್ನ ರಿಕೆಲ್ಟನ್ (48) ಮತ್ತು ರೋಹಿತ್ (25) ತಂಡದ ಹೋರಾಟಕ್ಕೆ ಬಲ ತುಂಬಿದರು.

ಮಧ್ಯಮ ವೇಗಿ ಶಾರ್ದುಲ್ ಠಾಕೂರ್ (39ಕ್ಕೆ 4) ಅವರ ಮಾರಕ ಬೌಲಿಂಗ್ ದಾಳಿಯ ನಡುವೆಯೂ ಪ್ರಭ್‌ಸಿಮ್ರನ್ (57; 32 ಎಸೆತ) ಅವರ ಬಿರುಸಿನ ಅರ್ಧ ಶತಕದ ಸಾಹಸದಿಂದ ಪಂಜಾಬ್ ಕಿಂಗ್ಸ್ ತಂಡ ಐಪಿಎಲ್ 58ನೇ ಪಂದ್ಯದಲ್ಲಿ ಮುಂಬಯಿ ಇಂಡಿಯನ್ಸ್ ವಿರುದ್ಧ 200 ರನ್‌ಗಳ ಸವಾಲಿನ ಮೊತ್ತ ಪೇರಿಸಿತು.

ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಗುರುವಾರ ಟಾಸ್ ಸೋತು ಬ್ಯಾಟಿಂಗ್‌ಗೆ ಆಹ್ವಾನ ಪಡೆದ ಕಳೆದ ಬಾರಿಯ ರನ್ನರ್ ಅಪ್ ಪಂಜಾಬ್, ಸತತ ನಾಲ್ಕು ಸೋಲುಗಳ ಕೊಂಡಿ ಕಳಚುವ ಗುರಿಯೊಂದಿಗೆ ಕಣಕ್ಕಿಳಿಯಿತು. ಆರಂಭದಿಂದಲೇ ಬಿರುಸಿನ ಆಟಕ್ಕೆ ಆದ್ಯತೆ ನೀಡಿದ ಪ್ರಿಯಾಂಶ್ ಮತ್ತು ಪ್ರಭ್‌ಸಿಮ್ರನ್, ಬೇರ್ಪಡುವ ಮುನ್ನ ಮೊದಲ ಐದು ಓವರ್‌ಗಳಲ್ಲಿ 10ರ ರನ್ ಸರಾಸರಿಯಲ್ಲಿ ಬ್ಯಾಟಿಂಗ್ ಮಾಡಿದರು. ಆದರೆ ಪ್ರಿಯಾಂಶ್ 22 ರನ್‌ಗಳಿಗೆ ಸೀಮಿತಗೊಂಡ ನಂತರ 50 ರನ್‌ಗಳ ಮೊದಲ ವಿಕೆಟ್ ಜತೆಯಾಟ ಕೊನೆಗೊಂಡಿತು. ಬಳಿಕ ಕೂಪರ್ ಕನೋಲಿ ಜತೆ ದ್ವಿತೀಯ ವಿಕೆಟ್‌ಗೆ 57 ರನ್ ಕೂಡಿಸಿದ ಪ್ರಭ್‌ಸಿಮ್ರನ್, 57 ರನ್‌ಗಳಿಸಿ ಹೋರಾಟ ಮುಗಿಸಿದರು.

ಸಂಕ್ಷಿಪ್ತ ಸ್ಕೋರ್

ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 200 (ಪ್ರಭ್‌ಸಿಮ್ರನ್ 57, ಪ್ರಿಯಾಂಶ್ 22, ಕನೋಲಿ 21, ಅಜ್ಮತ್‌ಉಲ್ಲಾ 38, ಕ್ಸೇವಿಯರ್ 18; ಶಾರ್ದುಲ್ 39ಕ್ಕೆ 4, ದೀಪಕ್ ಚಹರ್ 36ಕ್ಕೆ 2).
ಮುಂಬಯಿ ಇಂಡಿಯನ್ಸ್: 19.5 ಓವರ್‌ಗಳಲ್ಲಿ 4 ವಿಕೆಟ್‌ಗೆ 205 (ತಿಲಕ್ 75*, ರಿಕೆಲ್ಟನ್ 48, ರೋಹಿತ್ 25, ಜಾಕ್ಸ್ 25*; ಓಮರ್‌ಝೈ 36ಕ್ಕೆ 2).

ಮಧ್ಯಮ ಕ್ರಮಾಂಕದಲ್ಲಿ ಶಾರ್ದುಲ್ ಅವರ ಶಿಸ್ತಿನ ದಾಳಿಗೆ ನಾಟಕೀಯ ಕುಸಿತ ಕಂಡ ಪಂಜಾಬ್, ಸಾಧಾರಣ ಮೊತ್ತಕ್ಕೆ ಇನಿಂಗ್ಸ್ ಮುಗಿಸುವ ಭೀತಿ ಎದುರಿಸಿತು. ಆದರೆ ಡೆತ್ ಓವರ್‌ಗಳಲ್ಲಿ ಅಜ್ಮತ್‌ಉಲ್ಲಾ ಕೇವಲ 17 ಎಸೆತಗಳಲ್ಲಿ 38 ರನ್‌ಗಳ ಅಮೂಲ್ಯ ಕೊಡುಗೆ ನೀಡಿದರು. ಇವರಲ್ಲದೆ, ವಿಷ್ಣು ವಿನೋದ್ (15) ಮತ್ತು ಕ್ಸೆವಿಯರ್ ಬರ್ಟ್ಲೆಟ್ (18) ತಂಡದ ಮೊತ್ತವನ್ನು 200ರ ಗಡಿ ಮುಟ್ಟಿಸುವಲ್ಲಿ ಯಶಸ್ವಿಯಾದರು.

ಪ್ಲೇಆಫ್ ಸ್ಪರ್ಧೆಯಲ್ಲಿರಲು ಚೆನ್ನೈ ಸೂಪರ್ ಕಿಂಗ್ಸ್ ಚಿತ್ತ

ಲಖನೌ: ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡ ಪ್ರಸಕ್ತ ಐಪಿಎಲ್‌ನ 59ನೇ ಪಂದ್ಯದಲ್ಲಿ ಶುಕ್ರವಾರ ಈಗಾಗಲೇ ಪ್ಲೇಆಫ್ ಸ್ಪರ್ಧೆಯಿಂದ ನಿರ್ಗಮಿಸಿರುವ ಲಖನೌ ಸೂಪರ್ ಜಯಂಟ್ಸ್ ತಂಡವನ್ನು ಎದುರಿಸಲಿದೆ.

07	ಮುಖಾಮುಖಿ
03	ಲಖನೌ ಗೆಲುವು
03	ಚೆನ್ನೈ ಜಯ
01	ಫಲಿತಾಂಶ ರಹಿತ

ಮಾಜಿ ನಾಯಕ ಮಹೇಂದ್ರ ಸಿಂಗ್ ಅವರ ಅನುಪಸ್ಥಿತಿಯಲ್ಲೂ ಕಳೆದ 8 ಪಂದ್ಯಗಳಲ್ಲಿ 6 ಗೆಲುವು ಮತ್ತು 2ರಲ್ಲಿ ಸೋಲು ಕಂಡಿರುವ ಚೆನ್ನೈ ತಂಡ ದ್ವಿತೀಯಾರ್ಧದಲ್ಲಿ ಸ್ಥಿರತೆ ಕಾಯ್ದುಕೊಂಡ ತಂಡಗಳಲ್ಲಿ ಒಂದಾಗಿದೆ. ಅದರಲ್ಲೂ ಹಿಂದಿನ ಮೂರು ಪಂದ್ಯಗಳಲ್ಲಿ ಜಯಭೇರಿ ಬಾರಿಸಿರುವ ಚೆನ್ನೈ, ಸದ್ಯ 12 ಅಂಕಗಳನ್ನು ಹೊಂದಿದ್ದು, ಪ್ಲೇಆಫ್ ಹಂತ ಪ್ರವೇಶಿಸುವ ಅತ್ಯುತ್ತಮ ಅವಕಾಶವನ್ನು ಹೊಂದಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸ್ಥಿರತೆ ಕಾಯ್ದುಕೊಂಡಿರುವ ಋತುರಾಜ್ ಗಾಯಕ್ವಾಡ್ ನೇತೃತ್ವದ ಚೆನ್ನೈ, ದುರ್ಬಲ ಲಖನೌ ವಿರುದ್ಧ ಪೂರ್ಣ ಅಂಕ ಗಳಿಸುವ ನಿರೀಕ್ಷೆಯಲ್ಲಿದೆ.

ಅತ್ತ ನಿಸ್ತೇಜ ಪ್ರದರ್ಶನದಿಂದಾಗಿ ಪ್ಲೇಆಫ್ ಸ್ಪರ್ಧೆಯಿಂದ ಹೊರಬಿದ್ದಿರುವ ರಿಷಭ್ ಪಂತ್ ಬಳಗ, ಗೌರವದೊಂದಿಗೆ ಅಭಿಯಾನ ಕೊನೆಗೊಳಿಸಲು ಎದುರು ನೋಡುತ್ತಿದೆ. ತನ್ನ ಹಿಂದಿನ ಪಂದ್ಯದಲ್ಲಿ ಚೆನ್ನೈ ವಿರುದ್ಧ 203 ರನ್ ಗಳಿಸಿಯೂ 5 ವಿಕೆಟ್ ಸೋಲು ಬೌಲರ್‌ಗಳ ನಿರಾಶಾದಾಯಕ ಪ್ರದರ್ಶನಕ್ಕೆ ಹಿಡಿದ ಕೈಗನ್ನಡಿಯಂತಿದೆ. ಆದರೀಗ ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಅತ್ಯುತ್ತಮ ಅವಕಾಶ ಲಖನೌ ತಂಡದ ಮುಂದಿದೆ. ಆದರೆ ಸಂಘಟಿತ ಹೋರಾಟದೊಂದಿಗೆ ಅಬ್ಬರಿಸುತ್ತಿರುವ ಚೆನ್ನೈ ತಂಡವನ್ನು ಹೇಗೆ ಕಟ್ಟಿಹಾಕಲಿದೆ ಎಂಬುದು ಕುತೂಹಲ ಮೂಡಿಸಿದೆ.

ಏಕನಾ ಕ್ರಿಕೆಟ್ ಕ್ರೀಡಾಂಗಣ ಬೌಲರ್‌ಗಳ ಸ್ನೇಹಿಯಾಗಿದೆ. ಪ್ರಸಕ್ತ ಆವೃತ್ತಿಯಲ್ಲಿ ಆಡಿದ ಐದು ಪಂದ್ಯಗಳಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದ್ದಾರೆ. ಪಂದ್ಯ ಸಾಗಿದಂತೆ ಸ್ಪಿನ್ ಬೌಲರ್‌ಗಳು ಮೇಲುಗೈ ಸಾಧಿಸುವ ನಿರೀಕ್ಷೆಯಿದೆ.

ಪಂದ್ಯ ಆರಂಭ: ರಾತ್ರಿ 7.30; **ಸ್ಥಳ:** ಏಕನಾ ಕ್ರಿಕೆಟ್ ಕ್ರೀಡಾಂಗಣ, ಲಖನೌ
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಬೆಂಗಳೂರು	12	8	4	0	16	+1.053
ಗುಜರಾತ್	12	8	4	0	16	+0.551
ಹೈದರಾಬಾದ್	12	7	5	0	14	+0.331
ಪಂಜಾಬ್	12	6	5	1	13	+0.355
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ಡೆಲ್ಲಿ	12	5	7	0	10	-0.993
ಕೋಲ್ಕೊತಾ	11	4	6	1	09	-0.198
ಮುಂಬಯಿ	12	4	8	0	08	-0.504
ಲಖನೌ	11	3	8	0	06	-0.907

508 ರನ್ ಹೆನ್ರಿಚ್ ಕ್ಲಾಸೆನ್ ಸನ್‌ರೈಸರ್ಸ್ ಹೈದರಾಬಾದ್
22 ವಿಕೆಟ್ ಭುವನೇಶ್ವರ್ ಕುಮಾರ್ ರಾಯಲ್ ಚಾಲೆಂಜರ್ಸ್ ಬೆಂಗಳೂರು

ಕ್ವಾ.ಫೈನಲ್ಸ್‌ಗೆ ಸಿಂಧೂ, ಲಕ್ಷ್ಯ

ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್

ಬ್ಯಾಂಕಾಕ್: ಭಾರತದ ಷಟ್ಲರ್‌ಗಳಾದ ಪಿ.ವಿ. ಸಿಂಧೂ ಮತ್ತು ಲಕ್ಷ್ಯ ಸೇನ್ ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ. ಆದರೆ ಕಿಡಂಬಿ ಶ್ರೀಕಾಂತ್ ಪ್ರಿ ಕ್ವಾರ್ಟರ್‌ಫೈನಲ್ಸ್ ಪಂದ್ಯದಲ್ಲಿ ಸೋತು ಹೋರಾಟ ಮುಗಿಸಿದ್ದಾರೆ.

ಲಕ್ಷ್ಯ ಸೇನ್

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧೂ ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21-13, 21-15 ನೇರ ಗೇಮ್‌ಗಳಿಂದ ಡೆನ್ಮಾರ್ಕ್‌ನ ಅಮಾಲೀ ಶುಲ್ಜ್ ವಿರುದ್ಧ ಸುಲಭ ಜಯ ಗಳಿಸಿದರು. ಪಂದ್ಯದ ಉಭಯ ಗೇಮ್‌ಗಳಲ್ಲಿ ಪಾರಮ್ಯ ಸಾಧಿಸಿದ ಭಾರತೀಯ ಆಟಗಾರ್ತಿ ಕೇವಲ 28 ನಿಮಿಷಗಳಲ್ಲಿ ಪಂದ್ಯವನ್ನು ವಶಪಡಿಸಿಕೊಂಡರು. ಸಿಂಧೂ ಮುಂದಿನ ಸುತ್ತಿನ ಪಂದ್ಯದಲ್ಲಿ ಟೂರ್ನಿಯ ಅಗ್ರ ಶ್ರೇಯಾಂಕಿತೆ ಹಾಗೂ ವಿಶ್ವದ 3ನೇ ರ‍್ಯಾಂಕ್‌ನ ಜಪಾನ್‌ನ ಅಕಾನೆ ಯಮಗುಚಿ ಅವರ ಕಠಿಣ ಸವಾಲು ಎದುರಿಸಲಿದ್ದಾರೆ.

ಈ ಮಧ್ಯೆ, ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ 7ನೇ ಶ್ರೇಯಾಂಕಿತ ಹಾಗೂ 2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಲಕ್ಷ್ಯ 21-12, 21-13 ನೇರ ಗೇಮ್‌ಗಳಿಂದ ಚೀನಾದ ಜು ಕ್ಸುಯಾನ್ ಚೆನ್ ವಿರುದ್ಧ ಜಯ ಗಳಿಸಿದರು. ಲಕ್ಷ್ಯ ಮುಂದಿನ ಸುತ್ತಿನಲ್ಲಿ 2ನೇ ಶ್ರೇಯಾಂಕಿತ ಆಟಗಾರ ಥಾಯ್ಲೆಂಡ್‌ನ ಕುನ್ಲಾವುತ್ ವಿಟಿಡ್ಸರ್ನ್ ವಿರುದ್ಧ ಸೆಣಸಲಿದ್ದಾರೆ.

ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಮತ್ತು ಚಿರಾಗ್ ಜೋಡಿ ಸಹ ಅಂತಿಮ ಎಂಟರ ಘಟ್ಟಕ್ಕೆ ಮುನ್ನಡೆದಿದೆ. ಭಾರತದ ಜೋಡಿ 21-12, 21-19ರಲ್ಲಿ ಮಲೇಷ್ಯಾದ ಬ್ರಯಾನ್ ಜೆರೆಮಿ ಗೂಂಟಿಂಗ್ ಮತ್ತು ಮುಹಮ್ಮದ್ ಹೈಕಾಲ್ ವಿರುದ್ಧ ಜಯ ಗಳಿಸಿದರು. ವಿಶ್ವದ 4ನೇ ರ‍್ಯಾಂಕ್‌ನ ಭಾರತದ ಜೋಡಿ ಮುಂದಿನ ಸುತ್ತಿನಲ್ಲಿ ಜಪಾನ್‌ನ ಟಕುಮಿ ನೊಮುರಾ ಮತ್ತು ಯುಚಿ ಶಿಮೊಗಮಿ ಜೋಡಿಯನ್ನು ಎದುರಿಸಲಿದೆ. ಆದಾಗ್ಯೂ ಶ್ರೀಕಾಂತ್ 16-21, 21-11, 18-21ರಲ್ಲಿ ಚೈನೀಸ್ ತೈಪೆಯ ಸು ಲಿ ಯಾಂಗ್ ವಿರುದ್ಧ ಸೋತು ನಿರಾಸೆ ಕಂಡರು.

ಮುದ್ದಪ್ಪಗೆ 18ನೇ ರಾಷ್ಟ್ರೀಯ ಕಿರೀಟ

ಚೆನ್ನೈ: ಮಂತ್ರ ರೇಸಿಂಗ್‌ನ ಬೆಂಗಳೂರಿನ ಹೇಮಂತ್ ಮುದ್ದಪ್ಪ, 2025ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ದ್ವಿಚಕ್ರ ವಾಹನ ರೇಸ್‌ನ ಅನಿರ್ಬಂಧಿತ ವಿಭಾಗದಲ್ಲಿ ಅಧಿಕೃತವಾಗಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಮೋಟಾರ್‌ಸೈಕಲ್ ಡ್ರ್ಯಾಗ್ ರೇಸಿಂಗ್ ಚಾಂಪಿಯನ್‌ಷಿಪ್‌ನ ಅಂತಿಮ ಸುತ್ತಿನಲ್ಲಿ ಮುದ್ದಪ್ಪ ಗೆದ್ದಿದ್ದ ಪ್ರಶಸ್ತಿಯನ್ನು ಇಂಡಿಯನ್ ಮೋಟಾರ್ ಸ್ಪೋರ್ಟ್ಸ್ ಅಪೀಲ್ಸ್ ಕೋರ್ಟ್ ಎತ್ತಿಹಿಡಿದ ನಂತರ ಅವರನ್ನು ಅಧಿಕೃತ ಚಾಂಪಿಯನ್ ಎಂದು ಘೋಷಿಸಲಾಗಿದೆ. ಈ ತೀರ್ಪು ಮುದ್ದಪ್ಪ ಅವರ ಪ್ರಶಸ್ತಿಯನ್ನು ಮರು ಸ್ಥಾಪಿಸಿದ್ದು ಮಾತ್ರವಲ್ಲದೆ, ಭಾರತದ 'ಡ್ರ್ಯಾಗ್ ಕಿಂಗ್' ಎಂದೇ ಕರೆಯಲ್ಪಡುವ ಮುದ್ದಪ್ಪಗೆ ಐತಿಹಾಸಿಕ ದಾಖಲೆಯ 18ನೇ ರಾಷ್ಟ್ರೀಯ ಕಿರೀಟವನ್ನು ಗೆದ್ದ ಗೌರವವನ್ನು ತಂದುಕೊಟ್ಟಿದೆ.

ಕರ್ನಾಟಕ ಓಪನ್ ಎಟಿಪಿ ಚಾಲೆಂಜರ್

ಹ್ಯಾಮಿಶ್‌ಗೆ ಕೃಷ್ ಆಘಾತ

ಬೆಂಗಳೂರು: ಬೆಂಗಳೂರಿನ ಉದಯೋನ್ಮುಖ ಟೆನಿಸ್ ತಾರೆ ಕೃಷ್ ತ್ಯಾಗಿ ಇಲ್ಲಿ ನಡೆಯುತ್ತಿರುವ ಕರ್ನಾಟಕ ಓಪನ್ ಎಟಿಪಿ ಚಾಲೆಂಜರ್‌ನ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 19 ವರ್ಷದ ವೈಲ್ಡ್ ಕಾರ್ಡ್ ಪ್ರವೇಶಿತ ಆಟಗಾರ ತ್ಯಾಗಿ 7-6(7), 5-7, 6-4 ಸೆಟ್‌ಗಳಿಂದ ಟೂರ್ನಿಯ ಎರಡನೇ ಶ್ರೇಯಾಂಕಿತ ಗ್ರೇಟ್ ಬ್ರಿಟನ್‌ನ ಹ್ಯಾಮಿಶ್ ಸ್ಟೀವರ್ಟ್‌ಗೆ ಆಘಾತ ನೀಡಿ ಉಪಾಂತ್ಯ ತಲುಪಿದರು.

ವಿಶ್ವದ 1332ನೇ ರ‍್ಯಾಂಕ್‌ನ ಬೆಂಗಳೂರಿನ ಪ್ರತಿಭೆ, ಮೊದಲ ಸೆಟ್ಟನ್ನು ಟೈಬ್ರೇಕರ್‌ನಲ್ಲಿ ಗೆದ್ದು ಗಮನ ಸೆಳೆದರು. ಕೃಷ್ ಮುಂದಿನ ಪಂದ್ಯದಲ್ಲಿ ಆಸ್ಟ್ರೇಲಿಯಾದ ಫಿಲಿಪ್ ಸೆಕುಲಿಕ್ ಅವರ ಸವಾಲು ಎದುರಿಸಲಿದ್ದಾರೆ. ಮತ್ತೊಂದು ಸಿಂಗಲ್ಸ್‌ನ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮನೀಶ್ ಸುರೇಶ್‌ಕುಮಾರ್ 3-6, 3-6 ನೇರ ಸೆಟ್‌ಗಳಿಂದ ಇಲ್ಯಾ ಇವಾಶ್ಕಾ ವಿರುದ್ಧ ಪರಾಭವಗೊಂಡು ಹೋರಾಟ ಮುಗಿಸಿದರು.

ಈ ಮಧ್ಯೆ, ಭಾರತದ ಪ್ರಜ್ವಲ್ ದೇವ್ ಮತ್ತು ನಿತಿನ್ ಕುಮಾರ್ ಸಿನ್ಹಾ ಜೋಡಿ, ನಿಕಿ ಕಲಿಯಂಡ ಪೂಣಚ್ಚ ಮತ್ತು ಸಾಕೇತ್ ಮೈನೇನಿ ಜೋಡಿ ನಾಲ್ಕರ ಘಟ್ಟ ಪ್ರವೇಶಿಸಿದೆ.

ರುದ್ರಾಭಿಷೇಕಂನಲ್ಲಿ ರೊಮ್ಯಾಂಟಿಕ್ ಹಾಡು

ಲವಲvk ಸುದ್ದಿಲೋಕ
feedbacklvk@vijaykarnataka.com

ವೀರಭದ್ರ ದೇವರ ಇತಿಹಾಸವನ್ನು ಹೇಳುವ 'ರುದ್ರಾಭಿಷೇಕಂ' ಚಿತ್ರದ ರೊಮ್ಯಾಂಟಿಕ್ ಹಾಡು ಬಿಡುಗಡೆಯಾಗಿದೆ.

ದರ್ಶನ್ ನಾರಾಯಣ್ ಹಾಗೂ ಮೇಘನಾ ಹಳಿಯಾಳ ಹಾಡಿರುವ ಈ ಹಾಡಿಗೆ ಈ ಚಿತ್ರದ ನಿರ್ದೇಶಕ ವಸಂತ್ ಕುಮಾರ್ ಸಾಹಿತ್ಯ ರಚಿಸಿದ್ದು, ವಿ. ಮನೋಹರ್ ಸಂಗೀತ ನೀಡಿದ್ದಾರೆ. ವಿಜಯ ರಾಘವೇಂದ್ರ ಮತ್ತು ಪ್ರಿಯಾಂಕಾ ತಿಮ್ಮೇಶ್ ನಾಯಕ-ನಾಯಕಿಯಾಗಿ ನಟಿಸಿದ್ದಾರೆ. ವಿಜಯ ರಾಘವೇಂದ್ರ ಇದೇ ಮೊದಲ ಬಾರಿಗೆ ತಂದೆ-ಮಗನಾಗಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಸಿನಿಮಾ ಬಗ್ಗೆ ಮಾತನಾಡಿದ ವಿಜಯ ರಾಘವೇಂದ್ರ, 'ವೀರಗಾಸೆ ಪಾತ್ರ ಮಾಡುವುದು ಸವಾಲಾಗಿತ್ತು, ಈ ಪಾತ್ರವನ್ನು ಅನುಭವಿಸಿ ಮಾಡಿದ್ದೇನೆ' ಎಂದಿದ್ದಾರೆ.

ಪ್ರಿಯಾಂಕಾ ತಿಮ್ಮೇಶ್ ಮಾತನಾಡಿ, 'ನನ್ನದು ಶಿವನ ಭಕ್ತೆ ಪಾತ್ರ . ಹಳ್ಳಿ ಮತ್ತು ಸಿಟಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ' ಎಂದು ತಿಳಿಸಿದ್ದಾರೆ. ಈ ಚಿತ್ರದಲ್ಲಿ ಬಲರಾಜವಾಡಿ, ವಿ. ಮನೋಹರ್, ಮನು, ಸನತ್, ಬುಲೆಟ್ ವಿನು ಸೇರಿದಂತೆ ಅನೇಕರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ವಿಜಯ ರಾಘವೇಂದ್ರ, ಪ್ರಿಯಾಂಕಾ ತಿಮ್ಮೇಶ್

ವಿಚಾರಣೆ ಡಬ್ಬಿಂಗ್ ಪೂರ್ಣ

ಮಡೆನೂರು ಮನು, ಫರೀನ್, ಮಹೇಶ್ ಸಿದ್ದು

ನೃತ್ಯ ನಿರ್ದೇಶಕ ಅಕುಲ್ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿರುವ ಸಿನಿಮಾ 'ವಿಚಾರಣೆ' ಚಿತ್ರವು ಡಬ್ಬಿಂಗ್ ಮುಗಿಸಿದೆ.

ನಾಲ್ಕು ವರ್ಷಗಳ ಹಿಂದೆ ತಾವು ಕಂಡ ಘಟನೆಯನ್ನು ಚಿತ್ರರೂಪಕ್ಕೆ ಇಳಿಸಿ ಅದಕ್ಕೊಂದು ಕಮರ್ಷಿಯಲ್ ಟಚ್ ನೀಡಿದ್ದಾರೆ ಅಕುಲ್. ಯುವಕನೊಬ್ಬ ಬದುಕು ಅರಸಿಕೊಂಡು ನಗರಕ್ಕೆ ಬರುತ್ತಾನೆ; ಅಲ್ಲಿ ಅವನಿಗೆ ಎದುರಾಗುವ ಸಮಸ್ಯೆಗಳು ಹಾಗೂ ಅವುಗಳಿಂದ ಹೊರಬರಲು ಆತ ನಡೆಸುವ ಹೋರಾಟದಲ್ಲಿ ಯಶಸ್ವಿಯಾಗುತ್ತಾನೆಯೇ ಎಂಬುದನ್ನು ಕ್ರೈಮ್ ಥ್ರಿಲ್ಲರ್ ಮಾದರಿಯಲ್ಲಿ ತೋರಿಸಲಾಗಿದೆ. ಮಡೆನೂರು ಮನು ನಾಯಕರಾಗಿ ನಟಿಸಿರುವ ಎರಡನೇ ಸಿನಿಮಾ ಇದಾಗಿದ್ದು, ಫರೀನ್ ನಾಯಕಿ. ಮಂಜು ಮಹದೇವ ಚಿತ್ರಕ್ಕೆ ಸಂಗೀತ ನೀಡಿದ್ದು, ಜಿ.ವಿ. ರಮೇಶ್ ಛಾಯಾಗ್ರಹಣ, ವಿಕ್ರಂ ಸಾಹಸ ಹಾಗೂ ಪ್ರಮೋದ್ ಮರವಂತೆ-ಅನಿರುದ್ಧ ಶಾಸ್ತ್ರಿ-ಆನಂದ್ ಪ್ರಿಯ ಅವರ ಸಾಹಿತ್ಯವಿದೆ.

ಹೆಸರಿನಿಂದ ಹುಟ್ಟಿದ ಕಥೆ

ಲವಲvk cine ಸ್ವಾರಸ್ಯ

ಸಾಮಾನ್ಯವಾಗಿ ಒಂದು ಚಿತ್ರ ಪ್ರಾರಂಭವಾಗುವುದು ಒಂದು ಕಥೆಯಿಂದ. ಒಂದು ಕಥೆ ಸಿದ್ಧವಾಗಿ, ಅದಕ್ಕೆ ಸೂಕ್ತವಾದ ಕಲಾವಿದರು ಮತ್ತು ತಂತ್ರಜ್ಞರನ್ನು ಆಯ್ಕೆ ಮಾಡಿ, ಅನಂತರ ಚಿತ್ರದ ಕೆಲಸಗಳು ಮುಂದುವರಿಯುತ್ತವೆ. ಕೆಲವೊಮ್ಮೆ ಇದು ಉಲ್ಟಾ ಆಗಬಹುದು. ಇದಕ್ಕೊಂದು ಉದಾಹರಣೆ ಡಾ. ರಾಜಕುಮಾರ್ ಅಭಿನಯದ 'ಮೇಯರ್ ಮುತ್ತಣ್ಣ'. 1960ರ ದಶಕದ ಕೊನೆಗೆ ಡಾ. ರಾಜಕುಮಾರ್ ಮತ್ತು ದ್ವಾರಕೀಶ್ ಹಲವು ಚಿತ್ರಗಳಲ್ಲಿ ಜೊತೆಯಾಗಿ ನಟಿಸಿದ್ದರು. ನಟನೆಯ ಜೊತೆಗೆ ದ್ವಾರಕೀಶ್ ಪಾಲುದಾರಿಕೆಯಲ್ಲಿ 'ಮಮತೆಯ ಬಂಧನ' ಎಂಬ ಚಿತ್ರ ನಿರ್ಮಿಸಿದ್ದರು. ಈ ಸಂದರ್ಭದಲ್ಲಿ ಡಾ. ರಾಜಕುಮಾರ್ ಅವರ ಕಾಲ್‌ಶೀಟ್ ದ್ವಾರಕೀಶ್ ಅವರಿಗೆ ಸಿಕ್ಕಿತಂತೆ. ಸಿದ್ದಲಿಂಗಯ್ಯ ನಿರ್ದೇಶನದಲ್ಲಿ ಒಂದು ಚಿತ್ರ ಮಾಡುವ ನಿರ್ಧಾರವಾಗಿತ್ತಂತೆ. ಆದರೆ, ಡಾ. ರಾಜಕುಮಾರ್ ಅವರಿಗೆ ಸೂಕ್ತವಾದ ಕಥೆ ಸಿಕ್ಕಿರಲಿಲ್ಲವಂತೆ. ಒಂದಿಷ್ಟು ಕಥೆಗಳನ್ನು ಕೇಳಿದರೂ ಅದು ಚಿತ್ರತಂಡದವರಿಗೆ ಇಷ್ಟವಾಗಿರಲಿಲ್ಲ, ಡಾ. ರಾಜಕುಮಾರ್ ಅವರನ್ನು ಮೇಯರ್ ಪಾತ್ರದಲ್ಲಿ ನೋಡಬೇಕು ಎಂಬ ಆಸೆ ದ್ವಾರಕೀಶ್ ಅವರಿಗೆ ಇತ್ತಂತೆ. ರಾಜಕುಮಾರ್ ಅವರ ಮೂಲ ಹೆಸರು ಮುತ್ತುರಾಜ್. ಆದ್ದರಿಂದ 'ಮೇಯರ್ ಮುತ್ತಣ್ಣ' ಎಂಬ ಹೆಸರಿನ ಚಿತ್ರ ಮಾಡಬೇಕು ಎಂದು ಆಸೆ ವ್ಯಕ್ತಪಡಿಸಿದರಂತೆ. ಚಿತ್ರಕ್ಕೆ ಹೆಸರೇನೋ ಸಿಕ್ಕಿತ್ತು. ಆದರೆ, ಸೂಕ್ತವಾದ ಕಥೆ ಇರಲಿಲ್ಲ, ಆಗ ಹೆಸರಿಗೆ ತಕ್ಕಂತೆ ತಮಿಳಿನ ಜನಪ್ರಿಯ ಕಥೆಗಾರ ಬಾಸುಮಣಿ ಅವರಿಂದ ಕಥೆ ಬರೆಸಿ ಚಿತ್ರ ಮಾಡಲಾಯಿತಂತೆ. ಈ ಚಿತ್ರದ ಮೂಲಕ ದ್ವಾರಕೀಶ್ ನಿರ್ಮಾಣ ಸಂಸ್ಥೆ ಹುಟ್ಟುಹಾಕಿ ಸ್ವತಂತ್ರ ನಿರ್ಮಾಪಕರಾದರು. ಈ ಚಿತ್ರ ದೊಡ್ಡ ಯಶಸ್ಸು ಕಂಡ ನಂತರ ದ್ವಾರಕೀಶ್ ಕನ್ನಡ ಮತ್ತು ಬೇರೆ ಭಾಷೆಗಳಲ್ಲಿ 50ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದರೆ, ಡಾ. ರಾಜಕುಮಾರ್ ಮತ್ತು ಸಿದ್ದಲಿಂಗಯ್ಯ ಇಬ್ಬರೂ 'ಬಾಳು ಬೆಳಗಿತು', 'ನಮ್ಮ ಸಂಸಾರ', 'ತಾಯಿ ದೇವರು', 'ನ್ಯಾಯವೇ ದೇವರು', 'ಬಂಗಾರದ ಮನುಷ್ಯ' ಮತ್ತು 'ದೂರದ ಬೆಟ್ಟ' ಚಿತ್ರಗಳಲ್ಲಿ ಜೊತೆಯಾಗಿ ಕೆಲಸ ಮಾಡಿದರು.



-ಲಕ್ಷ್ಮೀಪತಿ

ಜೆನ್ ಜಿ ಗಮನ ಸೆಳೆಯಲು ಅಗಸ್ತ್ಯ ಸಿದ್ಧ

ಅಗಸ್ತ್ಯ

ಯುವ ನಟ ಅಗಸ್ತ್ಯ ಅಭಿನಯದ ಎರಡನೇ ಸಿನಿಮಾ 'ಡಿಂಚಕ್ ಡಿಂಚಕ್'. ಜೆನ್ ಜಿ ತಲೆಮಾರನ್ನು ಸೆಳೆಯಲು ಹೊರಟಿರುವ ಚಿತ್ರತಂಡ, ಈ ಬಾರಿ ಹೊಸ ಹುರುಪಿನೊಂದಿಗೆ ಪ್ರೇಕ್ಷಕರನ್ನು ರಂಜಿಸಲು ಸಿದ್ಧವಾಗಿದೆ. ಹದಿಹರೆಯದವರು ಹಾಗೂ ಕೌಟುಂಬಿಕ ಪ್ರೇಕ್ಷಕರನ್ನು ಗುರಿಯಾಗಿಸಿ ಕಥಾ ಎಳೆಯನ್ನು ಸಿದ್ಧಪಡಿಸಿಕೊಂಡಿರುವ ತಂಡ ಚಿತ್ರೀಕರಣಕ್ಕೆ ಸಜ್ಜಾಗಿದೆ. ಕಳೆದ ವರ್ಷ ಬಿಡುಗಡೆಯಾದ 'ಜೊತೆಯಾಗಿ ಹಿತವಾಗಿ' ಚಿತ್ರದ ಮೂಲಕ ಅಗಸ್ತ್ಯ ಛಾಪು ಮೂಡಿಸಿದ್ದರು. ಇದೀಗ ಎರಡನೇ ಚಿತ್ರದ ವಿಶಿಷ್ಟ ಶೀರ್ಷಿಕೆಯ ಮೂಲಕ ಭಾರಿ ನಿರೀಕ್ಷೆ ಮೂಡಿಸಿದ್ದಾರೆ.

ಮಾರಿಗೆ ದಾರಿ ಹಿಟ್ ಟೀಸರ್

ಮಾರಿಗೆ ದಾರಿ ಚಿತ್ರದ ಟೀಸರ್ ವೈರಲ್ ಆಗಿದೆ. ಇದೊಂದು ಕಲ್ಟ್, ಕ್ಲಾಸಿಕ್ ಹಾಗೂ ಭಾವನೆಗಳಿಂದ ಕೂಡಿದ ಸಿನಿಮಾ.

ಅಗಸ್ತ್ಯ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ ಮಾಡಿದ್ದಾರೆ. ಅಲ್ಲದೆ ನಾಯಕರಾಗಿ ಅಭಿನಯಿಸಿದ್ದಾರೆ. ಕಿರುತೆರೆಯ ನಟಿ ಮಹಾಲಕ್ಷ್ಮಿ ಈ ಚಿತ್ರದ ನಾಯಕಿ. ಉಳಿದಂತೆ ಕಾಕ್ರೋಚ್ ಸುಧಿ, ಬಲರಾಜವಾಡಿ ಮುಂತಾದವರು ಅಭಿನಯಿಸಿದ್ದಾರೆ. ಜಗದೀಶ್ ಗೌಡ ಛಾಯಾಗ್ರಹಣ ಮತ್ತು ಸಂಕಲನ ನಿರ್ವಹಿಸಿದ್ದು, ಸೈಕ್ ಸೂರಿ ಸಾಹಸ ನಿರ್ದೇಶನ ಮಾಡಿದ್ದಾರೆ. ವಾರಾಣಸಿ, ಬೆಂಗಳೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಮಡಿಕೇರಿ ಹಾಗೂ ಮೈಸೂರಿನ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಮಹಾಲಕ್ಷ್ಮಿ, ಅಗಸ್ತ್ಯ

ವಿಜಯಬಂಧ - 7946



ಎಡದಿಂದ ಬಲಕ್ಕೆ
1 ಗೃಹದಲ್ಲೇ ಮಾಡಿಕೊಂಡ ಗಿಡ ಮೂಲಿಕೆಗಳ ನಾಟಿ ಚಿಕಿತ್ಸೆ 4
3 ಅಡ್ಡ ದಾರಿ ಹಿಡಿಯದ ಎದುರೆದುರೇ ಹೇಳಿದ ನುಡಿ 4
5 ಅಂಗದನನ್ನು ತಂದೆಯ ಮಗನಾಗಿ ಹೀಗೆ ಕರೆಯಬಹುದು 4
8 ಫಿಲ್ಮ್ ಅನ್ನು ಕತ್ತರಿಸಿ ಅಂಟಿಸಿ ಸರಿಹೊಂದಿಸುವ ಚಲನಚಿತ್ರದ ಕೆಲಸ 4
10 ರತುನದಷ್ಟೇ ಮೌಲ್ಯಯುತವಾದ ಬೆಳ್ಳಿಲೋಹ 3
12 ಸಂತನಿಗೆ ಉಂಟಾದ ಆನಂದ 3
13 ಹಣ ಕೊಟ್ಟು ತಂದ ಮಣ್ಣಿನ ದೀಪ 3
14 ಪ್ರಕರಣಕ್ಕೆ ಕಾರಣವಾದ ದ್ವಾದಶರಾಶಿಯಲ್ಲಿನ ಜಲಚರ 3
16 ರಸಿಕರು ಸಜ ಅನುಭವಿಸಿದಾಗ ಸರೋವರದಲ್ಲಿ ಹುಟ್ಟಿದ ತಾವರೆ 4
18 ಪರಿಸರದಲ್ಲಿ ಹಸಿರಿನಿಂದ ಕಂಗೊಳಿಸಿದ ವೃಕ್ಷ ಹಾಗೂ ಸಸಿ 4
20 ಹಲವಾರು ಹುಟ್ಟುಗಳ ಸಂಬಂಧ ಅನುಬಂಧದ ರೂಪದಲ್ಲಿದೆ 4
21 ಸಾಲ ಸೂಲ ಎನ್ನದೆ ಬಂದು ಹೆಂಗೆ ಮಾಡಿಸುವ ಪುಣ್ಯಾತಗಿತ್ತಿ 4

ಮೇಲಿನಿಂದ ಕೆಳಕ್ಕೆ
2 ಮರೆಯಲ್ಲಿ ಅಡಗಿ ಪ್ರಾಣಿ ಹಿಡಿಯುವ ಬೇಟೆ 3
4 ರಕ್ಕಸಿಯ ಕೈಗೆ ಸಿಕ್ಕದ ವಿಲಾಸಿ 3
6 ಪ್ರಶ್ನೆಗೆ ನೀಡಿದ ಬರಹ ರೂಪದಲ್ಲಿನ ಜವಾಬು 5
7 ತರಗತಿಯಲ್ಲಿ ಕ್ರಮಬದ್ಧವಾದ ರೀತಿ 2
8 ವಸಂತನ ಜೊತೆಗೂಡಿ ಬಂದ ಸಾಧು ಸತ್ಪುರುಷ 2
9 ಲಕ್ಷ್ಮಣನದು ವಿಶಿಷ್ಟವಾದ ಗುಣವನ್ನು ಹೊಂದಿದ ವಿನ್ಯಾಸ 5
11 ಕೊಳಕನಿಗೆ ಮಾಡಿಸಿದ ಸ್ನಾನ 3
14 ಜನುಮ ಪೂರ್ತಿ ಮಾಡಿದ ವಿಲಾಸಿ ಜೀವನ 2
15 ಮರದ ಮೇಲೆ ಕಾಣಿಸಿಕೊಂಡ ಲಕ್ಷ್ಮಿ 2
17 ಅಡಗಿಸಿಡಿ ಎಂದರೂ ಕೇಳದೆ ಉಂಟಾದ ಸ್ಫೋಟ 3
19 ಮಧುರವಾದ ಮಾವಿನಂತಹ ಕಬ್ಬು 3

ವಿಜಯಬಂಧ | 7945
ಎಡದಿಂದ ಬಲಕ್ಕೆ: 2.ಗಾಳಿಬೆಳಕು 6.ಕರಡಿ 7.ಲಲಿತ 8.ಸಮರಸ 11.ದಿನರಾತ್ರಿ 13.ವಾಸ್ತವ 14.ನಾಗಸಿರಿ 16.ಸವಕಲು 19.ರಜತ 20.ದಾಷ್ಟೀಕ 22.ನವನವೀನ.
ಮೇಲಿನಿಂದ ಕೆಳಕ್ಕೆ: 1.ಪಂಕ 2.ಗಾಡಿಕಾರ 3.ಬೆರಣಿ 4.ಕುಲಜನ 5.ಮತ 9.ಮರುಗ 10.ಸವಾರಿ 11.ದಿವಸ 12.ರಾಧಿಕ 15.ಸಿರಿತನ 17.ವರದಾನ 18.ಭೂವನ 19.ರಸ್ತೆ 21.ಕತ್ತಿ.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕನ್ಯಾ, ಧನು, ಮೀನ- ಈ ರಾಶಿಯವರಿಗೆ ಚತುರ್ಥ ಯೋಗ

ಮೇಷ: ಪದವೀಧರರಿಗೆ ಉನ್ನತ ಶಿಕ್ಷಣಕ್ಕಾಗಿ ಉತ್ತಮ ಸ್ಥಳ ಲಭಿಸಲಿದೆ. ಅಧ್ಯಯನಕ್ಕೆ ಗಣ್ಯರ ಪ್ರೋತ್ಸಾಹ ದೊರೆಯಲಿದೆ. ಹಿರಿಯರ ಅನುಭವದ ಸಲಹೆಯನ್ನು ನಿರ್ಲಕ್ಷಿಸಬೇಡಿ. **ಶುಭ ಸಂಖ್ಯೆ :** 2 **ಬಣ್ಣ:** ಗುಲಾಬಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ಅಭಿವೃದ್ಧಿಗೆ ಅನುಕೂಲ. ಸಾಧ್ಯವಾದರೆ ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸಿ. ಮನೆಯ ಹೆಣ್ಣುಮಕ್ಕಳ ಮದುವೆ ವಿಚಾರ ಪ್ರಸ್ತಾಪಕ್ಕೆ ಬರಲಿದೆ. **ಶುಭ ಸಂಖ್ಯೆ :**7, **ಬಣ್ಣ:** ಕಂದು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಗಾಬರಿಗೊಳ್ಳದೇ, ಮೇಲಧಿಕಾರಿಗೆ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ನಿಮ್ಮ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ಹೊಸದನ್ನು ಕಲಿಯುವ ಉತ್ಸಾಹ ಮೂಡಲಿದೆ. **ಶುಭ ಸಂಖ್ಯೆ :** 4, **ಬಣ್ಣ:** ಬಿಳಿ
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಐಟಿ ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ. ವರಮಾನ ಹೆಚ್ಚಳದ ಸಂಭವವೂ ಇರುವುದು. ಸಂಗಾತಿಯೊಂದಿಗೆ ಸ್ನೇಹದಿಂದ ವರ್ತಿಸಿ. **ಶುಭ ಸಂಖ್ಯೆ :** 6, **ಬಣ್ಣ:** ಹಸಿರು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಅಭಿವೃದ್ಧಿ ಕೆಲಸಗಳಿಗೆ ಮಹತ್ವ ನೀಡಿ. ಅವುಗಳನ್ನು ಕಾರ್ಯಗತಗೊಳಿಸಿ. ಕೆಲಸದಲ್ಲಿ ಬಹಳ ದಿನಗಳಿಂದ ಇದ್ದ ಸಮಸ್ಯೆ ಬಗೆಹರಿಯುವುದು. ಅಗ್ನಿಯಿಂದ ಅಪಾಯವಾಗುವ ಭೀತಿ ಇರುವುದು. **ಶುಭ ಸಂಖ್ಯೆ :** 8, **ಬಣ್ಣ:** ಕಪ್ಪು
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಹೊಟ್ಟೆಯುಬ್ಬರ ಅಥವಾ ಉದರಕ್ಕೆ ಸಂಬಂಧಿಸಿದ ಯಾವುದೇ ತೊಂದರೆಯಾದರೂ ಮನೆ ಮದ್ದನ್ನು ಬಳಸಿ. ವೃತ್ತಿರಂಗದಲ್ಲಿ ನಕಾರಾತ್ಮಕ ಬೆಳವಣಿಗೆ ಮನಸ್ಸಿಗೆ ಕಳವಳ ಉಂಟು ಮಾಡಲಿದೆ. **ಶುಭ ಸಂಖ್ಯೆ :** 1, **ಬಣ್ಣ:** ಬೂದು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಅಹಿತಕರ ಘಟನೆ ಮಾನಸಿಕ ಮತ್ತು ದೈಹಿಕವಾಗಿ ಕಾಡಲಿದೆ. ಕೆಲಸದ ಸ್ಥಳದಲ್ಲಿ ನೀವು ನಾಯಕತ್ವ ಸಾಮರ್ಥ್ಯವನ್ನು ಪ್ರದರ್ಶಿಸುವಿರಿ. **ಶುಭ ಸಂಖ್ಯೆ :** 5, **ಬಣ್ಣ:** ಕೆಂಪು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ವ್ಯವಹಾರದಲ್ಲಿ ಎದುರಾಗಿರುವ ಸಮಸ್ಯೆಗೆ ಸೋಮಾರಿತನವೇ ಮೂಲ ಕಾರಣ. ಎದುರಾಗಿರುವ ಕೌಟುಂಬಿಕ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ಎದುರಿಸಿ. **ಶುಭ ಸಂಖ್ಯೆ :**9, **ಬಣ್ಣ:** ಖಾಕಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಕೆಲಸದಲ್ಲಿ ಬಹಳ ಅವಸರ ತೋರುವ ಸ್ವಭಾವದಿಂದ ತೊಂದರೆ ಆಗದಂತೆ ಎಚ್ಚರವಹಿಸಿ. ತಾಯಿಯ ಸಲಹೆಯಿಂದಾಗಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ನಿವಾರಣೆಯಾಗುತ್ತವೆ. **ಶುಭ ಸಂಖ್ಯೆ :**3, **ಬಣ್ಣ:** ಹಳದಿ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಕಾರ್ಮಿಕರು ಕೊಡುವ ಸಲಹೆಯಿಂದ ಅನುಕೂಲವಾಗುವ ಸನ್ನಿವೇಶ ಬರಲಿದೆ. ವಿದ್ಯಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಅವಕಾಶಗಳು ಲಭಿಸಲಿವೆ. ಮನಸ್ಸಿನ ನಾಗಾಲೋಟಕ್ಕೆ ತಕ್ಷಣ ಕಡಿವಾಣ ಹಾಕುವುದು ಉತ್ತಮ. **ಶುಭ ಸಂಖ್ಯೆ :**7, **ಬಣ್ಣ:** ನೀಲಿ
(ಬೊ, ಜ, ಜೆ, ಶಿ, ಶು, ಶೆ, ಶೊ, ಗ, ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಚಿನ್ನ ಅಥವಾ ಭೂಮಿ ಮೇಲಿನ ಹೂಡಿಕೆ ಲಾಭ ಉಂಟು ಮಾಡುತ್ತದೆ. ಅನಿರೀಕ್ಷಿತವಾಗಿ ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಔಷಧ ವ್ಯಾಪಾರಿಗಳಿಗೆ ಲಾಭವಾಗುವುದು. **ಶುಭ ಸಂಖ್ಯೆ :**4, **ಬಣ್ಣ:** ಸುವರ್ಣ
(ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ದೊರೆತಿರುವ ಖ್ಯಾತಿಯನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ. ಹೊಸ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರಿಯಾಗಿ ಯೋಚಿಸಿ, ತೀರ್ಮಾನಿಸಿ. ಕುಟುಂಬದಲ್ಲಿ ಸೌಖ್ಯವಿದ್ದು ಮನರಂಜನೆ ಪಡೆಯುವಿರಿ. **ಶುಭ ಸಂಖ್ಯೆ :** 2, **ಬಣ್ಣ:** ಪಚ್ಚೆ
(ದಿ, ದು, ಖ, ಝ, ಥ, ದೆ, ದೊ, ಚ, ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 I ಸಂಚಿಕೆ: 134
ಶುಕ್ರವಾರ,15 ಮೇ 2026 I ಪುಟಗಳು: 12+10 I ಬೆಲೆ: ₹ 5.00
C
VK
ಬೆಂಗಳೂರು I ಮೈಸೂರು I ಶಿವಮೊಗ್ಗ I ಮಂಗಳೂರು I ಹುಬ್ಬಳ್ಳಿ I ಬಾಗಲಕೋಟೆ I ಕಲಬುರಗಿ I ಚಿತ್ರದುರ್ಗ I ಗಂಗಾವತಿ I ಹಾಸನ I ಬೆಳಗಾವಿ
PRIDE OF YOUNG KARNATAKA

ವಿಜಯ ಕರ್ನಾಟಕ

ಪರಪ್ಪನ ಅಗ್ರಹಾರದಲ್ಲಿ ಸೌಲಭ್ಯ ಕೊರತೆ: ಸುಪ್ರೀಂ ಕೋರ್ಟ್‌ನಲ್ಲಿ ದರ್ಶನ್ ಅರ್ಜಿ ತೀರ್ಪು ಇಂದು?

ದಿಲ್ಲಿ ಕೆಂಪುಕೋಟೆ ಬಳಿ ಸ್ಫೋಟ ಪ್ರಕರಣ: 7,500 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ

ಬ್ರಿಕ್ಸ್ ಅಜೆಂಡಾದಲ್ಲಿ ಡಾಲರ್ ವಿಚಾರವಿಲ್ಲ, ಕೊಲ್ಲಿ ಬಿಕ್ಕಟ್ಟಿನ ಬಗ್ಗೆ ಚರ್ಚೆ: ಸಚಿವ ಜೈಶಂಕರ್

ಕುಕ್ಕೆ ಸುಬ್ರಹ್ಮಣ್ಯಕ್ಕೆ ಮತ್ತೆ ನಂ.1 ಪಟ್ಟ | ಶಕ್ತಿ ದೇವತೆಯರ ಆದಾಯದಲ್ಲಿ ಭಾರಿ ಏರಿಕೆ

ಕರುನಾಡ ದೇಗುಲಗಳ ಖಜಾನೆ ಭರ್ತಿ

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ರಾಜ್ಯದ ದೇವಾಲಯಗಳ ಆದಾಯದಲ್ಲಿ ಈ ವರ್ಷ ಮತ್ತಷ್ಟು ಏರಿಕೆಯಾಗಿದ್ದು, ಕರ್ನಾಟಕದ ದೇವಾಲಯಗಳು ಆರ್ಥಿಕವಾಗಿ ಸಂಪದ್ಭರಿತವಾಗಿವೆ. ರಾಜ್ಯದ 11 ಪ್ರಮುಖ ದೇವಾಲಯಗಳ ಆದಾಯವನ್ನು ಗಮನಿಸಿದರೆ ಈ ಬಾರಿ ಶಕ್ತಿ ದೇವತೆಯರ ಆದಾಯ ಕಳೆದ ವರ್ಷಕ್ಕಿಂತ ಈ ವರ್ಷ ಏರಿಕೆಯಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಎಂದಿನಂತೆ ಈ ವರ್ಷವೂ ಶ್ರೀಮಂತ ದೇವಾಲಯಗಳ ಸಾಲಿನಲ್ಲಿ ಮೊದಲ ಸ್ಥಾನದಲ್ಲಿದೆ. ಈ ದೇವಾಲಯದಲ್ಲಿ ಧಾರ್ಮಿಕ ಕಾರ್ಯಗಳು, ಮೂಲ ಸೌಲಭ್ಯ ಸೇರಿದಂತೆ ನಾನಾ ಕೆಲಸಗಳಿಗೆ 2024-25ರಲ್ಲಿ 79.82 ಕೋಟಿ ರೂ.ಗೂ ಅಧಿಕ ಹಣ ಖರ್ಚು ಮಾಡಲಾಗಿದ್ದು, 155.95 ಕೋಟಿ ರೂ. ಆದಾಯ ಭಕ್ತರಿಂದ ಬಂದಿತ್ತು. ಅದೇ 2025-26ರಲ್ಲಿ 85.20 ಕೋಟಿ ರೂ. ಖರ್ಚು ಮಾಡಲಾಗಿದ್ದು, ದೇವಾಲಯದ ಖಜಾನೆಗೆ ಭಕ್ತರಿಂದ 167.89 ಕೋಟಿ ರೂ. ಆದಾಯ ಹರಿದು ಬಂತು.

ಇನ್ನು, ಎಡೆಯೂರಿನ ಸಿದ್ಧಲಿಂಗೇಶ್ವರ, ನಂಜನಗೂಡಿನ ಶ್ರೀಕಂಠೇಶ್ವರ ಮತ್ತಿತರ ದೇವಾಲಯಗಳ ಆದಾಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಇಳಿಕೆಯಾಗಿದೆ. ಶಕ್ತಿ ಯೋಜನೆಯ ಪರಿಣಾಮ ಬಸ್ ಪ್ರಯಾಣ ಉಚಿತವಾಗಿರುವುದರಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳಿಗೆ ಅದರಲ್ಲೂ ಚಾಮುಂಡೇಶ್ವರಿ, ಕೊಲ್ಲೂರು ಮೂಕಾಂಬಿಕೆಯಂತಹ ದೇವಿಯರ ದೇವಾಲಯಗಳಿಗೆ ಭೇಟಿ ನೀಡಿದ್ದಾರೆ. ಇದರ ಪರಿಣಾಮ ಶಕ್ತಿ ದೇವತೆಯರ ದೇವಾಲಯಗಳ ಆದಾಯ ಹೆಚ್ಚಾಗಿದೆ.

ಪ್ರಾಧಿಕಾರವುಳ್ಳ ದೇವಾಲಯಗಳಲ್ಲಿ ಏರುಪೇರು: ಈ ಪೈಕಿ ಪ್ರಾಧಿಕಾರಗಳನ್ನು ರಚಿಸಿರುವ ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ ದೇವಿ,

ಪ್ರಾಧಿಕಾರವುಳ್ಳ ದೇಗುಲಗಳಲ್ಲೇ ಹೆಚ್ಚು ಲಾಭ

ಎಲ್ಲೆಲ್ಲೂ ಮಹಿಳಾ ಭಕ್ತರ ದಂಡು

ಹುಲಿಗೆಮ್ಮ, ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯಗಳಲ್ಲಿ ಆದಾಯ ಹೆಚ್ಚಾಗಿದೆ. ಆದರೆ, ಮಲೆಮಹದೇಶ್ವರ ದೇವಾಲಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕಡಿಮೆಯಾಗಿದೆ. ಅಲ್ಲಿ ಚಿರತೆ ಮತ್ತಿತರ ಕಾಡು ಪ್ರಾಣಿಗಳ ಹಾವಳಿಯಿಂದ ಜನರ ಆಗಮನ ಈ ಬಾರಿ ಕಡಿಮೆಯಾಗಿದ್ದು, ಆದಾಯ ಕೂಡ ಇಳಿಕೆಯಾಗಿದೆ. ಆದರೂ, ರಾಜ್ಯದ ಟಾಪ್ 11 ದೇವಾಲಯಗಳಲ್ಲಿ ಮಲೆಮಹದೇಶ್ವರ ದೇವಾಲಯ ಆದಾಯದಲ್ಲಿ ಎರಡನೇ ಸ್ಥಾನದಲ್ಲಿದ್ದರೆ, ಕೊಲ್ಲೂರು ಮೂಕಾಂಬಿಕೆ ತೃತೀಯ ಸ್ಥಾನದಲ್ಲಿದೆ.

ಆದಾಯ ಹೆಚ್ಚಲು ಕಾರಣ: ರಾಜ್ಯದಲ್ಲಿ ಧಾರ್ಮಿಕ ಪ್ರವಾಸೋದ್ಯಮದಲ್ಲಿ ಭಾರಿ ಚೇತರಿಕೆ ಕಂಡು ಬರುತ್ತಿದ್ದು, ದೇವಾಲಯಗಳಿಗೆ ಭಕ್ತರು, ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ತೆರಳುತ್ತಿರುವುದರಿಂದ ಪ್ರತಿಷ್ಠಿತ ದೇವಾಲಯಗಳ ಹುಂಡಿಗಳು ಬಹುಬೇಗ ಭರ್ತಿಯಾಗುತ್ತಿವೆ. ಜನವರಿಯಿಂದ ಮಾರ್ಚ್‌ವರೆಗೆ ಹಲವು ದೇವಾಲಯಗಳಲ್ಲಿ ಜಾತ್ರೆಗಳು, ರಥೋತ್ಸವಗಳು ಕೂಡ ನಡೆದಿದ್ದು, ಸಾಕಷ್ಟು ಪ್ರಮಾಣದಲ್ಲಿ ಆದಾಯ ಬಂದಿದೆ.

'ಶಕ್ತಿ' ಯೋಜನೆಯಡಿ ರಾಜ್ಯದ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಇರುವುದಿಂದ ಹೆಚ್ಚು ಮಹಿಳೆಯರು ದೇವಾಲಯಗಳಿಗೆ ಭೇಟಿ ನೀಡುತ್ತಾರೆ. ಜತೆಗೆ, ಆನ್‌ಲೈನ್ ಸೇವೆಗಳು, ಇ-ಹುಂಡಿಗಳ ಸೌಲಭ್ಯದಿಂದಲೂ ಭಕ್ತರು ಹರಕೆ ರೂಪದಲ್ಲಿ ಕಾಣಿಕೆಗಳನ್ನು ಸಲ್ಲಿಸುತ್ತಿರುವುದರಿಂದ ದೇವಾಲಯಗಳ ಆದಾಯ ಹೆಚ್ಚಾಗುತ್ತಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸಾಂದರ್ಭಿಕ ಚಿತ್ರ



ದೇವಾಲಯಗಳ ಆದಾಯದ ವಿವರ	2024-25 (ಕೋಟಿ ರೂ.ಗಳಲ್ಲಿ)	2025-26 (ಕೋಟಿ ರೂ.ಗಳಲ್ಲಿ)
ಕುಕ್ಕೆ ಸುಬ್ರಹ್ಮಣ್ಯ ದೇವಾಲಯ (ದಕ್ಷಿಣ ಕನ್ನಡ ಜಿಲ್ಲೆ)	155.95	167.89
ಶ್ರೀ ಮಲೆಮಹದೇಶ್ವರ ದೇವಾಲಯ (ಚಾಮರಾಜನಗರ ಜಿಲ್ಲೆ)	123.60	117.65
ಕೊಲ್ಲೂರು ಮೂಕಾಂಬಿಕಾ ದೇವಾಲಯ (ಉಡುಪಿ ಜಿಲ್ಲೆ)	71.93	84
ಶ್ರೀ ಚಾಮುಂಡೇಶ್ವರಿ ದೇವಾಲಯ (ಮೈಸೂರು ಜಿಲ್ಲೆ)	50.68	79.67
ರೇಣುಕಾ ಯಲ್ಲಮ್ಮ ದೇವಿ ದೇವಾಲಯ (ಸವದತ್ತಿ)	29.95	31.31
ಶ್ರೀಕಂಠೇಶ್ವರ ದೇವಾಲಯ (ಮೈಸೂರು ಜಿಲ್ಲೆ)	36.12	28.95
ಶ್ರೀ ಸಿದ್ದಲಿಂಗೇಶ್ವರ ದೇವಾಲಯ (ತುಮಕೂರು ಜಿಲ್ಲೆ)	29.82	27.79
ಹುಲಿಗೆಮ್ಮ ದೇವಾಲಯ (ಕೊಪ್ಪಳ ತಾಲೂಕು)	17.30	19.34
ಶ್ರೀ ದುರ್ಗಾಪರಮೇಶ್ವರಿ ದೇವಾಲಯ (ಬ್ರಹ್ಮಾವರ ತಾ.)	16.54	18.30
ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ (ದೊಡ್ಡಬಳ್ಳಾಪುರ ತಾ.)	13.31	14.28
ಬನಶಂಕರಿ ದೇವಾಲಯ (ಬೆಂಗಳೂರು)	11.83	13
ಒಟ್ಟು	557.07	602.23

ಹಣದ ಲೆಕ್ಕಕ್ಕಾಗಿ ದೇವಾಲಯಗಳಲ್ಲಿ ಸಮಿತಿ

ದೇವಾಲಯಗಳ ಆದಾಯ, ಖರ್ಚು ವೆಚ್ಚ, ಅಲ್ಲಿನ ಚಟುವಟಿಕೆಗಳ ನಿರ್ವಹಣೆಗಾಗಿ 2003ರಲ್ಲಿ 'ಧಾರ್ಮಿಕ ಪರಿಷತ್ತು ಕಾಯಿದೆ' ಜಾರಿಗೆ ತರಲಾಯಿತು. ಅದರಂತೆ 205 ಎ ಗ್ರೇಡ್ ದೇವಾಲಯಗಳಿಗೆ ಒಬ್ಬ ಅಧ್ಯಕ್ಷರು ಮತ್ತು 8 ಮಂದಿ ಸದಸ್ಯರನ್ನು ಒಳಗೊಂಡ ಸಮಿತಿಗಳನ್ನು ರಚಿಸಲಾಗಿದೆ. 193 'ಬಿ' ಗ್ರೇಡ್ ದೇವಾಲಯಗಳಲ್ಲಿ ಜಿಲ್ಲಾಧಿಕಾರಿಗಳೇ ಒಂದು ಸಮಿತಿ ರಚಿಸಿರುತ್ತಾರೆ. ಹೀಗಾಗಿ, ಪ್ರತಿ ದೇವಾಲಯಗಳು ಒಂದೊಂದು ಸರಕಾರವಿದ್ದಂತೆ. ಆದಾಯವು ಆಯಾ ಸಮಿತಿಯ ವ್ಯಾಪ್ತಿಗೆ ಬರುತ್ತದೆ. ದೇವಾಲಯಗಳಿಗೆ ಬರುವ ಭಕ್ತರಿಗೆ ಅನ್ನದಾಸೋಹ ಭವನ ನಿರ್ಮಾಣ, ವಸತಿ ಸೌಲಭ್ಯ, ಶೌಚಾಲಯಗಳ ನಿರ್ಮಾಣ ಸೇರಿದಂತೆ ಅಗತ್ಯ ಸೌಲಭ್ಯಗಳು, ದೇವಾಲಯಗಳ ಅಭಿವೃದ್ಧಿ ಕೆಲಸಗಳಿಗೆ ಬಳಸಿ ಉಳಿದ ಹಣವನ್ನು ಆಯಾ ದೇವಾಲಯಗಳ ಹೆಸರಿನಲ್ಲಿ ಎಫ್‌ಡಿ ಇಡಲಾಗುವುದು. ಒಂದು ರೂಪಾಯಿಯನ್ನೂ ಅನ್ಯ ಉದ್ದೇಶಗಳಿಗೆ ಬಳಸುವುದಿಲ್ಲ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಶಕ್ತಿ ಯೋಜನೆಯಿಂದಾಗಿ ಕಳೆದ ಮೂರು ವರ್ಷಗಳಿಂದ ರಾಜ್ಯದ ದೇವಾಲಯಗಳಿಗೆ ಹೆಚ್ಚು ಭಕ್ತರು ಆಗಮಿಸುತ್ತಿದ್ದಾರೆ. ಜತೆಗೆ ಆನ್‌ಲೈನ್, ಇ-ಹುಂಡಿ, ಆನ್‌ಲೈನ್ ಪ್ರಸಾದದಂತಹ ಜನೋಪಯೋಗಿ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಅಲ್ಲದೆ ಎ ಗ್ರೇಡ್ ದೇವಾಲಯಗಳ ಆದಾಯದ ಪೈಕಿ ಶೇ.10ರಷ್ಟನ್ನು ಹಾಗೂ ಬಿ ಗ್ರೇಡ್ ದೇವಾಲಯಗಳಿಂದ ಶೇ.5ರಷ್ಟನ್ನು 'ಕಾಮನ್ ಪೂಲ್ ಫಂಡ್'ಗೆ ನೀಡಲಾಗುವುದು.
-ರಾಮಲಿಂಗಾರೆಡ್ಡಿ ಸಚಿವರು, ರಾಜ್ಯ ಮುಜರಾಯಿ ಇಲಾಖೆ

ವಿವಿ ಆಡಳಿತಾಧಿಕಾರಿಗೆ ಕೊಕ್

ನೇಮಕ, ಬಿಡುಗಡೆಯೂ ನಿಯಮಬಾಹಿರ?

ಕೊಪ್ಪಳ ವಿವಿ ಎಡವಟ್ಟು

■ **ವಿಕ ಸುದ್ದಿಲೋಕ** ಕೊಪ್ಪಳ

ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಆಡಳಿತಾಧಿಕಾರಿ ಹುದ್ದೆಗೆ ನೇಮಕ ಮತ್ತು ಸೇವೆಯಿಂದ ಬಿಡುಗಡೆಯೂ ನಿಯಮಬಾಹಿರವಾಗಿರುವುದು ಬೆಳಕಿಗೆ ಬಂದಿದೆ.

ಕುಲಪತಿ, ಕುಲಸಚಿವ ಹುದ್ದೆಗಳಿದ್ದರೂ ಹಿಂದಿನ ಕುಲಪತಿ ಪ್ರೊ.ಬಿ.ಕೆ.ರವಿ ಅವರು ವೈಯಕ್ತಿಕ ಹಿತಾಸಕ್ತಿಯಿಂದ ಆಡಳಿತಾಧಿಕಾರಿ ಹುದ್ದೆ ಸೃಷ್ಟಿಸಿ, ಈ ಹುದ್ದೆಗೆ ನಿವೃತ್ತ ಪ್ರಾಚಾರ್ಯ ತಿಮ್ಮಾರೆಡ್ಡಿ ಮೇಟಿ ಅವರನ್ನು ನೇಮಿಸಿದ್ದರು. ಇದು ವಿವಿ ವಲಯದಲ್ಲಿ ವಿವಾದ ಹುಟ್ಟಿಸಿತ್ತು.

ಪ್ರೊ.ಬಿ.ಕೆ. ರವಿ ಅವರು ಕೊಪ್ಪಳ ವಿವಿಯಿಂದ ಕೋಲಾರ ವಿವಿಗೆ ಕುಲಪತಿಯಾಗಿ ವರ್ಗಾವಣೆಯಾಗಿದ್ದಾರೆ. ಕುಷ್ಟಗಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ.ಡಾಣಿ ಅವರಿಗೆ ಪ್ರಭಾರಿ ಕುಲಪತಿ ಜವಾಬ್ದಾರಿ ನೀಡಲಾಯಿತು. ಆಡಳಿತಾಧಿಕಾರಿ ತಿಮ್ಮಾರೆಡ್ಡಿ ಮೇಟಿ ಅವರನ್ನು ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ವಿವಿ ಆಡಳಿತಕ್ಕೆ ಉನ್ನತ ಶಿಕ್ಷಣ ಇಲಾಖೆಯ ಸರಕಾರದ ಕಾರ್ಯದರ್ಶಿ ಏ.24ರಂದು ಸೂಚಿಸಿದ್ದರು. ಈ ಸೂಚನೆ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ.

ಗವಿಸಿದ್ದೇಶ್ವರ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಬಸವರಾಜ ಪೂಜಾರ ಅವರ ಹೆಸರಿನಲ್ಲಿ ತಿಮ್ಮಾರೆಡ್ಡಿ ಮೇಟಿ ವಿರುದ್ಧ ಸರಕಾರಕ್ಕೆ ದೂರು ಸಲ್ಲಿಕೆಯಾಗಿತ್ತು. ಆಡಳಿತಾಧಿಕಾರಿಯ ನೇಮಕ ಅನಗತ್ಯವಾಗಿದೆ. ಈ ಹುದ್ದೆಗೆ ವಿದ್ಯಾರ್ಥಿಗಳ ಹಾಗೂ ಸರಕಾರದ ಹಣ ದುಂದು ವೆಚ್ಚವಾಗುತ್ತಿದೆ ಎಂದು ದೂರಿನಲ್ಲಿ ತಿಳಿಸಲಾಗಿತ್ತು. ಆದರೆ, ಈ ದೂರು ಬರೆದವರು ತಾವಲ್ಲ ಎಂದು ಬಸವರಾಜ ಪೂಜಾರ ತಿಳಿಸಿದ್ದಾರೆ. ಈ ಪತ್ರ ಆಧರಿಸಿ, ಹುದ್ದೆಯಿಂದ ಬಿಡುಗಡೆಗೊಳಿಸಿರುವುದು ಈಗ ಚರ್ಚೆಗೆ ಗ್ರಾಸವಾಗಿದೆ. ವಿವಿಯ ಕೆಲ ಸಿಬ್ಬಂದಿ ಹಾಗೂ ಆಡಳಿತದ ನಡುವೆ ಮುಸುಕಿನ ಜಗಳ ನಡೆಯುತ್ತಿರುವುದೇ ಇಂತಹ ಅವಾಂತರ ಸೃಷ್ಟಿಸುತ್ತಿದೆ ಎಂಬ ದೂರು ಕೇಳಿಬಂದಿದೆ.

ಆಡಳಿತಾಧಿಕಾರಿ ಹುದ್ದೆಯಿಂದ ತಿಮ್ಮಾರೆಡ್ಡಿ ಮೇಟಿ ಅವರನ್ನು ಕೈಬಿಡುವಂತೆ ಸರಕಾರದ ಕಾರ್ಯದರ್ಶಿಯಿಂದ ಪತ್ರ ಬಂದಿತ್ತು. ಇದನ್ನು ಆಧರಿಸಿ ಕುಲಪತಿಗಳು ಕ್ರಮ ಕೈಗೊಂಡಿದ್ದಾರೆ.
-ರಮೇಶ ಕುಲಸಚಿವ ಕೊಪ್ಪಳ ವಿವಿ

ನಾನು ಆಡಳಿತಾಧಿಕಾರಿ ಹುದ್ದೆ ನಿಭಾಯಿಸಲು ಸಿದ್ಧನಿರಲಿಲ್ಲ. ಹಿಂದಿನ ಕುಲಪತಿ ಪ್ರೊ.ಬಿ.ಕೆ.ರವಿ ಅವರೇ ಒತ್ತಾಯ ಮಾಡಿ ಸಿಂಡಿಕೇಟ್‌ನಲ್ಲಿ ಅನುಮೋದನೆ ಪಡೆದು ನೇಮಕ ಮಾಡಿದ್ದರು. ಆದರೀಗ ಸರಕಾರದ ಆದೇಶದಂತೆ ಕರ್ತವ್ಯದಿಂದ ಹಿಂದೆ ಸರಿದಿದ್ದೇನೆ.
-ತಿಮ್ಮಾರೆಡ್ಡಿ ಮೇಟಿ ನಿರ್ಗಮಿತ ಆಡಳಿತಾಧಿಕಾರಿ, ಕೊಪ್ಪಳ ವಿವಿ

ಆಸ್ತಿ ಘೋಷಣೆಗೆ ಜಿಂದಾಲ್ ಸಂಸ್ಥೆ ನಿರ್ಲಕ್ಷ್ಯ

ಕೋಟ್ಯಂತರ ರೂ.ಮೌಲ್ಯದ ಆಸ್ತಿಗೆ ಫಾರಂ.9 ಮತ್ತು 11 ಪಡೆಯದೇ ವಂಚನೆ | ತೆರಿಗೆ ನಿಗದಿಗೆ ಹರಸಾಹಸ

■ **ಪಿ.ವೀರೇಂದ್ರಗೌಡ** ಸಂಡೂರು (ಬಳ್ಳಾರಿ)
verendragoud@gmail.com

ಸಾವಿರಾರು ಕೋಟಿ ರೂ. ಮೌಲ್ಯದ ಆಸ್ತಿ, ಆದಾಯ ಹೊಂದಿರುವ ತೋರಣಗಲ್ಲು ಬಳಿಯ ಜಿಂದಾಲ್ ಸಂಸ್ಥೆ ಕಳೆದ ಮೂರು ದಶಕಗಳಿಂದ ತನ್ನ ವ್ಯಾಪ್ತಿಯ ತೋರಣಗಲ್ಲು, ವಡ್ಡು, ಬನ್ನಿಹಟ್ಟಿ ಮತ್ತು ಅಂತಾಪುರ ಗ್ರಾಮ ಪಂಚಾಯಿತಿಗಳಿಂದ ಫಾರಂ ನಂ.9 ಮತ್ತು 11 ಅನ್ನು ಪಡೆಯದ ಕಾರಣ, ವಾರ್ಷಿಕ ಆಸ್ತಿ ತೆರಿಗೆ ನಿಗದಿ ಹಾಗೂ ವಸೂಲಿ ಕನಸಾಗಿರುವುದು ಬೆಳಕಿಗೆ ಬಂದಿದೆ.

ಕೆಲವು ಗ್ರಾ.ಪಂ.ಗಳು ಇದುವರೆಗೆ ಒಪ್ಪಂದದ ಕರಾರು ಪತ್ರಗಳ ಮೂಲಕ ಒಂದಷ್ಟು ಹಣವನ್ನು ತೆರಿಗೆ ಲೆಕ್ಕದಲ್ಲಿ ಪಡೆದಿವೆ. ನಿಗದಿಗಿಂತ ಕಡಿಮೆ ತೆರಿಗೆ ವಿಧಿಸುವ ಮೂಲಕ ಪಿಡಿಒ, ಅಧ್ಯಕ್ಷರು, ಸದಸ್ಯರು ಎಸಗಿರುವ ಲೋಪದ ಬಗ್ಗೆ ಜಿಲ್ಲಾ ಪಂಚಾಯಿತಿ ಆಡಳಿತ ಈ ಹಿಂದೆಯೇ ಎಚ್ಚರಿಸಿತ್ತು. ಬೃಹತ್ ಕಾರ್ಖಾನೆಯಿಂದ ನ್ಯಾಯಯುತವಾಗಿ ತೆರಿಗೆ ಬಾರದ ಹಿನ್ನೆಲೆಯಲ್ಲಿ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳಲ್ಲಿ ಅಭಿವೃದ್ಧಿ ಕೈಗೊಳ್ಳಲು ತೀವ್ರ ಹಿನ್ನಡೆ ಅನುಭವಿಸುವಂತಾಗಿದೆ.

ಜಿ.ಪಂ. ಸಿಇಒ ನೇತೃತ್ವದಲ್ಲಿ ಜಿಂದಾಲ್ ಅಧಿಕಾರಿಗಳ ಜತೆ ಎರಡು ಸಭೆ ನಡೆಸಲಾಗಿದೆ. ಹೊಸ ಅಧಿಸೂಚನೆಯಂತೆ ತೆರಿಗೆ ವಿಧಿಸಲು ನಿರ್ಧರಿಸಲಾಗಿದೆ. ತಮ್ಮ ಕಟ್ಟಡ ಮತ್ತು ಆಸ್ತಿಗಳಲ್ಲಿ ಕೆಲವು ಅಭಿವೃದ್ಧಿ, ಮೂಲ ಸೌಕರ್ಯಗಳನ್ನು ಅವರೇ ಕಲ್ಪಿಸಿಕೊಂಡಿರುವುದರಿಂದ ತೆರಿಗೆಯಲ್ಲಿ ಸ್ವಲ್ಪ ರಿಯಾಯಿತಿ ಕೇಳಿದ್ದಾರೆ. ಈ ಸಮಸ್ಯೆ ಕಾನೂನು ಪ್ರಕಾರ ವಾರದೊಳಗೆ ಇತ್ಯರ್ಥವಾಗಲಿದೆ.
-ಶಶಿಕಾಂತ ಶಿವಪುರೆ ಉಪ ಕಾರ್ಯದರ್ಶಿ, ಜಿ.ಪಂ., ಬಳ್ಳಾರಿ

ಏನಿದು ಸಮಸ್ಯೆ?: ಪ್ರಸಕ್ತ ವರ್ಷದ ತೆರಿಗೆ ಸೇರಿ ಒಟ್ಟು 23.03 ಕೋಟಿ ರೂ. ಬಾಕಿ ಪಾವತಿಸಬೇಕು ಎಂದು ತೋರಣಗಲ್ಲು ಗ್ರಾ.ಪಂ. ಆಡಳಿತ, ಜಿಂದಾಲ್ ಸಂಸ್ಥೆಗೆ ಮೇ.13 ರಂದು ತಗಾದೆ ನೋಟಿಸ್ ನೀಡಿದೆ. ವಡ್ಡು ಗ್ರಾ.ಪಂ.ಗೆ 2024-25ರವರೆಗೆ ಒಂದಷ್ಟು ತೆರಿಗೆ ಪಾವತಿಸಿದ್ದರೂ ಪಂಚತಂತ್ರ-2ರಲ್ಲಿ ಯಾವುದೇ ಖಾತೆ ತೆರೆದಿಲ್ಲ. ಅಂತಾಪುರ ಗ್ರಾ.ಪಂ. ವ್ಯಾಪ್ತಿಯಲ್ಲಿ 2023 ರಿಂದ 26ರವರೆಗಿನ ತಮ್ಮ ಆಸ್ತಿಯ ಮಾಹಿತಿಯನ್ನು ಸಂಸ್ಥೆ ಸಲ್ಲಿಸಿಲ್ಲ. ಈ ಹಿನ್ನೆಲೆಯಲ್ಲಿ ನೋಟಿಸ್ ಜಾರಿ ಮಾಡಲು ಸಾಧ್ಯವಾಗಿಲ್ಲ.

ಜಿಂದಾಲ್ ಕಾರ್ಖಾನೆ ತನಗೆ ಸಂಬಂಧಿಸಿದ ಎಲ್ಲ ಆಸ್ತಿ ವಿವರಗಳನ್ನು ತೋರಣಗಲ್ಲು, ವಡ್ಡು, ಬನ್ನಿಹಟ್ಟಿ, ಅಂತಾಪುರ ಗ್ರಾ.ಪಂ.ಗಳಿಗೆ ಸಲ್ಲಿಕೆ ಮಾಡದಿರುವುದರಿಂದ ತೆರಿಗೆಯನ್ನು ಕರಾರುವಕ್ಕಾಗಿ ನಿರ್ಧಾರ ಮಾಡಲು ಸಾಧ್ಯವಾಗಿಲ್ಲ. ಸ್ವತ್ತಿನ ಮೂಲ ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸಲು ಅವಕಾಶವಿದೆ. ಜಿಂದಾಲ್ ಸಂಸ್ಥೆಯವರು ತಮ್ಮ ಎಲ್ಲ ಸ್ವತ್ತುಗಳ ವಿವರವನ್ನು ಸಲ್ಲಿಸುವಂತೆ ಜಿ.ಪಂ. ಆಡಳಿತ ಮಾ.11 ರಂದು ಪತ್ರ ಬರೆದಿದ್ದನ್ನು ಸ್ಮರಿಸಬಹುದು.

6 ತಿಂಗಳಿಂದ ಬಾಗಿಲು ತೆರೆಯದ ಜ್ಞಾನದೇಗುಲಗಳು | 260 ಕೋಟಿ ರೂ. ವೆಚ್ಚದ ಯೋಜನೆಗೆ ಗ್ರಹಣ

6,500 ಗ್ರಾಮೀಣ ಗ್ರಂಥಾಲಯ ಸ್ಥಗಿತ

■ **ಗುರುದತ್ತ ಭಟ್** ಹಾವೇರಿ
gurudatta.bhat@timesofindia.com

ಹಳ್ಳಿ ಮಕ್ಕಳಿಗೆ ಓದಿನ ಹವ್ಯಾಸ ವೃದ್ಧಿಸುವ ಜತೆಗೆ ನಗರ ಮಟ್ಟದ ಜ್ಞಾನ ಸಂಪನ್ಮೂಲಗಳನ್ನು ಒದಗಿಸುವ ಮಹತ್ವಾಕಾಂಕ್ಷೆಯೊಂದಿಗೆ ಒಟ್ಟು 260 ಕೋಟಿ ರೂ.ಗೂ ಹೆಚ್ಚು ವೆಚ್ಚದಲ್ಲಿ ಪ್ರಾರಂಭಿಸಲಾಗಿದ್ದ ಗ್ರಾಮೀಣ ಗ್ರಂಥಾಲಯಗಳು ಕಳೆದ 6 ತಿಂಗಳಿಂದ ಬಾಗಿಲು ಮುಚ್ಚಿವೆ. ಪರಿಷ್ಕೃತ ಮಾರ್ಗಸೂಚಿಗಳ ಕಾರಣ ನೀಡಿ, ಆರಂಭಗೊಂಡ ಕೆಲವೇ ದಿನಗಳಲ್ಲಿ ರಾಜ್ಯದ ಒಟ್ಟು 6,500ಕ್ಕೂ ಹೆಚ್ಚು ಗ್ರಾಮೀಣ ಗ್ರಂಥಾಲಯಗಳನ್ನು ಸ್ಥಗಿತಗೊಳಿಸಲಾಗಿದೆ.

ಕೇಂದ್ರ ಸರಕಾರದ ಸ್ಕೀಮ್ ಫಾರ್ ಸ್ಪೆಷಲ್ ಅಸಿಸ್ಟೆನ್ಸ್ ಟು ಸ್ಟೇಟ್ಸ್ ಫಾರ್ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಯೋಜನೆಯಡಿ ಗ್ರಾಮೀಣ ಮಕ್ಕಳು ಮತ್ತು ಯುವ ಜನತೆಗೆ ಗ್ರಂಥಾಲಯ ಹಾಗೂ ಡಿಜಿಟಲ್ ಮೂಲಸೌಕರ್ಯ ಒದಗಿಸುವ ಕಾರ್ಯಕ್ರಮ ಜಾರಿಗೊಳಿಸಲಾಗಿತ್ತು. ಇದರಡಿ ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 6,599 ಹೊಸ ಗ್ರಂಥಾಲಯಗಳ ಸ್ಥಾಪನೆಗೆ ಒಟ್ಟು 263.96 ಕೋಟಿ ರೂ. ವೆಚ್ಚಕ್ಕೆ 2025ರ ಜನವರಿ 31ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

ಶಾಲಾ ಕಟ್ಟಡಗಳಲ್ಲಿ ಪ್ರಾರಂಭ

ಈಗಾಗಲೇ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಗ್ರಂಥಾಲಯಗಳು ಇರುವೆಡೆ ಗ್ರಾಪಂ ವ್ಯಾಪ್ತಿಯ ದೊಡ್ಡ ಹಳ್ಳಿಗಳನ್ನು ಹೊಸ ಗ್ರಾಮೀಣ ಗ್ರಂಥಾಲಯಗಳ ಸ್ಥಾಪನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಶಾಲಾ ಕೊಠಡಿಗಳಿಗೆ ಆದ್ಯತೆ ನೀಡಲಾಗಿದ್ದು, ಶಾಲಾ ಕೊಠಡಿ ಲಭ್ಯವಿಲ್ಲದ ಕಡೆ ಸಮುದಾಯ ಭವನ ಅಥವಾ ಯಾವುದೇ ಖಾಲಿ ಸರಕಾರಿ ಕಟ್ಟಡವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇನ್ನು, ಬಹುತೇಕ ಹಳ್ಳಿಗಳಲ್ಲಿ ಪುಸ್ತಕಗಳ ಜತೆಗೆ ಕಂಪ್ಯೂಟರ್ ಟೇಬಲ್‌ಗಳು, ಓದುವ ಟೇಬಲ್, ಕುರ್ಚಿಗಳನ್ನು ಈಗಾಗಲೇ ಅಳವಡಿಸಿ ಗ್ರಂಥಾಲಯ ಪ್ರಾರಂಭಿಸಲಾಗಿತ್ತು. ಕೆಲವೆಡೆ ಆಯಾ ಗ್ರಾಪಂ ಅಧಿಕಾರಿಗಳು ಸ್ಥಳ ಗುರುತಿಸುವಿಕೆ, ಕಟ್ಟಡ ವ್ಯವಸ್ಥೆ ಆರಂಭಿಸಿದ್ದರು.

ಪ್ರತಿ ಶನಿವಾರ ಮತ್ತು ಭಾನುವಾರ ಮಧ್ಯಾಹ್ನ 2 ರಿಂದ ಸಂಜೆ 6 ರವರೆಗೆ ಗ್ರಂಥಾಲಯದ ಸಮಯ ನಿಗದಿಗೊಳಿಸಲಾಗಿತ್ತು. ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರನ್ನು ಗ್ರಂಥಾಲಯ ನಿರ್ವಹಣೆಗೆ ನಿಯೋಜಿಸಲಾಗಿದ್ದು, ಕೆಲಸ ಮಾಡುವ ದಿನಕ್ಕೆ 350 ರೂ. ಗೌರವಧನ ನೀಡಲು ಉದ್ದೇಶಿಸಲಾಗಿತ್ತು.

ಆರು ತಿಂಗಳಿಂದ ಸ್ಥಗಿತ

ಆದರೆ ಆರಂಭಗೊಂಡ ಕೆಲವೇ ತಿಂಗಳಲ್ಲಿ ಗ್ರಂಥಾಲಯಗಳು ಸ್ಥಗಿತಗೊಂಡಿವೆ. ಸರಕಾರದ ಪ್ರಕಾರ, ಯೋಜನೆಗೆ ಸಂಬಂಧಿಸಿದಂತೆ ಪರಿಷ್ಕೃತ ಮಾರ್ಗಸೂಚಿಗಳು ಸಿದ್ಧಗೊಳ್ಳುತ್ತಿರುವ ಹಿನ್ನೆಲೆ, ಅವು ಅಂತಿಮಗೊಳ್ಳುವವರೆಗೆ ಯೋಜನೆ ಜಾರಿಗೊಳಿಸಬಾರದು ಎಂದು ಆದೇಶ ಹೊರಡಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರಕಾರದ ಕಾರ್ಯದರ್ಶಿ 2025ರ ನವೆಂಬರ್ 27ರಂದು ರಾಜ್ಯದ ಎಲ್ಲಾ ಜಿಪಂ ಸಿಇಒಗಳಿಗೆ ಪತ್ರ ಬರೆದು, 'ಮುಂದಿನ ಆದೇಶದವರೆಗೆ ಯೋಜನೆಯನ್ನು ಅನುಷ್ಠಾನಗೊಳಿಸಬಾರದು' ಎಂದು ಸೂಚಿಸಿದ್ದಾರೆ. ಆದರೆ ಮುಂದಿನ ಆದೇಶ ಇದುವರೆಗೂ ಬರದೆ ಗ್ರಂಥಾಲಯಗಳ ಲಕ್ಷಾಂತರ ಪುಸ್ತಕಗಳು ಧೂಳು ತಿನ್ನುತ್ತಿವೆ.

AI ಚಿತ್ರ

ಗ್ರಾಮೀಣ ಭಾಗದ ನಿರೀಕ್ಷೆಗೆ ಹಿನ್ನಡೆ

ಸರಕಾರ ಪರಿಷ್ಕೃತ ಮಾರ್ಗಸೂಚಿಗಳನ್ನು ಯಾವಾಗ ಅಂತಿಮಗೊಳಿಸುತ್ತದೆ? ಯೋಜನೆ ಮತ್ತೆ ಯಾವಾಗ ಆರಂಭವಾಗುತ್ತದೆ ಎಂಬ ಪ್ರಶ್ನೆಗಳು ಈಗ ಎದುರಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಸಾಕಷ್ಟು ಶಾಲೆಗಳು ಹಾಗೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಗ್ರಂಥಾಲಯ ಸೌಲಭ್ಯ ಇಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ಯುವಕರು ಹಾಗೂ ವಿದ್ಯಾರ್ಥಿಗಳು ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗೆ ನಿರಂತರ ಒತ್ತಾಯಿಸುತ್ತ ಬಂದಿದ್ದರು. ಯೋಜನೆ ಸ್ಥಗಿತಗೊಳಿಸಿರುವುದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ನಿರಾಸೆ ಮೂಡಿದೆ. ಸ್ಥಗಿತಗೊಳಿಸಿರುವ ಗ್ರಾಮೀಣ ಗ್ರಂಥಾಲಯಗಳನ್ನು ರಾಜ್ಯ ಸರಕಾರ ಶೀಘ್ರದಲ್ಲಿ ಪ್ರಾರಂಭಿಸಬೇಕು ಎಂದು ಗ್ರಾಮೀಣ ಗ್ರಂಥಾಲಯಗಳ ಮೇಲ್ವಿಚಾರಕರ ಸಂಘದ ಹಾವೇರಿಯ ಅಧ್ಯಕ್ಷ ರವಿ ಪಾಟೀಲ ಒತ್ತಾಯಿಸಿದ್ದಾರೆ.

ಡಿಜಿಟಲ್ ಇಂಡಿಯಾ ಪರಿಕಲ್ಪನೆ ಗ್ರಾಮ ಮಟ್ಟಕ್ಕೆ ತಲುಪಬೇಕಾದರೆ ಗ್ರಾಮೀಣ ಗ್ರಂಥಾಲಯ ಯೋಜನೆ ಮಹತ್ವದ್ದಾಗಿದೆ. ರಾಜ್ಯ ಸರಕಾರ ಸ್ಥಗಿತಗೊಳಿಸಿರುವ ಯೋಜನೆಯನ್ನು ಶೀಘ್ರ ಜಾರಿಗೊಳಿಸಬೇಕು.
-ಬಸವರಾಜ ಬೊಮ್ಮಾಯಿ ಹಾವೇರಿ ಸಂಸದ

ತುಂಗಭದ್ರಾ ಡ್ಯಾಂನಲ್ಲಿ ತಾಂತ್ರಿಕ ಅಡಚಣೆಯಿಲ್ಲದೆ ನೀರಿನ ನಿರ್ವಹಣೆ ನಿರೀಕ್ಷೆ

ಕ್ರಸ್ಟ್‌ಗೇಟ್‌ಗಳಿಗೆ ಹೊಸ ಚೈನ್ ಅಳವಡಿಕೆ ಶುರು

■ **ವಿಕ ಸುದ್ದಿಲೋಕ** ಹೊಸಪೇಟೆ (ವಿಜಯನಗರ)

ತುಂಗಭದ್ರಾ ಜಲಾಶಯಕ್ಕೆ ಅಳವಡಿಸಿದ ಎಲ್ಲ 33 ಹೊಸ ಕ್ರಸ್ಟ್‌ಗೇಟ್‌ಗಳ ಸುಗಮ ಕಾರ್ಯಾಚರಣೆಗೆ ಪೂರಕವಾದ ಹೊಸ ಚೈನ್ ಅಳವಡಿಕೆ ಕಾಮಗಾರಿ ಗುರುವಾರದಿಂದ ಪ್ರಾರಂಭವಾಗಿದೆ.

ಒಟ್ಟು 5 ಅತ್ಯಾಧುನಿಕ ಗುಣಮಟ್ಟದ ಚೈನ್‌ಗಳು ಜಲಾಶಯದ ಆವರಣಕ್ಕೆ ಈಗಾಗಲೇ ಬಂದು ತಲುಪಿವೆ. ತಾಂತ್ರಿಕ ತಂಡವು ಈ ಹೊಸ ಚೈನ್‌ಗಳ ಸಾಮರ್ಥ್ಯ ಮತ್ತು ಗುಣಮಟ್ಟವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ 33ನೇ ಗೇಟ್‌ನಿಂದ ಅಳವಡಿಕೆ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಹಿಂದಿನ ಅನಾಹುತಗಳನ್ನು ಗಮನದಲ್ಲಿಟ್ಟುಕೊಂಡು ದಶಕಗಳಷ್ಟು ಹಳೆಯದಾದ ಮತ್ತು ತುಕ್ಕು ಹಿಡಿದಿದ್ದ ಎಲ್ಲ ಚೈನ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗುತ್ತಿದೆ. ಹೊಸದಾಗಿ

ಅಳವಡಿಸಲಾಗುತ್ತಿರುವ ಚೈನ್‌ಗಳು ಜಲಾಶಯದ ಗೇಟ್‌ಗಳ ಎತ್ತುವಿಕೆ ಮತ್ತು ಇಳಿಸುವಿಕೆಯನ್ನು ಅತ್ಯಂತ ಸುಲಭ ಹಾಗೂ ಸುರಕ್ಷಿತಗೊಳಿಸಲಿವೆ.

33ನೇ ಗೇಟ್‌ನಲ್ಲಿ ನಡೆಯುತ್ತಿರುವ ಈ ಯಾಂತ್ರಿಕ ಕೆಲಸದ ವೇಳೆ ನುರಿತ ಎಂಜಿನಿಯರ್‌ಗಳ ತಂಡ ಸ್ಥಳದಲ್ಲೇ ಮೊಕ್ಕಾಂ ಹೂಡಿದೆ. ಬೃಹತ್ ಗೇರ್ ಚಕ್ರಗಳೊಂದಿಗೆ ಈ ಹೊಸ ಚೈನ್ ಜೋಡಿಸುವ ಪ್ರಕ್ರಿಯೆಯು ಅತ್ಯಂತ ಜಾಗರೂಕತೆಯಿಂದ ನಡೆಯುತ್ತಿದೆ. ಈ ಆಧುನೀಕರಣ ಕಾರ್ಯದಿಂದಾಗಿ ಮುಂದಿನ ಮಳೆಗಾಲದಲ್ಲಿ ಯಾವುದೇ ತಾಂತ್ರಿಕ ಅಡಚಣೆಗಳಿಲ್ಲದೆ ನೀರಿನ ನಿರ್ವಹಣೆ ಸಾಧ್ಯವಾಗಲಿದೆ. ಅಚ್ಚುಕಟ್ಟು ಪ್ರದೇಶದ ರೈತರ ನೀರಿನ ನಿರೀಕ್ಷೆಯನ್ನೂ ಗರಿಗೆದರುವಂತೆ ಮಾಡಿದೆ.

ಬಿಸಿಲಿನಿಂದ ರಕ್ಷಣೆ | ನೀರಿನ ಬಳಕೆ ಪ್ರಮಾಣ ತಗ್ಗಲಿದೆ | ಭೂಮಿ ಫಲವತ್ತತೆಗೂ ಅನುಕೂಲ

ಸುಡುವ ಅಡಕೆ ತೋಟಕ್ಕೆ ತಂಪು ತಡೆಗಾಳಿ

■ **ಯಳನಾಡು ಮಂಜು** ದಾವಣಗೆರೆ
manjunath.lokanath@timesofindia.com

ಅಡಕೆ ನಾಡಾಗಿ ಬೆಳೆಯುತ್ತಿರುವ ದಾವಣಗೆರೆಯಲ್ಲಿ ಬಿರು ಬೇಸಿಗೆಯ ಈ ದಿನಗಳಲ್ಲಿ ಅಡಕೆ ತೋಟಗಳು ನಲುಗುತ್ತಿವೆ. ಜಿಲ್ಲೆಯ ಅನೇಕ ಕಡೆ ಅದರಲ್ಲೂ ಬಯಲುಸೀಮೆ ಜಗಳೂರು ಮತ್ತು ಚನ್ನಗಿರಿ ಭಾಗದಲ್ಲಿ ಬಿಸಿಲ ತಾಪಕ್ಕೆ ತೇವಾಂಶ ಬೇಗ ಆರುತ್ತಿರುವುದರಿಂದ, ಅಡಕೆಗೆ ಹಾನಿ ಆಗುತ್ತಿರುವ ಬಗ್ಗೆ ವರದಿಯಾಗುತ್ತಿದೆ.

ಬಿಸಿಲ ಬೇಗೆಯಿಂದ ದಿನೇದಿನೆ ಪರಿಸ್ಥಿತಿ ಬಿಗಡಾಯಿಸುತ್ತಿದ್ದು, ಅಡಕೆ ತೋಟಗಳಿಗೆ ಹಾನಿ ಆಗುತ್ತಿರುವುದರಿಂದ ಬಹಳಷ್ಟು ರೈತರು ತಲೆ ಮೇಲೆ ಕೈ ಹೊತ್ತಿದ್ದಾರೆ. ಆದರೆ, ಇಂತಹ ವಿಷಮ ಪರಿಸ್ಥಿತಿಯಲ್ಲೂ ಅನೇಕ ಅಡಕೆ ತೋಟಗಳು ಹೆಚ್ಚಿನ ಹಾನಿ ಆಗದೆ ಹಸಿರು ಕಾಯ್ದುಕೊಂಡಿರುವುದು 'ತಡೆಗಾಳಿ' ನಿರ್ಮಾಣದಿಂದ ಎಂದು ವರದಿಯೊಂದು ಹೇಳುತ್ತಿದೆ. ಹಾಗಾಗಿ, ರೈತರು ತಮ್ಮ ಅಡಕೆ ತೋಟಗಳಿಗೆ ತಡೆಗಾಳಿ ನಿರ್ಮಿಸಬೇಕೆಂದು ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸಲಹೆ ನೀಡಿದ್ದಾರೆ.

ಏನಿದು ತಡೆಗಾಳಿ ?

ಅಡಕೆ ತೋಟದ ಸುತ್ತಲೂ ಗಿಡ, ಮರಗಳನ್ನು ಬೆಳೆಸಿ 'ತಡೆಗಾಳಿ' ಮಾಡಬಹುದು. ಅದರಲ್ಲೂ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಅರಣ್ಯ ಮತ್ತು ಹಣ್ಣಿನ ಗಿಡಗಳನ್ನು ಬೆಳೆಸಿದರೆ ಹೊರಗಿನ ತಾಪಮಾನಕ್ಕಿಂತ 4 ರಿಂದ 5 ಡಿಗ್ರಿ ಅಡಕೆ ತೋಟದಲ್ಲಿ ಉಷ್ಣಾಂಶ ಕಡಿಮೆ ಆಗಲಿದೆ. ಇದರಿಂದ ನೀರಿನ ಬಳಕೆ ಪ್ರಮಾಣ ಕಡಿಮೆ ಇರಲಿದೆ ಮತ್ತು ಭೂಮಿಯಲ್ಲಿ ತೇವಾಂಶ ಬೇಗ ಆರುವುದಿಲ್ಲ, ಪ್ರಮುಖವಾಗಿ ಅಡಕೆ ತೋಟಗಳಿಗೆ ಆಗುವ ಹಾನಿಯನ್ನು ತಪ್ಪಿಸಲಿದೆ.

ಅದರಲ್ಲೂ ಬಿರು ಬೇಸಿಗೆಯ ದಿನಗಳಲ್ಲಿ ಈಗ ಅನೇಕ ಕಡೆ ಅಡಕೆ ತೋಟಗಳು ಹಾನಿ ಆಗುತ್ತಿರುವುದು, ಕಾಂಡ ಸುಟ್ಟು ಹೋಗುವುದು, ಎಷ್ಟೇ ನೀರು ಕೊಟ್ಟರೂ ತೇವಾಂಶ ನಿಲ್ಲದಿರುವುದು, ಬಿಸಿಲಿನ ಬೇಗೆಗೆ ಅರಳು ಉದುರುತ್ತಿರುವುದು ಇಂತಹ ಅನೇಕ ಸಮಸ್ಯೆಗಳು ಕಂಡು ಬರುತ್ತಿವೆ. ಈ ಬಾರಿ ಬೇಸಿಗೆಯಲ್ಲಿ ಅಂತರ್ಜಲ ಕಡಿಮೆ ಆಗುವುದರ ಜತೆಗೆ ಬಿಸಿಲಿನ ತಾಪದಿಂದಾಗಿ ಅಡಕೆ ತೋಟಗಳಿಗೆ ಹಾನಿ ಪ್ರಮಾಣ ಹೆಚ್ಚಿದೆ. ಬೇಸಿಗೆಯಲ್ಲಿ ವಾಡಿಕೆ ಮಳೆ ಸುರಿಯದೆ ಇರುವುದರಿಂದ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋಗಿದೆ.

ಚನ್ನಗಿರಿ ತಾಲೂಕಿನ ಉಬ್ರಾಣಿ ಹೋಬಳಿ ಮತ್ತು ಕೆರೆಗಳ ತುಂಬಿಸುವ ಯೋಜನೆ ನಂತರ ಈಗತಾನೇ ಅಡಕೆ ಬೆಳೆಯತ್ತ ಚಿತ್ತ ಹರಿಸಿರುವ ಜಗಳೂರು ತಾಲೂಕಲ್ಲಿ ಹಾನಿ ಪ್ರಮಾಣ ಹೆಚ್ಚಿದೆ.



ಹರಿಹರ ತಾಲೂಕು ರೈತ ರಾಮಾಂಜನೇಯ ತೋಟದಲ್ಲಿ ನಿರ್ಮಿಸಿರುವ ಬಿಸಿ ಗಾಳಿ ತಡೆ.

ಏನೇನೂ ಗಿಡ ಬೆಳೆಯಬಹುದು

ತೆಂಗು, ಸಿಲ್ವರ್, ಮಹಾಗನಿ, ಹೆಬ್ಬೇವು, ಚೊಗಚೆ ಗಿಡ ಸೇರಿ ಬಿಸಿಗಾಳಿ ತಡೆ ನೀಡುವ ಅರಣ್ಯ ಗಿಡಗಳ ಬೆಳೆದರೆ, ನಾಲ್ಕೂವರೆ ಅಡಿಗೆ ಒಂದು ಅಡಕೆ ಗಿಡ ಬೆಳೆಯಬಹುದು.

ಏನು ಉಪಯೋಗ ?

- ಅಡಕೆ ಕಾಂಡ ಸುಡುವುದಕ್ಕೆ ತಡೆ
- ಬೇಸಿಗೆ ಬಿಸಿ ಗಾಳಿಗೆ ತಡೆ, ನೀರಿನ ಬಳಕೆ ಪ್ರಮಾಣ ತಗ್ಗಲಿದೆ
- ತೇವಾಂಶ ಬೇಗ ಆರುವುದಿಲ್ಲ
- ತೋಟಗಳಿಗೆ ಹೆಚ್ಚಿನ ಹಾನಿ ಆಗುವುದಿಲ್ಲ
- ಹೊರಗಿನ ಉಷ್ಣಾಂಶಕ್ಕಿಂತ ನಾಲ್ಕೈದು ಡಿಗ್ರಿ ಕಡಿಮೆ ಇರಲಿದೆ

ಬಿಸಿ ಗಾಳಿ ತಡೆ ಮಾಡಲು ಅಳಿಲು ಕಾಟ ಎಂದು ರೈತರು ಹಿಂದೇಟು ಹಾಕುತ್ತಾರೆ. ಆದರೆ ಬಿಸಿ ಗಾಳಿ ತಡೆ ಮಾಡುವಾಗ ಗಿಡಗಳ ಮಧ್ಯೆ ಒಂದಷ್ಟು ಹಣ್ಣಿನ ಗಿಡ ಬೆಳೆಸಿದರೆ ಅಳಿಲುಗಳು ಅಡಕೆಗೆ ತೊಂದರೆ ಕೊಡುವುದಿಲ್ಲ.
-ರಾಘವೇಂದ್ರ ಪ್ರಸಾದ್ ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ

ತೇಗ ಕಡಿಮೆ ಮಾಡಿ

ಬಿಸಿ ಗಾಳಿ ತಡೆ ಮಾಡುವಾಗ ತೇಗದ ಗಿಡ ಬೆಳೆಸುವುದ ಕಡಿಮೆ ಮಾಡಿ. ಈ ಮರದ ಬೇರಿನಿಂದ ಆಂಟಿಗೊನೆಸ್ಟಿಕ್ ಪ್ರಾಪರ್ಟಿ ಎಂಬ ವಸ್ತು ಬಿಡುಗಡೆ ಆಗಲಿದೆ. ಇದು ಕಳೆ ನಾಶಕದ ರೀತಿ ಕೆಲಸ ಮಾಡುವುದರಿಂದ ಹತ್ತು ಅಡಿ ಸುತ್ತ ಯಾವುದೇ ಬೆಳೆ ಬೆಳೆಯುವುದಿಲ್ಲ.
-ಬಸವನಗೌಡ ಕೃಷಿ ವಿಜ್ಞಾನಿ, ಕೆವಿಕೆ

ಹಾಗಾಗಿ ರೈತರು ಈ ಕೂಡಲೇ ಬಿಸಿ ಗಾಳಿ ತಡೆ ನಿರ್ಮಿಸಿಕೊಳ್ಳುವುದು ಮತ್ತು ಒಣ, ಹಸಿರು ಹೊದಿಕೆ ಮಾಡುವುದರಿಂದ ಬೇಸಿಗೆಯಲ್ಲಿ ಅಡಕೆ ತೋಟಗಳಿಗೆ ಹೆಚ್ಚಿನ ಹಾನಿ ಆಗದಂತೆ ರಕ್ಷಿಸಿಕೊಳ್ಳಬಹುದು ಎಂದು ತೋಟಗಾರಿಕೆ ವಿಜ್ಞಾನಿಗಳು ಸಲಹೆ ನೀಡಿದ್ದಾರೆ.

ಕನ್ನಡ ಮಾತನಾಡಿದರೆ ದಂಡ ಹಾಕುವುದು ಬೇಡ

■ **ವಿಕ ಸುದ್ದಿಲೋಕ** ಬೆಂಗಳೂರು

ಕನ್ನಡದಲ್ಲಿ ಮಾತನಾಡುವ ವಿದ್ಯಾರ್ಥಿಗಳಿಗೆ ದಂಡ ವಿಧಿಸುವ ಶಿಕ್ಷಣ ಸಂಸ್ಥೆಗಳ ಕ್ರಮ ಕಾನೂನು ಬಾಹಿರವಾಗಿದ್ದು, ಈ ಕ್ರಮವನ್ನು ತಕ್ಷಣದಿಂದಲೇ ಕೈಬಿಡುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.



ಈ ಕುರಿತು ಶಿಕ್ಷಣ ಸಚಿವರಿಗೆ ಪತ್ರ ಬರೆದಿರುವ ಅವರು, ಈಚೆಗೆ ರಾಜ್ಯದ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಮಾತೃಭಾಷೆ ಕನ್ನಡದಲ್ಲಿ ಮಾತನಾಡಿದರೆ ಶಾಲಾ ಆಡಳಿತ ಮಂಡಳಿಗಳು ದಂಡ ವಿಧಿಸುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿದೆ. ಈ ಕ್ರಮವು ಶಿಕ್ಷಣ ವಿರೋಧಿಯಲ್ಲದೆ, ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯೂ ಆಗಿದೆ. 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022'ರ ಪ್ರಕಾರ ಕರ್ನಾಟಕದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಮತ್ತು ಪ್ರಸಾರಕ್ಕೆ ಪೂರಕ ವಾತಾವರಣವಿರಬೇಕು. ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಹಿಂದೆ ಬೆಂಗಳೂರಿನ ಸಿಂಧಿ ಶಾಲೆಯಂತಹ ಪ್ರಕರಣಗಳಲ್ಲಿ ಪ್ರಾಧಿಕಾರವು ಮಧ್ಯಪ್ರವೇಶಿಸಿ ತನಿಖೆ ನಡೆಸಿ, ಸಮಸ್ಯೆಯನ್ನು ಬಗೆಹರಿಸಿದೆ. ಇಂತಹ ಘಟನೆಗಳು ಮರುಕಳಿಸಬಾರದು. ರಾಜ್ಯದ ಎಲ್ಲಾ ಇಂಗ್ಲಿಷ್ ಮಾಧ್ಯಮ ಶಾಲೆಗಳೂ ಸೇರಿದಂತೆ ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಈ ಕೂಡಲೇ ಜಾರಿಗೆ ಬರುವಂತೆ ಕನ್ನಡ ಮಾತನಾಡಿದ ವಿದ್ಯಾರ್ಥಿಗಳಿಗೆ ದಂಡ ವಿಧಿಸುವ ಅಮಾನವೀಯ ಪದ್ಧತಿಯನ್ನು ಕೈಬಿಡಬೇಕು. ಈ ಬಗ್ಗೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೂಲಕ ಎಲ್ಲಾ ಶಾಲೆಗಳಿಗೆ ಸುತ್ತೋಲೆ ಹೊರಡಿಸಲು ನಿರ್ದೇಶನ ನೀಡುವಂತೆ ಸಚಿವರನ್ನು ಕೋರಿದ್ದಾರೆ.

ಕನ್ನಡವನ್ನು ಅಪರಾಧದಂತೆ ಕಾಣುವ ಯಾವುದೇ ಶಾಲೆಯ ವಿರುದ್ಧ ಕಾನೂನು ರೀತಿಯ ಕಠಿಣ ಕ್ರಮ ಜರುಗಿಸಲು ಪ್ರಾಧಿಕಾರವು ಶಿಫಾರಸು ಮಾಡುತ್ತದೆ ಎಂದು ಅವರು ತಿಳಿಸಿದ್ದಾರೆ.

ಉದ್ಯಮಿ ನೀಲಣ್ಣವರ್ ಕಚೇರಿ ಮೇಲೆ ದಾಳಿ

ಸಾರ್ವಜನಿಕರಿಗೆ ಅಧಿಕ ಬಡ್ಡಿ ಭರವಸೆ ನೀಡಿ ಹಣ ಸಂಗ್ರಹಿಸಿದ ಆರೋಪ

■ **ವಿಕ ಸುದ್ದಿಲೋಕ** ಬೆಳಗಾವಿ

ಸಾರ್ವಜನಿಕರು ಹಾಗೂ ಮಾಜಿ ಸೈನಿಕರಿಗೆ ಹೆಚ್ಚಿನ ಬಡ್ಡಿ ಭರವಸೆ ನೀಡಿ ಸಾವಿರಾರು ಕೋಟಿ ರೂಪಾಯಿ ಹಣ ಸಂಗ್ರಹಿಸಿದ ಶಂಕೆ ಹಿನ್ನೆಲೆಯಲ್ಲಿ ಉದ್ಯಮಿ ಶಿವಾನಂದ ನೀಲಣ್ಣವರ ಅವರಿಗೆ ಸೇರಿದ ಶಿವಂ ಅಸೋಸಿಯೇಟ್ಸ್ ಕಚೇರಿಗಳ ಮೇಲೆ ಗುರುವಾರ ತಹಸೀಲ್ದಾರ ಹಾಗೂ ಉಪವಿಭಾಗಾಧಿಕಾರಿ ನೇತೃತ್ವದ ತಂಡ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಿದೆ.

ಪೊಲೀಸ್ ಭದ್ರತೆಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ಅಧಿಕಾರಿಗಳು ಹಣಕಾಸು ವ್ಯವಹಾರ, ಹೂಡಿಕೆ ಹಾಗೂ ಆರ್ಥಿಕ ಸಂಪನ್ಮೂಲ ಸಂಗ್ರಹಕ್ಕೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

4 ಸಾವಿರ ಕೋಟಿ ರೂ. ಸಂಗ್ರಹ?

ಶಿವಂ ಅಸೋಸಿಯೇಟ್ಸ್‌ನಲ್ಲಿ 40ರಿಂದ 45 ಸಾವಿರ ಜನ ಹೂಡಿಕೆ ಮಾಡಿದ್ದು, ಒಟ್ಟು 4 ಸಾವಿರ ಕೋಟಿ ರೂಪಾಯಿಗೂ ಅಧಿಕ ಹಣ ಸಂಗ್ರಹಿಸಿದ ಬಗ್ಗೆ ಮಾಹಿತಿ ಸಿಕ್ಕಿದೆ ಎನ್ನಲಾಗಿದೆ.

ಭಾಷಣ ವೈರಲ್: ಇತ್ತೀಚೆಗೆ ಶಿವಾನಂದ ನೀಲಣ್ಣವರ ಅವರ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಕಡೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ "ನಮ್ಮ ಬಳಿ 15 ಸಾವಿರ ಬಂದೂಕುಗಳಿವೆ, ದೊಡ್ಡ ಸಾಮ್ರಾಜ್ಯ ಕಟ್ಟಿದ್ದೇನೆ. ನಾನು ಯಾರಿಗೂ ಹೆದರಲ್ಲ, 2028ರಲ್ಲಿ 224 ಸ್ಥಾನ ಗೆದ್ದು ಸಿಎಂ ಆಗುತ್ತೇನೆ," ಎಂದು ಅವರು ಹೇಳಿದ್ದು ಚರ್ಚೆಗೆ ಕಾರಣವಾಗಿತ್ತು.

ಕರ್ನಾಟಕ ಠೇವಣಿದಾರರ ಹಿತಾಸಕ್ತಿ ರಕ್ಷಣಾ ಕಾಯಿದೆ, 2004ರ ಸೆಕ್ಷನ್ 3(1), 3(2) ಮತ್ತು 4ರಡಿ ಠೇವಣಿ ಸಂಗ್ರಹ, ಚರಾಸ್ತಿ, ಸ್ಥಿರಾಸ್ತಿ ಹಾಗೂ ಬ್ಯಾಂಕ್ ವ್ಯವಹಾರ ಸೇರಿದಂತೆ ಇನ್ನಿತರ ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಬೆಳಗಾವಿ ಉಪ ವಿಭಾಗಾಧಿಕಾರಿ ನೇತೃತ್ವದಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.
-ಮೊಹಮ್ಮದ್ ರೋಷನ್ ಜಿಲ್ಲಾಧಿಕಾರಿ

ಈ ನಡುವೆ ಮೇ 17ರಂದು 25 ಸಾವಿರ ಜನರನ್ನು ಸೇರಿಸಿ 'ಸ್ವಚ್ಛ ಬೆಳಗಾವಿ' ಅಭಿಯಾನ ಹಾಗೂ ಸರದಾರ್ಸ್ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಗೆ ಶಿವಾನಂದ ನೀಲಣ್ಣವರ ಸಿದ್ಧತೆ ನಡೆಸಿದ್ದರು. ಈ ಕಾರ್ಯಕ್ರಮಕ್ಕೆ ಸಂಬಂಧಿಸಿ ನಗರದಲ್ಲಿ ಅಳವಡಿಸಿದ್ದ ಕಟೌಟ್‌ಗಳನ್ನು ನಿಯಮಬಾಹಿರ ಎಂದು ಮಹಾನಗರ ಪಾಲಿಕೆ ತೆರವುಗೊಳಿಸಿದೆ.

ಪ್ರತಿಭಟನೆ ಎಚ್ಚರಿಕೆ

■ **ವಿಕ ಸುದ್ದಿಲೋಕ** ಶಿರಸಿ (ಉತ್ತರ ಕನ್ನಡ)

ದಶಕದಿಂದ ಸೋರುತ್ತಿರುವ ಬನವಾಸಿ ಮಧುಕೇಶ್ವರ ದೇವಸ್ಥಾನ ದುರಸ್ತಿ ಕಾರ್ಯ ಮಾಡಿ ಸೋರುವಿಕೆ ತಡೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಿಫಲವಾಗಿದೆ ಎಂದು ಬನವಾಸಿ ನೂತನ ತಾಲೂಕು ರಚನೆ ಹೋರಾಟ ಸಮಿತಿ ಆರೋಪಿಸಿದೆ. ದುರಸ್ತಿ ವಿಷಯದಲ್ಲಿ ಸುಳ್ಳು ಹೇಳಿದರೆ ಈ ಬಾರಿ ಅರೆಬೆತ್ತಲೆ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಸಿದೆ.

ಈ ಕುರಿತು ಹೋರಾಟ ಸಮಿತಿ ಅಧ್ಯಕ್ಷ ಉದಯ ಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್. ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ ವಡೆಯರ್ ಜಂಟಿ ಹೇಳಿಕೆಯಲ್ಲಿ ನೀಡಿದ್ದು, "ಪ್ರತಿ ಬಾರಿ ಹೋರಾಟಕ್ಕೆ ನಾವು ತಯಾರಿ ನಡೆಸಿದಾಗ ಏನಾದರೂ ಒಂದು ಸಬೂಬು ಹೇಳುವುದನ್ನು ಇಲಾಖೆ ಬಿಡಬೇಕು," ಎಂದು ಆಕ್ಷೇಪಿಸಿದ್ದಾರೆ.

ಬದುಕಿದ್ದಾಗಲೇ ಅಂತ್ಯಕ್ರಿಯೆ ನೆರವೇರಿಸಿಕೊಂಡ ರೈತ!

ಭೋಪಾಲ್: ಮನ್ ಕೀ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೆಸರು ಪ್ರಸ್ತಾಪಿಸಿದ್ದ ಮಧ್ಯಪ್ರದೇಶದ ರೈತ ಬದುಕಿರುವಾಗಲೇ ತಮ್ಮದೇ ಅಂತ್ಯಕ್ರಿಯೆಯ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿಕೊಂಡು ಗಮನ ಸೆಳೆದಿದ್ದಾರೆ.



ಸತ್ನಂ ಜಿಲ್ಲೆಯ ಅತರ್ವೇದಿ ಗ್ರಾಮದ ರೈತ ರಾಮಲೋತನ್ ಕುಶ್ವಾಹ ಅವರು ತಮ್ಮ ದೇಹವನ್ನು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ದಾನ ಮಾಡಿದ್ದಾರೆ. ದೇಹದಾನದ ಬಗ್ಗೆ ಜಾಗೃತಿ ಮೂಡಿಸಲು ಬದುಕಿದ್ದಾಗಲೇ ತಮ್ಮ ಅಂತ್ಯಕ್ರಿಯೆಯನ್ನು ತಾವೇ ನೆರವೇರಿಸಿಕೊಳ್ಳುವ ಮೂಲಕ ಸಾವಿನ ಬಳಿಕ ಮೃತದೇಹವನ್ನು ಸುಡದೇ ವೈದ್ಯಕೀಯ ವಿದ್ಯಾರ್ಥಿಗಳ ಸಂಶೋಧನೆಗೆ ದಾನ ಮಾಡುವಂತೆ ಸಂದೇಶ ನೀಡಿದ್ದಾರೆ.

ಇತ್ತೀಚೆಗೆ ಪ್ರಯಾಗರಾಜ್‌ಗೆ ತೆರಳಿದ್ದ ಕುಶ್ವಾಹ ಅವರು ಪಿಂಡ ದಾನ ಆಚರಣೆ ನಡೆಸಿದ್ದರು. ಬಳಿಕ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ವಿಧಿವಿಧಾನ ಪೂರೈಸಿದ್ದಾರೆ. ಪ್ರಧಾನಿ ಮೋದಿ ಅವರು ತಮ್ಮ ಮನ್ ಕೀ ಬಾತ್‌ನಲ್ಲಿ ರಾಮಲೋತನ್ ಕುಶ್ವಾಹ ಅವರ ಔಷಧ ಗಿಡಮೂಲಿಕೆ ಜ್ಞಾನದ ಬಗ್ಗೆ ಪ್ರಸ್ತಾಪಿಸಿದ್ದರು.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 134
ಶುಕ್ರವಾರ,15 ಮೇ 2026 | ಪುಟಗಳು: 12+10 | ಬೆಲೆ: ₹ 5.00
c
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ವಿಜಯ ಕರ್ನಾಟಕ

ಜಡ್ಜ್‌ಗೆ ಸಡ್ಡು: ಕೇಜ್ರಿವಾಲ್ ವಿರುದ್ಧ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಿದ ದಿಲ್ಲಿ ಹೈಕೋರ್ಟ್

ಬೆಂಗಳೂರು ದರ

₹14,880 ↑	₹16,233 ↑	₹3,00,000 ↓
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ತ.ನಾಡು ಸರಕಾರಿ ನೌಕರರಿಗೆ ಶೇ.2ರಷ್ಟು ತುಟ್ಟಿ ಭತ್ಯೆ ಹೆಚ್ಚಿಸಿದ ಸಿಎಂ ವಿಜಯ್

ವಿಕ ಹೊಂಗಿರಣ

ಜೀವನದ ಸಮಸ್ಯೆಗಳಿಗೆ ನಮ್ಮ ಮಾತಿನ ಧ್ವನಿ, ಧಾಟಿ ಕಾರಣ. ಏನು ಹೇಳುತ್ತೇವೆ ಎಂಬುದಕ್ಕಿಂತ ಹೇಗೆ ಹೇಳುತ್ತೇವೆ ಎನ್ನುವುದು ಹೆಚ್ಚು ಮುಖ್ಯ.

SBI
The banker to every Indian
ತ್ವರಿತ ಬ್ಯಾಂಕಿಂಗ್ ಪರಿಹಾರಗಳಿಗಾಗಿ ವಾಟ್ಸ್‌ಪ್‌ನಲ್ಲಿ Hi ಎಂದು ಹೇಳಿ
ಸೇವೆಗಳು
- ನಿಮ್ಮ ಬ್ಯಾಲೆನ್ಸ್, ಮಿನಿ ಸ್ಟೇಟ್‌ಮೆಂಟ್‌ಗಳನ್ನು ಪರಿಶೀಲಿಸಿ
- ಖಾತೆ ಸ್ಟೇಟ್‌ಮೆಂಟ್, ಪಿಂಚಣಿ ಸ್ಲಿಪ್ ಇತ್ಯಾದಿಗಳನ್ನು ಡೌನ್ಲೋಡ್ ಮಾಡಿ.
- ನಿಮ್ಮ ಕೆವೈಸಿ ಅನ್ನು ಪರಿಷ್ಕರಿಸಿ
- ಉತ್ಪನ್ನ ಮಾಹಿತಿಯನ್ನು ಮತ್ತು ಇನ್ನೂ ಹೆಚ್ಚಿನದನ್ನು ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 | 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹140/- ಕೋಲಾರ 140/- ತುಮಕೂರು 140/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹180/- ಕೋಲಾರ 180/- ತುಮಕೂರು 180/-
ವಿಥ್ ಸ್ಕಿನ್ ₹254/- ಕೋಲಾರ 254/- ತುಮಕೂರು 254/-
ವಿಥೌಟ್ ಸ್ಕಿನ್ ₹290/- ಕೋಲಾರ 290/- ತುಮಕೂರು 290/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಕರ್ನಾಟಕ ಸೇರಿ 16 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತಪಟ್ಟಿ ಶುದ್ಧೀಕರಣ
ಮೂರನೇ ಹಂತದ ಮತಪಟ್ಟಿ ಪರಿಷ್ಕರಣೆ ಘೋಷಿಸಿದ ಚುನಾವಣಾ ಆಯೋಗ

ಮೇ 30ರಿಂದ ಎಸ್‌ಐಆರ್

ಹೊಸದಿಲ್ಲಿ: ದೇಶಾದ್ಯಂತ ಸದ್ದು ಮಾಡಿದ್ದ ವಿಶೇಷ ಸಮಗ್ರ ಮತಪಟ್ಟಿ ಪರಿಷ್ಕರಣೆಯ (ಎಸ್‌ಐಆರ್) ಮೂರನೇ ಹಂತವನ್ನು ಕೇಂದ್ರ ಚುನಾವಣಾ ಆಯೋಗ ಗುರುವಾರ ಘೋಷಿಸಿದೆ. ಇದೇ 30 ರಿಂದ ಕರ್ನಾಟಕ ಸೇರಿದಂತೆ 16 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್‌ಗೆ ಚಾಲನೆ ದೊರೆಯಲಿದೆ.

ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಲಡಾಕ್ ಹೊರತುಪಡಿಸಿ ಮೂರನೇ ಹಂತದ ಸಮಗ್ರ ಮತಪಟ್ಟಿ ಪರಿಷ್ಕಣೆ ಕೈಗೆತ್ತಿಕೊಳ್ಳಲಾಗಿದ್ದು, ಮೇ 30ರಿಂದ ಅಕ್ಟೋಬರ್ 14ರವರೆಗೆ ನಡೆಯಲಿದೆ. ಮೂರನೇ ಹಂತದಲ್ಲಿ 3.94 ಲಕ್ಷ ಬೂತ್‌ಗಳಲ್ಲಿ ಮನೆ ಮನೆ ಪರಿಷ್ಕರಣೆ ನಡೆಯಲಿದೆ. 3.42 ಲಕ್ಷ ಬೂತ್ ಮಟ್ಟದ ಅಧಿಕಾರಿಗಳು(ಬಿಎಲ್‌ಒ) ಮನೆ-ಮನೆಗೆ ತೆರಳಿ ಪರಿಷ್ಕರಣೆ (ಗಣತಿ ನಮೂನೆ) ಫಾರಂ ವಿತರಿಸಲಿದ್ದಾರೆ. ಸುಮಾರು 36.73 ಕೋಟಿ ಮತದಾರರ ಹೆಸರು ಪರಿಶೀಲಿಸಲಾಗುತ್ತದೆ. ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟ್‌ಗಳು ಸಹಕಾರ ನೀಡಲಿದ್ದಾರೆ.

ಸ್ಥಳೀಯ ಮಟ್ಟದ ಆಡಳಿತ, ಯಂತ್ರೋಪಕರಣ, ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಗೆ ಪ್ರಸ್ತುತ ನಡೆಯುತ್ತಿರುವ ಜನಗಣತಿಯ ಜತೆ 'ಎಸ್‌ಐಆರ್' ಜೋಡಿಸಲಾಗುವುದು ಎಂದು ಆಯೋಗ ತಿಳಿಸಿದೆ.

''ಮತಪಟ್ಟಿ ಶುದ್ಧೀಕರಣ ಉದ್ದೇಶದ 'ಎಎಸ್ ಐಆರ್' ಪ್ರಕ್ರಿಯೆಯಲ್ಲಿ ಎಲ್ಲಾ ಮತದಾರರು ಸ್ವಯಂ ಪ್ರೇರಿತರಾಗಿ ಭಾಗಿಯಾಗಬೇಕು. ಗಣತಿ ನಮೂನೆಯ ಅರ್ಜಿಯನ್ನು ಭರ್ತಿ ಮಾಡಬೇಕು. ಅಧಿಕಾರಿಗಳು ಕೇಳುವ ಮಾಹಿತಿ, ದಾಖಲೆ ನೀಡಿ ಸಹಕರಿಸಬೇಕು. ಅರ್ಹ ಮತದಾರರ ಹೆಸರು ಉಳಿಸಿ, ಅನರ್ಹರ ಹೆಸರು ತೆಗೆಯಲಾಗುವುದು,'' ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿದ್ದಾರೆ. »06



AI ಚಿತ್ರ

ರಾಜ್ಯದಲ್ಲಿ ಪರಿಷ್ಕರಣೆ ಪ್ರಕ್ರಿಯೆ

- ಜೂನ್ 26 ರಿಂದ 29ರವರೆಗೆ ಅಧಿಕಾರಿಗಳಿಗೆ ತರಬೇತಿ
- ಜೂನ್ 30 ರಿಂದ ಜುಲೈ 29ರ ವರೆಗೆ ಮನೆಮನೆ ಭೇಟಿ
- ಜುಲೈ 1ರ ವರೆಗೆ ಮತಪಟ್ಟಿಯಲ್ಲಿದ್ದ ಹೆಸರು ಪರಿಗಣನೆ
- ಆಗಸ್ಟ್ 5ಕ್ಕೆ ಪರಿಷ್ಕೃತ ಕರಡು ಮತದಾರರ ಪಟ್ಟಿ ಪ್ರಕಟ
- ಆಗಸ್ಟ್ 5ರಿಂದ ಅಕ್ಟೋಬರ್ 3ರ ವರೆಗೆ ದೂರು ಸಲ್ಲಿಕೆ
- ಅಕ್ಟೋಬರ್ 7ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಣೆ

ಕರ್ನಾಟಕದಲ್ಲಿ 5.55 ಕೋಟಿ ಮತದಾರರು

ಮೂರನೇ ಹಂತದ ಪರಿಷ್ಕರಣೆಯ ರಾಜ್ಯಗಳ ಪೈಕಿ ಮಹಾರಾಷ್ಟ್ರದಲ್ಲಿ ಅತ್ಯಧಿಕ 9.86 ಕೋಟಿ ಮತದಾರರಿದ್ದು, ಕರ್ನಾಟದಲ್ಲಿ 5.55 ಕೋಟಿ ಮತದಾರರು, ಆಂಧ್ರಪ್ರದೇಶದಲ್ಲಿ 4.16 ಕೋಟಿ, ತೆಲಂಗಾಣದಲ್ಲಿ 3.39 ಕೋಟಿ ಮತದಾರರು ಭಾಗಿಯಾಗಲಿದ್ದಾರೆ.

ರಾಜ್ಯದ ನಡೆ ಕುತೂಹಲ

ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ವಿರೋಧಿಸಿದ್ದ ರಾಜ್ಯ ಸರಕಾರವು ರಾಜ್ಯ ಚುನಾವಣಾ ಆಯೋಗ ವತಿಯಿಂದಲೇ ಸಮಗ್ರವಾಗಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸುವ ಬಗ್ಗೆ ಇತ್ತೀಚೆಗಷ್ಟೇ ಚರ್ಚೆ ನಡೆಸಿತ್ತು. ಪ್ರಗತಿಪರ ಸಂಘಟನೆಗಳ ಪ್ರಮುಖರೊಂದಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸಭೆ ನಡೆಸಿ ಈ ಬಗ್ಗೆ ಚರ್ಚಿಸಿದ್ದರು. ಪ್ರತಿ ಪಂಚಾಯತ್ ಮಟ್ಟದಲ್ಲಿ ಬಿಎಲ್‌ಒಗಳ ಮೂಲಕ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಮತದಾರರ ಪಟ್ಟಿಯಿಂದ ಕೈಬಿಡುವ ಹಾಗೂ ಸೇರ್ಪಡೆ ಮಾಡುವ ಹೆಸರುಗಳನ್ನು ಬಹಿರಂಗವಾಗಿ ಪ್ರಕಟಿಸಿ ಪರಿಷ್ಕರಣೆ ಬಗ್ಗೆ ಚರ್ಚೆಯಾಗಿತ್ತು. ಈ ಪ್ರಕ್ರಿಯೆಗೆ ಸುಗ್ರೀವಾಜ್ಞೆಗೂ ಚರ್ಚಿಸಲಾಗಿತ್ತು.

ಕೇಸರಿ ಶಾಲು, ಪೇಟಕ್ಕೆ ಅನುಮತಿ ಇಲ್ಲ

ಮೈಸೂರು: ಧಾರ್ಮಿಕ ಸಂಕೇತಗಳ ಬಳಕೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರದ ಆದೇಶದನ್ವಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಕೇಸರಿ ಶಲ್ಯ, ಕೇಸರಿ ಪೇಟ ಧರಿಸಲು ಅನುಮತಿ ನೀಡುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಈಗಾಗಲೇ ರೂಢಿಯಲ್ಲಿರುವ ಹಿಜಾಬ್, ಪೇಟ, ರುದ್ರಾಕ್ಷಿ ಮತ್ತು ಜನಿವಾರ ಧರಿಸುವ ಪದ್ಧತಿಗಳು ಮುಂದುವರಿಯಲಿವೆ. ಆದರೆ, ಹೊಸರೂಪಕ್ಕೆ ಅವಕಾಶವಿಲ್ಲ. ಮೊದಲಿನಿಂದ ಯಾವ ಪೇಟಗಳನ್ನು ಹಾಕಲಾಗುತ್ತಿದೆಯೋ ಅಂತಹ ಪೇಟಗಳಿಗಷ್ಟೇ ಅವಕಾಶ ನೀಡಲಾಗುವದು,'' ಎಂದು ತಿಳಿಸಿದರು.

ಬುಧವಾರವಷ್ಟೇ ಶಾಲೆಗಳಲ್ಲಿ ವಿದ್ಯಾರ್ಥಿಗಳು ಹಿಜಾಬ್, ಜನಿವಾರ ಧರಿಸಲು ಅನುಮತಿ ನೀಡಿ ಸರಕಾರ ಆದೇಶ ಹೊರಡಿಸಿತ್ತು. ಸರಕಾರದ ಈ ಕ್ರಮವನ್ನು ತೀವ್ರವಾಗಿ ಖಂಡಿಸಿರುವ ಪ್ರತಿ ಪಕ್ಷಗಳು, ಇದನ್ನು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಎಂದು ಟೀಕಿಸಿವೆ. ಅಲ್ಲದೆ, ಕೆಲವು ಹಿಂದೂ ಪರ ಸಂಘಟನೆಗಳು ಶಾಲೆಗಳಲ್ಲಿ ಕೇಸರಿ ಶಲ್ಯ ಧರಿಸುವುದಾಗಿ ಎಚ್ಚರಿಕೆ ನೀಡಿವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಕೇಸರಿ ಶಲ್ಯಕ್ಕೆ ಅನುಮತಿಯಿಲ್ಲ ಎಂದು ಹೇಳಿದರು.

''ಸಚಿವ ಸಂಪುಟ ಪುನರ್‌ರಚನೆ ಮಾಡಬೇಕೆಂಬ ಉದ್ದೇಶವಿದೆ. ಈ ಬಗ್ಗೆ ಹೈಕಮಾಂಡ್ ನಾಯಕರಲ್ಲಿ ಚರ್ಚಿಸಲು ಸಮಯ ಕೊಟ್ಟರೆ ದಿಲ್ಲಿಗೆ ಹೋಗುತ್ತೇನೆ. ನನ್ನನ್ನು ಈಗ ಕರೆದಿಲ್ಲ, ಹೀಗಾಗಿ, ನಾನು ಹೊಸದಿಲ್ಲಿಗೆ ಹೋಗುವುದಿಲ್ಲ,'' ಎಂದು ಹೇಳಿದರು.

ಮೇ 20ಕ್ಕೆ ಔಷಧ ಅಂಗಡಿ ಬಂದ್

ಹೊಸದಿಲ್ಲಿ: ಔಷಧ ಮಾರಾಟಕ್ಕೆ ಆನ್‌ಲೈನ್ ವೇದಿಕೆಗಳಿಗೆ ನೀಡಿರುವ ಅವಕಾಶ ಹಿಂಪಡೆಯುವಂತೆ ಆಗ್ರಹಿಸಿ ಮೇ 20ರಂದು ದೇಶಾದ್ಯಂತ ಔಷಧ ಅಂಗಡಿ ಮಾಲೀಕರು ಮುಷ್ಕರಕ್ಕೆ ಕರೆ ನೀಡಿದ್ದು, ಲಕ್ಷಾಂತರ ಮೆಡಿಕಲ್ ಶಾಪ್‌ಗಳು ಬಂದ್ ಆಗುವ ಸಾಧ್ಯತೆಯಿದೆ. 'ಆಲ್ ಇಂಡಿಯಾ ಆರ್ಗನೈಸೇಶನ್ ಆಫ್ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್' ಕರೆ ನೀಡಿರುವ ಬಂದ್‌ಗೆ ಬೆಂಗಳೂರಿನಲ್ಲೂ 26,000ಕ್ಕೂ ಹೆಚ್ಚು ಔಷಧ ಅಂಗಡಿ ಮಾಲೀಕರು ಬೆಂಬಲ ಸೂಚಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಔಷಧಗಳನ್ನು ಆನ್‌ಲೈನ್ ವೇದಿಕೆಗಳಲ್ಲಿ ಮಾರಾಟ ಮಾಡಲು ಕೇಂದ್ರ ಸರಕಾರ ಅನುಮತಿಸಿತ್ತು. ಪ್ರಸ್ತುತ ಆನ್‌ಲೈನ್ ಔಷಧ ವೇದಿಕೆಗಳು ಅಗ್ಗದ ದರದಲ್ಲಿ ಮನೆಗೇ ಮೆಡಿಸಿನ್ ತಲುಪಿಸುತ್ತಿದ್ದು, ಮೆಡಿಕಲ್ ಶಾಪ್‌ಗಳ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ. ಹೀಗಾಗಿ ಸರಕಾರ ಔಷಧಗಳ ಆನ್‌ಲೈನ್ ಮಾರಾಟ ಆದೇಶವನ್ನು ವಾಪಸ್ ಪಡೆಯಬೇಕು ಎಂಬುದು ಮೆಡಿಕಲ್ ಶಾಪ್ ವ್ಯಾಪಾರಿಗಳ ಬೇಡಿಕೆ. ಸಣ್ಣ ಪಟ್ಟಣಗಳು ಮತ್ತು ಅರೆನಗರ ಪ್ರದೇಶಗಳಲ್ಲಿ ಸ್ಥಳೀಯ ಮೆಡಿಕಲ್ ಅಂಗಡಿಗಳೇ ಮುಖ್ಯ ಔಷಧ ಮೂಲವಾಗಿರುವುದರಿಂದ ಮುಷ್ಕರದ ಬಿಸಿ ತಟ್ಟುವ ಸಾಧ್ಯತೆಯಿದೆ.

PRESIDENCY UNIVERSITY
Established under Section 2(f) of UGC Act, 1956 | Presidency University Act, 2013 of the Karnataka Act No. 41 of 2013 | Approved by AICTE, New Delhi
Bengaluru
50 YEARS
Discover Excellence

1000 + Students have availed Global Opportunities
180 + Partners with 40 + Countries | 10 Advanced Schools | 70 + Specialized Programs | 100% Placement Record | 600 + Corporate Partners | 3200 + Students Got Placed in 2024 - 25

SCHOOL OF COMPUTER SCIENCE & ENGINEERING
B.Tech. - Computer Science and Engineering
B.Tech. - Computer Science and Engineering Specialisation in Quantum Computing
B.Tech. - Computer Science and Engineering Specialisation in AI & Data Engineering
B.Tech. - Computer Science and Engineering Specialisation in BioInformatics
B.Tech. - Computer Science and Engineering (Artificial Intelligence and Machine Learning)
B.Tech. - Computer Science and Engineering (Data Science)
B.Tech. - Computer Science and Engineering (Cyber Security)
B.Tech. - Computer Science and Engineering (Block Chain)
B.Tech. - Computer Science and Engineering (Internet Of Things)
B.Tech. - Computer Science and Technology (Big Data)
B.Tech. - Computer Science and Technology (DevOps)
B.Tech. - Information Science and Engineering
B.Tech. - Information Science and Technology
B.Tech. - Artificial Intelligence and Data Science
B.Tech. - Robotics and Artificial Intelligence
M.Tech. - (Data Science)
M.Tech. - (Artificial Intelligence)
M.Tech. - Computer Science and Engineering Specialisation in Quantum Computing
M.Tech. - Computer Science and Engineering Specialisation in Software Engineering

SCHOOL OF MANAGEMENT
MBA
Specialisation in Finance / Marketing / Human Resource Management / Operations and Supply Chain Management / Business Analytics / Applied AI / International Business and Trade Management / Advertising and Brand Management / Health Care Management / Product Management / Artificial Intelligence and Data Analytics / Strategy and Consulting / Capital Market / Operations & Project Management / FinTech
MBA (Business Analytics)
MBA (Digital Marketing)
MBA (Banking and Finance Management)
MBA (Marketing and Finance)
BBA
Specialisation in Finance / Marketing / Human Resource Management / Operations and Supply Chain Management / Digital Business / AI and Automotive / FinTech and Digital Assets / Advertising / PR & Corporate Communication / Sports Management / Health Care Management / Hospitality Management
BBA (Digital Marketing)
BBA (Business Analytics)
BBA (Aviation Management)
PRESIDENCY ACADEMY OF CORPORATE EXCELLENCE I EXECUTIVE MBA

SCHOOL OF COMMERCE
B.Com.
Specialisation in International Business / Human Resource Management / E-Commerce / Banking and Insurance / Supply Chain Management / Forensic Accounting and Financial Fraud Analytics / Banking and Finance / Corporate Accounting and Taxation / Business Analytics
B.Com. - CFA US - Integrated
B.Com. - (Corporate Accounting Integrated with CMA-US)
B.Com. - (ACCA)
B.Com. - (Enrolled Agent - Integrated)
B.Com. - CA Foundation
M.Com.

SCHOOL OF ENGINEERING
B.Tech. - Civil Engineering
B.Tech. - Electrical and Electronics Engineering
B.Tech. - Electronics and Communication Engineering
B.Tech. - Mechanical Engineering
B.Tech. - Petroleum Engineering
B.Tech. - VLSI
B.Tech. - Aerospace Engineering
M.Tech. - (Embedded System and VLSI)
M.Tech. - (Building and Construction Technology)
M.Tech. - (Automotive Technology)

SCHOOL OF LIBERAL ARTS AND SCIENCES
B.Sc. Psychology
Bachelor of Arts - Psychology / Economics / Political Science / Theatre Studies / English / Sociology / History / Performing Arts.
Diploma in Dance (Kuchipudi / Mohiniyattam / Kathak / Bharatanatyam)
Diploma in Music (Carnatic Classical / Hindustani Classical)
M.Sc. Psychology Specialisation in Child Psychology / Clinical Psychology / Counselling Psychology / Industrial Psychology
M.A. English Specialisation in Digital Humanities / Cultural Studies / Creative Writing / Educational Leadership and Management

SCHOOL OF INFORMATION SCIENCE
BCA
Specialisation in Artificial Intelligence & Data Science / Cloud Computing & Big Data / Cyber Security / Data Analytics & Business Intelligence / AR & VR – Metaverse / Gaming Technology / Ethical Hacking / Web Development / Mobile Application Development
BCA - (Artificial Intelligence & Machine Learning)
BCA - (Data Science)
B.Sc. - (AI, Data Science & Cloud Computing)
B.Sc. - Computer Science
M.Sc. - Data Science
MCA
Specialisation in Quantum Computing / Artificial Intelligence & Machine Learning / Artificial Intelligence & Data Science / Big Data, Internet of Things & Cloud Computing / Cyber Security

SCHOOL OF DESIGN
B.Design
Specialisation in Product Design / Communication Design / Space Design / Fashion Design / Game Design
B.Sc. (Multimedia)
BFA - Bachelor of Fine Arts

SCHOOL OF MEDIA STUDIES
BA - Journalism and Mass Communication
Specialisation in Digital Marketing & Advertising / PR & Corporate Communications / Film, TV & Digital Production / Immersive media, AR / VR & Interactive Story telling / Digital Story telling & Content Creation
M.A. - Journalism and Mass Communication

SCHOOL OF ALLIED HEALTH SCIENCES
Bachelor of Physiotherapy (BPT)

SCHOOL OF LAW
BBA LLB (Hons.)
BA LLB (Hons.)
LL.M. (Master of Laws)

CET/DCET CODE: E237 | COMEDK CODE: 173 PGCET CODE: MBA - B349 | M.TECH - T983 | MCA - C575MC
Hostel Facility Available | presidencyuniversity.in | admission@presidencyuniversity.in
ADMISSIONS OPEN +91-90220 92222
Presidency University, Itgalpura, Rajanakunte, Yelahanka, Bengaluru 560119
INTEREST FREE EDU. LOAN FACILITY

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಶ್ರೀ ಎನ್.ಎ. ಹ್ಯಾರಿಸ್
ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ ಮತ್ತು ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಸ್ಕಂದಗಿರಿ
ಅಪಾರ್ಟ್‌ಮೆಂಟ್‌ಗಳು
15ನೇ ಮೇ, 2026 ರಿಂದ ಬುಕಿಂಗ್ ಪ್ರಾರಂಭ
ಪ್ರೀಮಿಯಂ ಮನೆಗಳು
ಬೆಲೆಕಟ್ಟಲಾಗದ ನೆನಪುಗಳು
3 BHK ಬಿಲ್ಟ್ ಅಪ್ ಏರಿಯಾ 1,444 sqft ಆರಂಭಿಕ ಬೆಲೆ ₹ 1.44 ಕೋಟಿ
1 BHK ಬಿಲ್ಟ್ ಅಪ್ ಏರಿಯಾ 635 sqft ಆರಂಭಿಕ ಬೆಲೆ ₹ 51 ಲಕ್ಷ
ಹಂತ - 1, ಕೋನದಾಸಪುರ [ವೈಟ್ ಫೀಲ್ಡ್], ಬೆಂಗಳೂರು
ಸ್ಥಳಕ್ಕಾಗಿ QR ಕೋಡ್ ಸ್ಕ್ಯಾನ್ ಮಾಡಿ
https://flats.bdakarnataka.in 94831 66622

ಪಂಚಾಂಗ
15-05-2026

ಪರಾಭವ ನಾಮ ಸಂವತ್ಸರ, ಉತ್ತರಾಯಣ, ಋತು: ವಸಂತ, ಮಾಸ: ವೈಶಾಖ, ಪಕ್ಷ: ಕೃಷ್ಣ, ಮಳೆ ನಕ್ಷತ್ರ: ಕೃತ್ತಿಕಾ, ನಿತ್ಯನಕ್ಷತ್ರ: ಅಶ್ವಿನಿ, ತಿಥಿ: ತ್ರಯೋದಶಿ, ಯೋಗ: ಆಯುಷ್ಮಾನ್, ಕರಣ: ವಣಿಕ್, ವಾರ: ಶುಕ್ರವಾರ.

ರಾಹು ಕಾಲ: ಬೆ. 10.30 - 12.00
ಗುಳಿಕ ಕಾಲ: ಬೆ.7.30-9.00
ಯಮಗಂಡ ಕಾಲ: ಮ. 3.00-4.30
ಸೂರ್ಯ ಉದಯ: ಬೆ.5.55 ಸೂರ್ಯ ಅಸ್ತ: ಸಂ.6.36

ಕೇಂದ್ರದ ವಿರೋಧವೇ ಕಾಂಗ್ರೆಸ್‌ನಾಯಕರ ನಿತ್ಯ ಕಾಯಕ: ಬಿವೈವಿ

■ ವಿಕ ಸುದ್ದಿಲೋಕ ಬೆಂಗಳೂರು

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಪ್ರತಿಯೊಂದು ನಿರ್ಧಾರವನ್ನು ವಿರೋಧ ಮಾಡುವುದೇ ಕಾಂಗ್ರೆಸ್ ಮಂತ್ರವಾಗಿ ಬಿಟ್ಟಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದ್ದಾರೆ.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾತನಾಡಿ, "ಕೇಂದ್ರ ಸರಕಾರದ ಎಲ್ಲ ಕಾರ್ಯಕ್ರಮಗಳನ್ನೂ ಕೇವಲ ರಾಜಕೀಯದ ದೃಷ್ಟಿಕೋನದಿಂದ ಕಾಂಗ್ರೆಸ್ ನೋಡುತ್ತಿದೆ. ಇವುಗಳನ್ನು ವಿರೋಧಿಸುವುದೇ ಕಾಂಗ್ರೆಸ್‌ನ ನಿತ್ಯ ಕಾಯಕವಾಗಿದೆ," ಎಂದರು.

"ಮೋದಿಯವರು 'ಒಂದು ದೇಶ ಒಂದು ಚುನಾವಣೆ' ಎಂದರೆ ಕಾಂಗ್ರೆಸ್‌ನವರು ವಿರೋಧಿಸುತ್ತಾರೆ. ಮಹಿಳಾ ಮೀಸಲು ವಿಧೇಯಕ ಜಾರಿಗೊಳಿಸಲೆಂದು ಬಯಸಿದರೂ ವಿರೋಧಿಸುತ್ತಾರೆ. ವಿಪಕ್ಷದವರು ಬೆಂಬಲ ಕೊಟ್ಟರೆ ವಿರೋಧ, ಇದೀಗ ಎಸ್‌ಐಆರ್‌ಗೂ ವಿರೋಧಿಸುತ್ತಿದ್ದಾರೆ," ಎಂದು ದೂರಿದರು.

"ಬಿಹಾರದಲ್ಲಿ ಸರಕಾರ ರಚನೆಯ ಕನಸು ಕಾಣುತ್ತಿದ್ದ ಕಾಂಗ್ರೆಸ್ ನವರು ಮಣ್ಣು ಮುಕ್ಕುವಂತಾಯಿತು. ಅಸ್ಸಾಂ ಜನರು ಕಾಂಗ್ರೆಸ್ ಅಧಿಕಾರದ ಕನಸಿಗೆ ಮಂಗಳ ಹಾಡಿದ್ದಾರೆ. ಅಲ್ಲಿ ಬಿಜೆಪಿ ಸರಕಾರ ರಚನೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಮೋದಿಯವರ ನಾಯಕತ್ವದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದೆ. ಹಾಗಾಗಿ ಮೋದಿಯವರ ಜನಪ್ರಿಯತೆ ಸಹಿಸಲು ಕಾಂಗ್ರೆಸ್ಸಿನವರಿಗೆ ಸಾಧ್ಯವಾಗುತ್ತಿಲ್ಲ," ಎಂದು ಕಿಡಿ ಕಾರಿದರು.

ಆದೇಶ ಹಿಂಪಡೆಯದಿದ್ದರೆ ಹೋರಾಟ, ಅನಾಹುತಕ್ಕೆ ಸರಕಾರವೇ ಹೊಣೆ: ಬಿಜೆಪಿ ಆಕ್ರೋಶ

ಶಾಲೆಗಳಲ್ಲಿ ಹಿಜಾಬ್ ಅನುಮತಿ ಬೇಡವೇ ಬೇಡ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಸರಕಾರ ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರದ ಜತೆಗೆ ಹಿಜಾಬ್ ಧರಿಸಲು ಅವಕಾಶ ಕಲ್ಪಿಸಿರುವುದಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಕೂಡಲೇ ಆದೇಶ ಹಿಂಪಡೆಯದಿದ್ದರೆ ಹೋರಾಟದ ಎಚ್ಚರಿಕೆಯನ್ನೂ ಬಿಜೆಪಿ ನೀಡಿದೆ.

ರಾಜ್ಯ ಸರಕಾರದ ನಿಲುವನ್ನು ತೀವ್ರವಾಗಿ ಖಂಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, "ಮಾಡಬೇಕಾದ ಕೆಲಸಗಳನ್ನು ನೂರಾರಿವೆ. ಅದನ್ನು ಬಿಟ್ಟು ಶಾಲಾ, ಕಾಲೇಜುಗಳನ್ನು ಹಿಂದೂಗಳು, ಮುಸ್ಲಿಂರೆಂದು ಬೆಂಕಿ ಹಚ್ಚುವ ಕೆಲಸಕ್ಕೆ ಕಾಂಗ್ರೆಸ್ ಸರಕಾರ ಕೈ ಹಾಕಿರುವುದು ಖಂಡನೀಯ," ಎಂದು ಹೇಳಿದರು.

"ಅಭಿವೃದ್ಧಿಯನ್ನು ಮರೆತು ಹಿಂದೂಗಳಿಗೆ ಅವಮಾನ ಮಾಡಿಕೊಂಡು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರಕಾರದ ಅವತಾರಕ್ಕೆ ಇತಿಶ್ರೀ ಹಾಡುವ ದಿನಗಳು ಬಂದೇ ಬರಲಿವೆ. ಆಗ ರಾಜ್ಯದ ಜನರು ಇದಕ್ಕೆ ಉತ್ತರ ಕೊಡಲಿದ್ದಾರೆ," ಎಂದರು.

"ಹಿಂದೆ ಬಿಜೆಪಿ ಸರಕಾರವು ಹಿಜಾಬ್ ನಿಷೇಧಿಸಿತ್ತು. ನ್ಯಾಯಾಲಯದಲ್ಲೂ ಈ ವಿಚಾರವಿದೆ. ಸಮಾಜದ ಸಾಮರಸ್ಯಕ್ಕೆ ಕೊಳ್ಳಿ ಇಡುತ್ತಿದೆ. ಸರಕಾರದ ಈ ನಿರ್ಧಾರ ಅಕ್ಷರಶಃ ಅವಿವೇಕತನದ ಪರಮಾವಧಿ," ಎಂದು ಕಿಡಿ ಕಾರಿದರು.

"ಮುಖ್ಯಮಂತ್ರಿಗಳೇ, ಜ್ಞಾನ ದೀವಿಗೆ ಬೆಳಗುತ್ತಿರುವ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಕೋಮುವಾದದ ಜ್ವಾಲೆ ಹೊತ್ತಿಸಬೇಡಿ. ಕೂಡಲೇ ಆದೇಶ ಹಿಂಪಡೆಯದಿದ್ದರೆ ಮುಂದೆ ಉದ್ಭವವಾಗುವ ಪರಿಸ್ಥಿತಿಗೆ ಕಾಂಗ್ರೆಸ್ ಸರಕಾರವೇ ನೇರ ಹೊಣೆ," ಎಂದು ಎಚ್ಚರಿಸಿದರು.

ಸರಕಾರವೇ ಸಂಘರ್ಷಕ್ಕೆ ಎಡೆ ಮಾಡಿದೆ

ನಾಲ್ಕು ವರ್ಷಗಳ ನಂತರ ಮತ್ತೆ ಕಾಂಗ್ರೆಸ್ ಹಿಜಾಬ್‌ಗೆ ಅವಕಾಶ ನೀಡಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

"ಶಾಲಾ- ಕಾಲೇಜುಗಳಲ್ಲಿ ತಲೆದೋರಿದ್ದ ಧಾರ್ಮಿಕ ಭಾವನೆ ಕೆರಳಿಸುವ ಹಿಜಾಬ್ ನಿರ್ಬಂಧಿಸಲಾಗಿತ್ತು. ಸಮವಸ್ತ್ರ ಬಿಟ್ಟು ಬಹಿರಂಗವಾಗಿ ಮೇಲೆ ಕಾಣುವ ವಸ್ತ್ರ ಧರಿಸದಂತೆ ನಿರ್ಧಾರ ಕೈಗೊಳ್ಳಲಾಗಿತ್ತು," ಎಂದರು.

"ಹಿಜಾಬ್‌ಗೆ ಅವಕಾಶ ನೀಡಿದರೆ ಮುಸ್ಲಿಮರು ತಮ್ಮ ಜತೆಗಿರುತ್ತಾರೆ. ಮುಸ್ಲಿಮರಿಗೆ ಹಣ, ಮನೆ ಕೊಟ್ಟರೆ ತಮ್ಮೊಂದಿಗೆ ನಿಲ್ಲುತ್ತಾರೆಂದು ಕಾಂಗ್ರೆಸ್ ಭಾವಿಸಿದೆ. ಇವೆಲ್ಲ ಬಹುಸಂಖ್ಯಾತರನ್ನು ಮುಸ್ಲಿಮರ ವಿರುದ್ಧವಾಗಿ ಎತ್ತಿಕಟ್ಟುವ ಕೆಲಸ,"ಎಂದು ತಿಳಿಸಿದರು.

"ಕಾಂಗ್ರೆಸ್ ನಂಬಿದರೆ ದ್ರೋಹವಾಗುತ್ತದೆಯೇ ಹೊರತು ಒಳ್ಳೆಯದಾಗದು. ಏಕೆಂದರೆ ದೇಶದ ಕಾನೂನು ಎಲ್ಲರಿಗೂ ಒಂದೇ. ನಾವು ದೇಶ ಒಡೆಯುವ ಯಾವುದೇ ಧಾರ್ಮಿಕ ವಿಚಾರ ಹೇಳಿಲ್ಲ, ನಮ್ಮದು ಯಾವಾಗಲೂ ಹಿಂದೂ ಅಸ್ಮಿತೆ. ಹಾಗಿದ್ದರೂ ಹಿಜಾಬ್‌ನಂತಹ ವಿಚಾರ ಎಳೆದು ತಂದು ಸರಕಾರವೇ ರಾಜ್ಯಕ್ಕೆ ಬೆಂಕಿ ಹಚ್ಚುತ್ತಿದೆ. ಅಹಿತಕರ ಘಟನೆ, ಗದ್ದಲ ನಡೆದರೆ ಕಾಂಗ್ರೆಸ್ ಹೊಣೆ," ಎಂದು ಹೇಳಿದರು.

ಶಾಲಾ- ಕಾಲೇಜುಗಳಲ್ಲಿ ಹಿಜಾಬ್‌ಗೆ ಅನುಮತಿಯನ್ನು ಖಂಡಿಸಿ ಶ್ರೀರಾಮಸೇನೆ ಕಾರ್ಯಕರ್ತರು ಹುಬ್ಬಳ್ಳಿಯಲ್ಲಿ ಸಿಎಂ, ಡಿಸಿಎಂ ಹಾಗೂ ಶಿಕ್ಷಣ ಸಚಿವರ ಭಾವಚಿತ್ರ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮುಸ್ಲಿಂ ಸಮಾವೇಶಕ್ಕೆ ಹೆದರಿ ಹಿಜಾಬ್ ಅಸ್ತ್ರ

ಮೂರು ವರ್ಷ ಬಳಿಕ ರಾಜಕೀಯ ಯೋಚನೆ

ದಾವಣಗೆರೆ ಉಪ ಚುನಾವಣೆ ಫಲಿತಾಂಶದಿಂದ ಗಾಬರಿಗೊಂಡ ಬಳಿಕ ಕಾಂಗ್ರೆಸ್ ಸರಕಾರಕ್ಕೆ ದಿಢೀರ್ ಜ್ಞಾನೋದಯವಾಗಿದ್ದು, ಮುಸ್ಲಿಂರನ್ನು ಓಲೈಸಲು ಹಿಜಾಬ್ ವಿಚಾರವನ್ನು ಮುನ್ನೆಲೆಗೆ ತಂದಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. "ಸಿಇಟಿ ಪರೀಕ್ಷೆಯಲ್ಲಿ ಹುಡುಗನೊಬ್ಬನ ಮೈಮೇಲಿದ್ದ ಜನಿವಾರ ತೆಗೆಸಿದರು. ಎಲ್ಲವನ್ನು ರಾಜಕೀಯಕ್ಕಾಗಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರಕಾರಕ್ಕೆ ರಾಜಕೀಯ ಲಾಭ ಮುಖ್ಯವೇ ಹೊರತು, ಸಮಾಜದ ಶಾಂತಿ ಅಲ್ಲ," ಎಂದು ಆಪಾದಿಸಿದರು. "ನಾನು ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ. ಆದರೆ, ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿದ್ದು, ಹಿಜಾಬ್ ವಿಚಾರದಲ್ಲಿ ಇಷ್ಟು ದಿನ ಏನು ಮಾಡುತ್ತಿದ್ದರು? ದಾವಣಗೆರೆಯಲ್ಲಿ ಇದೇ 16ರಂದು ಮುಸ್ಲಿಂ ಸಮುದಾಯದ ಸಮಾವೇಶವಿದೆ. ಅದಕ್ಕೆ ಹೆದರಿ ಈ ನಿರ್ಧಾರ ಮಾಡಿದ್ದಾರೆ" ಎಂದು ಟೀಕಿಸಿದರು. "ಈ ಪ್ರಕರಣ ನ್ಯಾಯಾಲಯದಲ್ಲಿ ಇನ್ನೂ ವಿಚಾರಣೆಯಲ್ಲಿದೆ. ಹಿಜಾಬ್ ಬಗ್ಗೆ ತಡೆಯಾಜ್ಞೆ ಜಾರಿಯಲ್ಲಿದೆ. ಅದು ತೆರವಾಗುವ ಮೊದಲೇ ಸರಕಾರ ಆದೇಶ ಮಾಡಿ, ಕೋರ್ಟ್‌ಗೂ ಅಪಚಾರ ಮಾಡುತ್ತಿದೆ" ಎಂದರು.

ಶಾಲು ಧರಿಸಿ ಬಂದರೆ ಉದ್ಯೋಗ ಸಿಗುವುದೇ

"ಎಲ್ಲ ಧರ್ಮಗಳಿಗೆ ಆದರದ್ದೇ ಆದ ಆಚರಣೆಯನ್ನು ಪಾಲಿಸಲು ಸಂವಿಧಾನ ಅವಕಾಶ ನೀಡಿದ್ದು, ಅದರಂತೆ ಸರಕಾರ ಆದೇಶ ಹೊರಡಿಸಿದೆ," ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ವಿಧಾನಸೌಧದಲ್ಲಿ ಗುರುವಾರ ಪ್ರತಿಕ್ರಿಯಿಸಿದ ಅವರು, "ಸರಕಾರ ಒಂದೇ ಧರ್ಮದ ಸಂಪ್ರದಾಯ ಆಚರಣೆಗೆ ಅವಕಾಶ ನೀಡಿಲ್ಲ. ಮುಸ್ಲಿಮರು ಜನಿವಾರ ಧರಿಸುತ್ತಾರೆಯೇ? ಬಿಜೆಪಿಯವರು ಮೊದಲಿಗೆ ಸರಕಾರಿ ಆದೇಶ ಓದುವುದನ್ನು ಕಲಿಯಲಿ. ಶಾಲೆಗಳಿರುವುದು ಮಕ್ಕಳ ಭವಿಷ್ಯ ರೂಪಿಸಲು. ಆ ಮಕ್ಕಳ ಭವಿಷ್ಯ ಹಾಳು ಮಾಡುವುದು ಏಕೆ? ಮನೆಗಳಲ್ಲಿ ಎಲ್ಲ ಆಚರಣೆ ಕಲಿಸುತ್ತಾರೆ. ಶಾಲೆಗಳಲ್ಲಿ ಶಿಕ್ಷಣ ಕಲಿಸಲಾಗುತ್ತದೆ," ಎಂದು ತಿಳಿಸಿದರು. "ಗೋ ರಕ್ಷಣೆ, ಧರ್ಮ ರಕ್ಷಣೆ ಮಾಡಿದರೆ ಉದ್ಯೋಗ ನೀಡಿದಂತಾಗಲಿದೆಯೇ? ಮಕ್ಕಳಿಗೆ ವೈಜ್ಞಾನಿಕ ಮನೋಭಾವ ಮೂಡಿಸಬೇಕು. ಚೀನಾ ನೋಡಿ ಕಲಿಯಲಿ, ಅಲ್ಲಿ ಮಕ್ಕಳು ಹೇಗೆ ಕಲಿಯುತ್ತಾರೆ ಎಂಬ ಬಗ್ಗೆ ಮಾತನಾಡಲಿ. ಪ್ರಧಾನಿ ಮೋದಿಯವರು ಎಷ್ಟು ಹೊಸ ವಿವಿಗಳನ್ನು ಆರಂಭಿಸಿದ್ದಾರೆ? ಕೇವಲ ಶಾಲು ಧರಿಸಿ ಬನ್ನಿ ಎಂದರೆ ಉದ್ಯೋಗ ಸಿಗುತ್ತದೆಯೇ," ಎಂದು ಪ್ರಶ್ನಿಸಿದರು.

ಬಿಜೆಪಿಯವರಿಗೆ ಎಲ್ಲದಕ್ಕೂ ಟೀಕೆ ಮಾಡುವುದನ್ನು ಬಿಟ್ಟರೆ ಬೇರೇನು ಗೊತ್ತಿದೆ? ಸಿಇಟಿ ಪರೀಕ್ಷೆವೇಳೆ ಜನಿವಾರ ತೆಗೆಸಿದ ಘಟನೆ ನಡೆದಿತ್ತು. ಆ ಹಿನ್ನೆಲೆಯಲ್ಲಿ ಶಿಕ್ಷಣ ಸಚಿವರು ಹೊಸ ನಿರ್ಧಾರ ತೆಗೆದುಕೊಂಡಿದ್ದಾರೆ. ಹಿಜಾಬ್ ಮಾತ್ರವಲ್ಲದೆ, ಜನಿವಾರಕ್ಕೂ ಅವಕಾಶ ಕಲ್ಪಿಸಿದ್ದಾರೆ.

-ಸಲೀಂ ಅಹ್ಮದ್ ವಿಧಾನ ಪರಿಷತ್ ಸರಕಾರಿ ಮುಖ್ಯ ಸಚೇತಕ

ನಾಯಕರ ಸ್ಟೇಟ್‌ಮೆಂಟ್

ಸ್ವಾತಂತ್ರ್ಯ ಪೂರ್ವದಲ್ಲಿ ಮಿಷನರಿಗಳು, ಮೈಸೂರು ಸಂಸ್ಥಾನದ ಕಾಲಘಟ್ಟದಲ್ಲೂ ಸ್ವಾತಂತ್ರ್ಯ ಪೂರ್ವದಲ್ಲೇ ನಮ್ಮಲ್ಲಿ ಸಮವಸ್ತ್ರ ವ್ಯವಸ್ಥೆ ಜಾರಿಗೊಳಿಸಿದ್ದರು. ಯಾವುದೇ ಸಂದರ್ಭದಲ್ಲಿ ಸಮವಸ್ತ್ರದೊಳಗೆ ಹಿಜಾಬ್ ಪ್ರವೇಶ ಮಾಡಿರಲಿಲ್ಲ. ಶಾಲೆಗಳಲ್ಲಿ ಹಿಜಾಬ್ ಸಮವಸ್ತ್ರದ ಭಾಗವಾಗಿದ್ದರೆ ಹಿಜಾಬ್ ಧರಿಸಲಿ. ಹಿಜಾಬ್ ಸಮವಸ್ತ್ರದ ಭಾಗವಾಗದೇ ಇದ್ದರೆ ಹೇಗೆ? ಮುಂದೆ ಯಾವುದಾದರೂ ಶಾಲಾ ಆಡಳಿತ ಮಂಡಳಿ ಕೇಸರಿ ಶಾಲನ್ನು ಸಮವಸ್ತ್ರದ ಭಾಗವಾಗಿ ಮಾಡಿದರೆ ನಿರಾಕರಿಸುವುದು ಹೇಗೆ?

-ಸಿ.ಟಿ.ರವಿ ಮಾಜಿ ಸಚಿವ

ಸಮವಸ್ತ್ರದ ಜತೆಗೆ ಹಿಜಾಬ್ ಧರಿಸಬಹುದು ಎಂಬ ಹೊಸ ವಿವಾದವನ್ನು ಶಾಲಾ ಕಾಲೇಜುಗಳಲ್ಲಿ ಬಿತ್ತಲು ಸರಕಾರ ಮುಂದಾಗಿದೆ. ಸಮಾನತೆ, ಮೇಲು-ಕೀಳು ಭಾವನೆ ಇಲ್ಲ ಎಂಬುದನ್ನು ತಿಳಿಸಲು ಸಮವಸ್ತ್ರ ವ್ಯವಸ್ಥೆ ಮಾಡಿತ್ತು. ಮತ್ತೆ ಹಿಜಾಬ್ ತರುವುದಾದರೆ ಸಮವಸ್ತ್ರದ ಕತೆ ಏನು?

-ಎನ್.ರವಿಕುಮಾರ್ ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ

ಕಾಂಗ್ರೆಸ್ ಮುಸ್ಲಿಂ ಓಲೈಕೆ ನೀತಿಯನ್ನು ಬಹಿರಂಗಪಡಿಸಿಕೊಂಡಿದೆ. ವಸ್ತ್ರಸಂಹಿತೆ ವಿಚಾರ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿಯಿದ್ದರೂ ಹಿಂದಿನ ಸರಕಾರದ ಆದೇಶ ಹಿಂಪಡೆದಿರುವುದು ಸಂವಿಧಾನ ವಿರೋಧಿಯಷ್ಟೇ ಅಲ್ಲ, ನ್ಯಾಯಾಂಗ ನಿಂದನೆಯೂ ಹೌದು. ಸಾಮಾಜಿಕ ಸಾಮರಸ್ಯ ಕದಡುವುದು ಸರಕಾರದ ಕಸುಬಾಗಿದೆ.

-ವಿ.ಸುನೀಲ್ ಕುಮಾರ್ ಮಾಜಿ ಸಚಿವ

ಮುಂದಿನ ದಿನಗಳಲ್ಲಿ ಹಿಂದೂ ಬಾಂಧವರು ಕೇಸರಿ ಶಾಲು, ಕೇಸರಿ ಪಂಚೆ ಧರಿಸಿ ಹೋದರೆ ಮತ್ತಷ್ಟು ಗೊಂದಲವಾಗುವ ಸಾಧ್ಯತೆ ಇದ್ದು, ಇಂತಹ ಗೊಂದಲಗಳಿಗೆ ಅವಕಾಶ ಕೊಡಬಾರದು. ಹಿಜಾಬ್‌ಗೆ ಅನುಮತಿ ನೀಡಿದರೆ ಮುಂದಿನ ಅನಾಹುತಗಳಿಗೆ ರಾಜ್ಯ ಸರಕಾರವೇ ಹೊಣೆ.

-ಯಶ್‌ಪಾಲ್ ಸುವರ್ಣ ಬಿಜೆಪಿ ಶಾಸಕ

ಕಾಂಗ್ರೆಸ್ ಸರಕಾರ ಹಿಜಾಬ್ ವಿಷಯುವನ್ನು ಮತ್ತೆ ಮುನ್ನೆಲೆಗೆ ತಂದು ಮಕ್ಕಳಲ್ಲಿ ಮತೀಯ ವಿಷ ಬೀಜ ಬಿತ್ತಲು ಆರಂಭಿಸಿದೆ. ತನ್ನ ಆಂತರಿಕ ಸಂಘರ್ಷದಿಂದ ಪಾರಾಗಲು ಸರಕಾರ ಈ ತಂತ್ರ ಹೂಡಿದೆ. ಇದಕ್ಕೆ ಬಿಜೆಪಿ ವಿರೋಧವಿದ್ದು, ಹೋರಾಟ ಮಾಡುತ್ತದೆ.

-ಮಹೇಶ್ ಟೆಂಗಿನಕಾಯಿ ಬಿಜೆಪಿ ಶಾಸಕ

ನೀಟ್ ರಾಜ್ಯಗಳಿಗೆ ಮರಳಿಸಿ

ಕೇಂದ್ರ ಸರಕಾರಕ್ಕೆ ಸಿಎಂ ಸಿದ್ದರಾಮಯ್ಯ ಆಗ್ರಹ

■ ವಿಕ ಸುದ್ದಿಲೋಕ ಬೆಂಗಳೂರು

ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ನಡೆಸುವ ಅಧಿಕಾರವನ್ನು ರಾಜ್ಯ ಸರಕಾರಗಳಿಗೆ ಮರಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರಕಾರವನ್ನು ಆಗ್ರಹಿಸಿದ್ದಾರೆ.

'ನೀಟ್ ಯುಜಿ 2026' ಪರೀಕ್ಷೆಯನ್ನು ಕೇಂದ್ರ ಸರಕಾರ ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, "ನೇಮಕ ಪರೀಕ್ಷೆಗಳಿಂದ ಹಿಡಿದು ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳ ವರೆಗೆ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ನಡೆಯುತ್ತಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಣೆ ಮಾಡುವಲ್ಲಿ ಪ್ರಧಾನಿ ನರೇಂದ್ರ ಮೋದಿ ಸರಕಾರ ವಿಫಲವಾಗಿದೆ," ಎಂದು ದೂರಿದ್ದಾರೆ.

"ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಬಗ್ಗೆ ಪಾರದರ್ಶಕ ಮತ್ತು ಕಾಲಮಿತಿಯ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಹೊಸ ಪರೀಕ್ಷಾ ವೇಳಾಪಟ್ಟಿಯ ಬಗ್ಗೆ ಕೂಡಲೇ ಸ್ಪಷ್ಟನೆ ನೀಡಬೇಕು. ಈ ವೈಫಲ್ಯಕ್ಕಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ನೀಡಬೇಕು," ಎಂದು ಆಗ್ರಹಿಸಿದ್ದಾರೆ.

"ಕರ್ನಾಟಕದ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿ ದೇಶಾದ್ಯಂತ 22 ಲಕ್ಷ ವಿದ್ಯಾರ್ಥಿಗಳು ಬರೆದಿದ್ದ ನೀಟ್ ಪರೀಕ್ಷೆಯನ್ನು ದಿಢೀರ್ ರದ್ದುಗೊಳಿಸಿರುವ ಕೇಂದ್ರದ ನಿರ್ಧಾರ ಆಡಳಿತಾತ್ಮಕ ವೈಫಲ್ಯ ಮಾತ್ರವಲ್ಲ, ದೇಶದ ಯುವಜನತೆಗೆ ಬಗೆದ ದ್ರೋಹವಾಗಿದೆ. ತಿಂಗಳುಗಟ್ಟಲೆ ಶ್ರಮಪಟ್ಟು ಈ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ತರಬೇತಿ, ಪ್ರಯಾಣ ಸೇರಿದಂತೆ ಸಾಕಷ್ಟು ವೆಚ್ಚ ಮಾಡಿದ್ದರು. ಆದರೆ, ಕೇಂದ್ರದ ಒಂದು ನಿರ್ಧಾರ ಇಡೀ ವಿದ್ಯಾರ್ಥಿ ಸಮುದಾಯವನ್ನು ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ತಳ್ಳಿದೆ," ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

"ನೀಟ್ ಪರೀಕ್ಷೆಯು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಮತ್ತು ದಾಖಲಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ. 2024ರಲ್ಲೇ ನಮ್ಮ ಸರಕಾರ ಸದನದಲ್ಲಿ ನಿರ್ಣಯ ಕೈಗೊಂಡಿತು. ಅಂದಿನ ನಮ್ಮ ಸರಕಾರದ ಕಾಳಜಿ ಎಷ್ಟು ಸತ್ಯ ಮತ್ತು ಅನಿವಾರ್ಯವಾಗಿತ್ತು ಎನ್ನುವುದನ್ನು ಈಗಿನ ಪರೀಕ್ಷಾ ರದ್ದತಿಯು ಸಾಬೀತುಪಡಿಸಿದೆ," ಎಂದು ಹೇಳಿದ್ದಾರೆ.

ಇಂದು ಡಿಕೆಶಿ 65ನೇ ಜನ್ಮ ಸಂಭ್ರಮ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ (ಮೇ 15) 64 ವಸಂತಗಳನ್ನು ಪೂರೈಸಿ, 65ನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ. ಹುಟ್ಟುಹಬ್ಬದ ಅಂಗವಾಗಿ ಡಿ.ಕೆ. ಶಿವಕುಮಾರ್ ಅವರು ಕುಟುಂಬ ಸದಸ್ಯರೊಟ್ಟಿಗೆ ತಮಿಳುನಾಡಿನ

ತ.ನಾಡು ದೇಗುಲಕ್ಕೆ ಡಿಸಿಎಂ

ತಿರುಚೆಂಡೂರ್‌ನ ಮುರುಗನ್ ದೇವಾಲಯಕ್ಕೆ ತೆರಳುತ್ತಿದ್ದಾರೆ. ಎಚ್‌ಎಎಲ್ ವಿಮಾನನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ತೆರಳಲಿರುವ ಅವರು ಸಂಜೆ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ. ಹುಟ್ಟುಹಬ್ಬದ ಅಂಗವಾಗಿ ಬ್ಯಾನರ್, ಬಂಟಿಂಗ್ಸ್ ಹಾಕದಂತೆ ಅಭಿಮಾನಿಗಳು ಮತ್ತು ಬೆಂಬಲಿಗರಿಗೆ ಈಗಾಗಲೇ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಹಣಕಾಸು ಶಿಸ್ತು ಮಾಯ: ಮಾಧುಸ್ವಾಮಿ ಟೀಕೆ

ತುಮಕೂರು: ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದ ಕಾಲದಲ್ಲಿದ್ದ ಹಣಕಾಸಿನ ಶಿಸ್ತು ಇಂದು ಮಾಯವಾಗಿದೆ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, "ರಾಜ್ಯದ ಸಾಲದ ಮೊತ್ತ ಹೆಚ್ಚುತ್ತಿರುವುದು ಆತಂಕಕಾರಿ. ಪ್ರಸ್ತುತ ಮುಖ್ಯಮಂತ್ರಿಗಳು ಕೇವಲ ಚುನಾವಣೆ ಮತ್ತು ಮತ ಬ್ಯಾಂಕ್ ರಾಜಕೀಯಕ್ಕೆ ಸೀಮಿತವಾಗಿದ್ದು, ರಾಜ್ಯದ ಅಭಿವೃದ್ಧಿ ಬಗ್ಗೆ ಗಮನಹರಿಸುತ್ತಿಲ್ಲ" ಎಂದರು.

ದಿಕ್ಸೂಚಿಯಲ್ಲ: "ಉಪಚುನಾವಣೆ ಫಲಿತಾಂಶ ಮುಂದಿನ ಚುನಾವಣೆಗೆ ದಿಕ್ಸೂಚಿಯಲ್ಲ, ಆಡಳಿತ ಪಕ್ಷದ ಬಳಿ ಸಂಪನ್ಮೂಲ, ಅಧಿಕಾರ ಇರುವುದರಿಂದ ಸಣ್ಣಪುಟ್ಟ ಕೆಲಸಗಳ ಆಸೆಯಿಂದ ಜನ ಮತ ಹಾಕಿರುತ್ತಾರೆ," ಎಂದು ಹೇಳಿದರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ. 01, ಕಡೂರು – 577548, ಚಿಕ್ಕಮಗಳೂರು ಜಿಲ್ಲೆ.

ನೋಂದಾಯಿತ ಕಛೇರಿ ; ವಿಶ್ವೇಶ್ವರಯ್ಯ ಜಲ ನಿಗಮ, 148 ಎಂಬೆಸಿ ಸ್ಕ್ವೇರ್, ನೆಲಮಹಡಿ, ಇನ್ ಫ್ಯಾಂಟ್ರಿ ರಸ್ತೆ, ಬೆಂಗಳೂರು – 560001
ದೂರವಾಣಿ ಸಂಖ್ಯೆ : 080-22256688 / 22289996 ಫ್ಯಾಕ್ಸ್ ಸಂಖ್ಯೆ : 080-22264477 ಇ-ಮೇಲ್ : techvjnl@gmail.com ವೆಬ್‌ಸೈಟ್ : www.vjnl.karnataka.gov.in CIN-U41000KA2016SGC097260 ಫೋನ್ : 08267-295207. ಇ-ಮೇಲ್ : eeubpdvnl@gmail.com
ಸಂಖ್ಯೆ : ಕಾ.ಇಂ/ವಿಜನಿನಿ/ಭಮೇಯೋ/ವಿ.ನಂ.-01/ಕ/ಟೆ.ಸಂ-1 ತಿದ್ದುಪಡಿ/2026-27/122 ದಿನಾಂಕ : 08.05.2026

ತಿದ್ದುಪಡಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಉಲ್ಲೇಖ : ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ : 77/2026-27 ದಿನಾಂಕ : 28.04.2026

ಮೇಲ್ಕಂಡ ಉಲ್ಲೇಖ ಟೆಂಡರ್ ಅಧಿಸೂಚನೆಯಲ್ಲಿ ಪ್ರಕಟಣೆಗೊಳಿಸಿದ ಇಂಡೆಂಟ್ ಸಂಖ್ಯೆ : VJNL/2025-26/OW/WORK_INDENT467/CALL-2 ಮತ್ತು VJNL/2025-26/OW/WORK_INDENT472/CALL-2 ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದ ಟೆಂಡರ್ ಅವಧಿ ವಿಸ್ತರಿಸಿ, ಈ ಕೆಳಕಂಡ ದಿನಾಂಕವನ್ನು ಮರು ನಿಗಧಿಪಡಿಸಲಾಗಿದೆ.

ಕ್ರ.ಸಂ.	ವಿವರಣೆ	ಈ ಹಿಂದೆ ನಿಗಧಿಪಡಿಸದ ದಿನಾಂಕ	ಮರು ನಿಗಧಿಪಡಿಸದ ದಿನಾಂಕ
ಡಿ	ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ : 08.05.2026 ರಂದು ಅಪರಾಹ್ನ 17.30 ಘಂಟೆವರೆಗೆ	ದಿನಾಂಕ : 16.05.2026 ರಂದು ಅಪರಾಹ್ನ 17.30 ಘಂಟೆಯವರೆಗೆ
ಇ	ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 11.05.2026 ರಂದು ಪೂರ್ವಾಹ್ನ 11.00 ಘಂಟೆವರೆಗೆ	ದಿನಾಂಕ : 18.05.2026 ರಂದು ಪೂರ್ವಾಹ್ನ 11.00 ಘಂಟೆವರೆಗೆ

ಸೂಚನೆ: ಈ ಮೇಲಿನ ಉಲೇಖಿತ ಟೆಂಡರ್ ಅಧಿಸೂಚನೆಗೆ ಸಂಬಂಧಿಸಿದಂತೆ ಟೆಂಡರ್ ತಿದ್ದುಪಡಿ ವೇಳಾಪಟ್ಟಿ ಹೊರತುಪಡಿಸಿ ಬಾಕಿ ಉಳಿದ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ /- **ಕಾರ್ಯಪಾಲಕ ಇಂಜಿನಿಯರ್**, ವಿಜನಿನಿ, ಭಮೇಯೋ, ವಿಭಾಗ ನಂ. 01, ಕಡೂರು.

ನೈಋತ್ಯ ರೈಲ್ವೆ
ಓಪನ್ ಟೆಂಡರು ಸೂಚನೆ ಸಂ.: BE-29-2026-27-OT-01 (ಇ-ಟೆಂಡರಿಂಗ್ ಮೂಲಕ)

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ
BE-29-2026-27-OT-01	1) **ಬೆಂಗಳೂರು-ತುಮಕೂರು -ಸಂಪಿಗೆ ರೋಡ್ ವಿಭಾಗ:** ಕಿಮೀ. 85/700-800 ರಲ್ಲಿ ಎಲ್‌ಸಿ ನಂ. 50 ನಲ್ಲಿ ಪ್ರಸ್ತಾವನೆಯಂತೆ ಆರ್‌ಓಬಿ ಯ ನಿರ್ಮಾಣ – 42 ಮೀ. ಕಾಂಪೋಸಿಟ್ ಗಿರ್ಡರ್. 2) ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪವಿಭಾಗದಲ್ಲಿ ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ ಕಿಮೀ. 81/500-600 ರಲ್ಲಿ ಎಲ್‌ಸಿ ಗೇಟ್ ಸಂ. 48 ರಲ್ಲಿ ಪ್ರಸ್ತಾವನೆಯಂತೆ ಆರ್‌ಯುಬಿಯ ನಿರ್ಮಾಣ. 3) **ಬೆಂಗಳೂರು-ತುಮಕೂರು: ಸಂಪಿಗೆ ರೋಡ್ ವಿಭಾಗ:** ಕಿಮೀ. 73/000-100 ರ ಹಳೆಯ ಎಲ್‌ಸಿ ನಂ. 43 ರಲ್ಲಿ ರೋಲಿಂಗ್/ಲಾಂಚಿಂಗ್ ವಿಧಾನದಿಂದ 1 x 5 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ ಪ್ರಸ್ತಾವಿತ ಸೀಮಿತ ಎತ್ತರದ ಸಬ್‌ವೇಯ (ಕಿಮೀ. 73/000-100 ರಲ್ಲಿ ಭೀಮಸಂದ್ರ ಬಳಿ, ಆರ್‌ಯುಬಿ ನಂ. 297ಬಿ ರಲ್ಲಿ) ನಿರ್ಮಾಣ. 4) **ಯಶವಂತಪುರ-ಸಂಪಿಗೆ ರೋಡ್ ವಿಭಾಗ:** ಹಳೆಯ ಶೆಟ್ಟಿಹಳ್ಳಿ ಗೇಟ್, ಕಿಮೀ. 67/700-800 ನಲ್ಲಿ, 1 x 4 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ ರೋಲಿಂಗ್/ಲಾಂಚಿಂಗ್ ವಿಧಾನದಿಂದ ಪ್ರಸ್ತಾವಿತ ಸಬ್‌ವೇಯ (ಸೇತುವೆ ಸಂ. 308-ಡಿ) ನಿರ್ಮಾಣ. 5) ಗೌರಿಬಿದನೂರು ರೈಲ್ವೆ ನಿಲ್ದಾಣದ ಪಿಎಫ್-1 & ಪಿಎಫ್-2 & 3 ರಲ್ಲಿ ಲಿಫ್ಟ್‌ಗಳನ್ನು ಒದಗಿಸುವುದು. 6) ಕೆಂಗೇರಿ ರೈಲು ನಿಲ್ದಾಣದ ಪಿಎಫ್-1 & ಪಿಎಫ್-2&3 ನಲ್ಲಿ ಎರಡು ಎಸ್ಕಲೇಟರ್‌ಗಳನ್ನು (ಕೆಳಗಿನ ದಿಕ್ಕಿನಲ್ಲಿ) ಒದಗಿಸುವುದು. 7) **ಜೋಲಾರಪೇಟೆ-ಬೆಂಗಳೂರು ವಿಭಾಗ:** ವಿವಿಧ ಸ್ಥಳಗಳಲ್ಲಿ ಜಾನುವಾರುಗಳು, ಪಾದಚಾರಿಗಳು ಮತ್ತು ಸಣ್ಣ ವಾಹನಗಳು ರೈಲ್ವೆ ಜೋಡಣೆಯನ್ನು ದಾಟಲು ಅನುಕೂಲವಾಗುವಂತೆ 1 x 5 ಮೀ. x 2.65 ಮೀ. ಗಾತ್ರದ ಆರ್‌ಸಿಸಿ ಬಾಕ್ಸ್ ಮೂಲಕ (ಬ್ಯಾರೆಲ್ ಉದ್ದ = 18.36 ಮೀ) ಪಾದಚಾರಿಗಳ ಸಬ್‌ವೇ ಯ ನಿರ್ಮಾಣ. 8) **ಬೆಂಗಳೂರು-ಸಂಪಿಗೆ ರೋಡ್ ವಿಭಾಗ:** ವಿವಿಧ ಸ್ಥಳಗಳಲ್ಲಿ ಜಾನುವಾರುಗಳು, ಪಾದಚಾರಿಗಳು ಮತ್ತು ಸಣ್ಣ ವಾಹನಗಳು ರೈಲ್ವೆ ಜೋಡಣೆಯನ್ನು ದಾಟಲು ಅನುಕೂಲವಾಗುವಂತೆ 1 x 5 ಮೀ x 2.65 ಮೀ ಗಾತ್ರದ ಆರ್‌ಸಿಸಿ ಬಾಕ್ಸ್ (ಬ್ಯಾರೆಲ್ ಉದ್ದ = 18.36 ಮೀ) ರೋಲಿಂಗ್/ಲಾಂಚಿಂಗ್ ವಿಧಾನದ ಮೂಲಕ ಪ್ರಸ್ತಾವಿತ ಪಾದಚಾರಿ ಸಬ್‌ವೇಗಳು (ಒಟ್ಟು 11 ಸಂಖ್ಯೆಗಳು). 9) **ಯಶವಂತಪುರ-ಯಲಹಂಕ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪ-ವಿಭಾಗದಲ್ಲಿ ಎನ್‌ಟಿಐ ಲೇಔಟ್ ಬಳಿಯ ಕಿ.ಮೀ 13/200-300 ರಲ್ಲಿ ಸಹಕಾರ ನಗರದಲ್ಲಿ ರೋಲಿಂಗ್/ಲಾಂಚಿಂಗ್ ವಿಧಾನದ ಮೂಲಕ 1 x 4 x 2.25 ಗಾತ್ರದ ಆರ್‌ಸಿಸಿ ಬಾಕ್ಸ್ ಉಪಯೋಗಿಸಿ ಪ್ರಸ್ತಾವಿತ ಪಾದಚಾರಿ ರೈಲು ಸುರಂಗಮಾರ್ಗ. 10) ಬೆಂಗಳೂರು ವಿಭಾಗದ ಮೇಲೆ ರನ್ನಿಂಗ್ ರೂಮ್‌ಗಳು ಮತ್ತು ಸಿಬ್ಬಂದಿ ವಿಶ್ರಾಂತಿ ಕೊಠಡಿಗಳಲ್ಲಿ ಡಿಜಿ ಸೆಟ್‌ಗಳನ್ನು ಒದಗಿಸುವುದು. 11) ಕಿಮೀ. 42/750 – 43/350 ರಲ್ಲಿ ಟಿಎಸ್‌ಎ ಬಳಿ ಸುರಂಗದಲ್ಲಿ (600 ಮೀ ಉದ್ದ) ಬೆಳಕಿನ ಸುಧಾರಣೆ.-ವಿದ್ಯುತ್ ವ್ಯವಸ್ಥೆ 12) **ಬೆಂಗಳೂರು-ಸಂಪಿಗೆ ರೋಡ್ ವಿಭಾಗ:** ನಿಡವಂದ ನಿಲ್ದಾಣದಲ್ಲಿ ರಸ್ತೆ-1ಎ ಮೆಟ್ಟಿಲು ಮತ್ತು ಲಿಫ್ಟ್‌ನೊಂದಿಗೆ ಹೊಂದಿಕೊಳ್ಳುವಂತೆ ಪ್ರಸ್ತಾವನೆಯಂತೆ ಎಫ್‌ಓಬಿಯ ವಿಸ್ತರಣೆ. 13) ಬೆಂಗಳೂರು ವಿಭಾಗದಲ್ಲಿ 30 ಸ್ಥಳಗಳಲ್ಲಿ ಹೂಡಿಕೆ ದರ್ಜೆಯ ಇಂಧನ ಲೆಕ್ಕಪರಿಶೋಧನೆ (ಐಜಿಇಎ) ಶಿಫಾರಸುಗಳ ಅನುಷ್ಠಾನ.	ರೂ. 1,52,42,705.54	29.05.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ. ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ.
PUB/116/AAF/PRB/SWR/2026-27
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080-22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-14/1171/2026-27 ದಿನಾಂಕ: 13.05.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ (ಸಿವಿಲ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕು, ಆದಿನಾರಾಯಣಹೊಸಹಳ್ಳಿ ಹಂತ-2 ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳು ಹೊರಸೂಸುವ ತ್ಯಾಜ್ಯ ನೀರಿನ ಮಾರ್ಗದ ಜಾಲವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. 2) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕು, ಆದಿನಾರಾಯಣಹೊಸಹಳ್ಳಿ ಹಂತ-2 ಕೈಗಾರಿಕಾ ಪ್ರದೇಶದಲ್ಲಿ ಇತರೆ ಸಾಮಾನ್ಯ ತ್ಯಾಜ್ಯ ನೀರಿನ ಮಾರ್ಗದ ಜಾಲವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. 3) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕು, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳು ಹೊರಸೂಸುವ ತ್ಯಾಜ್ಯ ನೀರಿನ ಮಾರ್ಗದ ಜಾಲವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. 4) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕು, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ಇತರೆ ಸಾಮಾನ್ಯ ತ್ಯಾಜ್ಯ ನೀರಿನ ಮಾರ್ಗದ ಜಾಲವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05.06.2026 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು
DIPR/CP/645/Zen/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/2025-26/791 ದಿನಾಂಕ: 12.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in/ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/RD/WORK_INDENT35698	100.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **16.05.2026 ರಂದು 12.00 ಗಂಟೆಯ ವರೆಗೆ.** ಆ)ಕೆಪಿಪಿ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **20.05.2026 ರಂದು 16.00 ಗಂಟೆಯ ವರೆಗೆ** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **21.05.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/140

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಘಟಕ, ಕೊಠಡಿ ಸಂಖ್ಯೆ:5, ಅನೆಕ್ಸ್ ಬಿಲ್ಡಿಂಗ್-3, ಜಿಬಿಎ ಕೇಂದ್ರ ಕಚೇರಿ ಆವರಣ, ಎನ್.ಆರ್.ಚೌಕ, ಬೆಂಗಳೂರು-560002

ಸಂಖ್ಯೆ: ಉಅಸಂ/ಪಿಆರ್/158/2026-27 ದಿನಾಂಕ: 14-05-2026

"ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಸಾರ್ವಜನಿಕ ಪ್ರಕಟಣೆ"

ವಿಷಯ: ಜಿ.ಬಿ.ಎ ವ್ಯಾಪ್ತಿಯಲ್ಲಿ ಒಣಗಿರುವ/ಅಪಾಯಸ್ಥಿತಿಯಲ್ಲಿರುವ/ಶಿಥಿಲಾವಸ್ಥೆಯಲ್ಲಿರುವ ಮರಗಳು ಹಾಗೂ ರೆಂಬೆ ಕೊಂಬೆಗಳ ತೆರವಿಗೆ ಅರ್ಜಿ ಸಲ್ಲಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿನ ಸರ್ಕಾರಿ/ಸರ್ಕಾರಿಯೇತರ ಸಂಘ ಸಂಸ್ಥೆಗಳು/ಕಾರ್ಖಾನೆಗಳು/ಕೈಗಾರಿಕೆಗಳು/ಖಾಸಗಿ ಕಂಪನಿಗಳ ಆವರಣಗಳಲ್ಲಿ, ಒಣಗಿರುವ/ಅಪಾಯಸ್ಥಿತಿಯಲ್ಲಿರುವ ಮರಗಳು ಹಾಗೂ ರೆಂಬೆ ಕೊಂಬೆಗಳ ಮೇಲ್ವಿಚಾರಣೆಯು ಅಯಾ ಸಂಸ್ಥೆಗಳ ಮುಖ್ಯಸ್ಥರು/ನಿರ್ವಾಹಕರು/ ಮಾಲೀಕರು/ ಆಡಳಿತಗಾರರುಗಳೇ ನೇರ ಜವಾಬ್ದಾರರಾಗಿರುವುದರಿಂದ, ಯಾವುದೇ ಪ್ರಾಣ ಹಾನಿ, ಆಸ್ತಿ-ಪಾಸ್ತಿಗಳ ಹಾನಿಯಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ ಕಲಂ(8)(2) ರಲ್ಲಿ ಸೂಚಿಸಿರುವಂತೆ, ಅಪಾಯ ಸ್ಥಿತಿಯಲ್ಲಿರುವ ಹಾಗೂ ಒಣಗಿರುವ ಮರ/ರೆಂಬೆ-ಕೊಂಬೆಗಳ ತೆರವಿಗೆ ಈ ಕೆಳಕಂಡ ಅಧಿಕಾರಿಗಳ ಕಚೇರಿಯ ವಿಳಾಸಕ್ಕೆ ಅರ್ಜಿ ಸಲ್ಲಿಸಿ, ಅನುಮತಿಯನ್ನು ಪಡೆದು, ಕಡ್ಡಾಯವಾಗಿ ಸದರಿ ಮರ/ರೆಂಬೆ ಕೊಂಬೆಗಳನ್ನು ತೆರವುಗೊಳಿಸುವುದು ಆಯಾ ಸ್ವತ್ತಿನ ಮುಖ್ಯಸ್ಥರು ನಿರ್ವಾಹಕರು/ಮಾಲೀಕರು/ ಆಡಳಿತಗಾರರು ರವರುಗಳ ಕರ್ತವ್ಯವಾಗಿರುತ್ತದೆ ಎಂದು ತಿಳಿಸುತ್ತಾ, ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ 5 ನಗರ ಪಾಲಿಕೆ ವ್ಯಾಪ್ತಿಯ ಅರಣ್ಯ ಘಟಕದಲ್ಲಿ ಈ ಕೆಳಕಂಡ ಅಧಿಕಾರಿಗಳಿಗೆ ಕರ್ನಾಟಕ ವೃಕ್ಷ ಸಂರಕ್ಷಣಾ ನಿಯಮಗಳು 1977 ರ ನಿಯಮ(4)(1) ರಲ್ಲಿ ತಿಳಿಸಿರುವಂತೆ ನಮೂನೆ (1) ರಂತೆ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಿದೆ.

ಕ್ರ ಸಂ	ಅಧಿಕಾರಿ ಹೆಸರು/ಹುದ್ದೆ	ಇ-ಮೇಲ್/ಮೊಬೈಲ್ ಸಂ	ಅರ್ಜಿ ಸಲ್ಲಿಸಬೇಕಾದ ವಿಳಾಸ
1.	ಶ್ರೀ ಸುದರ್ಶನ್ ಜಿ.ಕೆ., ವೃಕ್ಷಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ.	defgba26@gmail.com 94806 83047	ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಕೊಠಡಿ ಸಂಖ್ಯೆ:05, ನೆಲ ಮಹಡಿ, ಅನೆಕ್ಸ್ ಕಟ್ಟಡ-3, ಕೇಂದ್ರ ಕಚೇರಿ ಆವರಣ, ಎನ್.ಆರ್ ಚೌಕ, ಬೆಂಗಳೂರು-560002.
2.	ಶ್ರೀ ಸಂತೋಷ್‌ಕುಮಾರ್ ಎಂ.ಎಸ್. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.	acfbccc@gmail.com 99450 38877	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಸುಭಾಷ್ ಚಂದ್ರ ಬೋಸ್ ಕಟ್ಟಡ, 21ನೇ ಮಹಡಿ, ಮೇಯೋಹಾಲ್, ಎಂ.ಜಿ.ರಸ್ತೆ, ಬೆಂಗಳೂರು-560001.
3.	ಶ್ರೀ ದಾಳೇಶ್.ಎ.ಎಲ್., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.	acfeastgba@gmail.com 99002 45013	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ, ಬೆಂಗಳೂರು ಪೂರ್ವ ನಗರ ಪಾಲಿಕೆ, ಆರ್.ಹೆಚ್.ಬಿ ಕಾಲೋನಿ, ಫಿನಿಕ್ಸ್ ಮಾಲ್ ಎದುರು, ಮಹದೇವಪುರ, ಬೆಂಗಳೂರು- 560048.
4.	ಶ್ರೀ ಸಂತೋಷ್ ಕುಮಾರ್ ಎಂ.ಎಸ್. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.	acfbwcc@gmail.com 99450 38877	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 2ನೇ ಮಹಡಿ, ಪಾಲಿಕೆ ಸೌಧ, 16ನೇ ಅಡ್ಡರಸ್ತೆ, ಫುಡ್‌ಸ್ಟ್ರೀಟ್, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-560040.
5.	ಶ್ರೀ ದಾಳೇಶ್.ಎ.ಎಲ್., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.	acfbncc@gmail.com 99002 45013	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ, ಬೆಂಗಳೂರು ಉತ್ತರ ನಗರ ಪಾಲಿಕೆ, ಅಟ್ಟೂರು, ಕ್ಲಾರಿಯನ್ ಹೋಟೆಲ್ ಪಕ್ಕ, ಕೆಂಪನಹಳ್ಳಿ ಮುಖ್ಯರಸ್ತೆ, ಬೆಂಗಳೂರು-560064.
6.	ಶ್ರೀ ಸಂತೋಷ್‌ಕುಮಾರ್ ಎಂ.ಎಸ್. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.	acfsouth@yahoo.com 99450 38877	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವರ ಕಚೇರಿ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, 9ನೇ ಅಡ್ಡರಸ್ತೆ, ಜಯನಗರ 2ನೇ ಹಂತ, ಬೆಂಗಳೂರು-560041.

ಸೂಚನೆ: ಮುಂಬರುವ ದಿನಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ, ತಮ್ಮ ತಮ್ಮ ಆವರಣದಲ್ಲಿರುವ ಮರಗಳ ಸ್ಥಿತಿಯನ್ನು ನಿರ್ಣಯಿಸಿ ಅಗತ್ಯ ಮತ್ತು ತ್ವರಿತ ಕ್ರಮಕೈಗೊಳ್ಳುವುದು ಸಂಬಂಧಪಟ್ಟ ಅರ್ಜಿದಾರರ/ಮಾಲೀಕರ/ಹಕ್ಕುದಾರರ ಜವಾಬ್ದಾರಿಯಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಗ್ರೇಟರ್ ಬೆಂಗಳೂರು ಪ್ರಾಧಿಕಾರ

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 01/2027/SBC, ದಿನಾಂಕ: 08.05.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಟೆಂಡರು ಕೊನೆಯ ದಿನಾಂಕ
L8265846	ಹೆವಿ ಡ್ಯೂಟಿ ರಿವರ್ಸಬಲ್ ಟೈಪ್ ಎಸ್ಕಲೇಟರ್‌ನ ವಿನ್ಯಾಸ, ತಯಾರಿಕೆ, ಪೂರೈಕೆ, ಸ್ಥಾಪನೆ, ಪರಿಶೀಲನೆ, ಕಾರ್ಯಾರಂಭ ಮತ್ತು ನಿರ್ವಹಣೆ. (ಪರಿಮಾಣ: 02 ನಂ.)	30.05.2026 10:30 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/109/AAF/PRB/SWR/2026-27
ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No. 134

17ರಿಂದ ಬೆಂಗಳೂರು-ಮುಂಬಯಿ ರೈಲು ಸಂಚಾರ ಆರಂಭ

ವಿಕ ಸುದ್ದಿಲೋಕ ಹುಬ್ಬಳ್ಳಿ

ಬೆಂಗಳೂರು ಮತ್ತು ಮುಂಬಯಿ ನಡುವೆ ನೂತನ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸಂಚಾರ ಸೇವೆ ಆರಂಭಗೊಳ್ಳಲಿದ್ದು, ಮೇ 17ರಂದು ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಲ್ಲಿ ಬೆಳಗ್ಗೆ ಅಧಿಕೃತ ಉದ್ಘಾಟನೆಗೊಳ್ಳಲಿದೆ.

ರೈಲು ಸಂಖ್ಯೆ 16553/16554 ಎಸ್‌ಎಂವಿಟಿ ಬೆಂಗಳೂರು-ಲೋಕಮಾನ್ಯ ತಿಲಕ್ ಟರ್ಮಿನಸ್ (ಎಲ್‌ಟಿಟಿ)- ಎಸ್‌ಎಂವಿಟಿ ಬೆಂಗಳೂರು ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲುಗಳ ನಿಯಮಿತ ಸೇವೆಗಳು ಎಸ್‌ಎಂವಿಟಿ ಬೆಂಗಳೂರಿನಿಂದ ಮೇ 23ರಿಂದ ಮತ್ತು ಎಲ್‌ಟಿಟಿ ಮುಂಬಯಿಯಿಂದ ಮೇ 24ರಿಂದ ಪ್ರಾರಂಭವಾಗಲಿವೆ.

ರೈಲು ಸಂಖ್ಯೆ 16553 ಎಸ್‌ಎಂವಿಟಿ ಬೆಂಗಳೂರು-ಎಲ್‌ಟಿಟಿ ಮುಂಬಯಿ ಎಕ್ಸ್‌ಪ್ರೆಸ್ ಪ್ರತಿ ಶನಿವಾರ ಮತ್ತು ಮಂಗಳವಾರ ಎಸ್‌ಎಂವಿಟಿ ಬೆಂಗಳೂರಿನಿಂದ ರಾತ್ರಿ 8.35 ಕ್ಕೆ ಹೊರಟು ಮರುದಿನ (ಕ್ರಮವಾಗಿ ಭಾನುವಾರ ಮತ್ತು ಬುಧವಾರ) ರಾತ್ರಿ 8.40ಕ್ಕೆ ಮುಂಬಯಿ ತಲುಪಲಿದೆ. ಮರು ಪ್ರಯಾಣ ರೈಲು (16554) ಎಲ್‌ಟಿಟಿ ಮುಂಬಯಿಂದ ರಾತ್ರಿ 23.15ಕ್ಕೆ ಹೊರಟು ಮರುದಿನ (ಕ್ರಮವಾಗಿ ಸೋಮವಾರ ಮತ್ತು ಗುರುವಾರ) ರಾತ್ರಿ 10.30ಕ್ಕೆ ಎಸ್‌ಎಂವಿಟಿ ಬೆಂಗಳೂರಿಗೆ ಆಗಮಿಸಲಿದೆ.

ಈ ರೈಲುಗಳು ಎರಡೂ ಮಾರ್ಗಗಳಲ್ಲಿ ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮಿರಜ್, ಸಾಂಗ್ಲಿ, ಕರಾಡ್, ಸತಾರಾ, ಲೋನಾಂಡ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ್ ಮತ್ತು ಠಾಣೆ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

ಲ್ಯಾಂಡಿಂಗ್‌ಗೆ ವಿಮಾನಗಳ ಪರದಾಟ

ಮಂಗಳೂರು: ಮಂಗಳೂರು ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲಾದ್ಯಂತ ಗುರುವಾರ ಸಂಜೆಯಿಂದ ಏಕಾಏಕಿ ಹವಾಮಾನದಲ್ಲಿ ವೈಪರೀತ್ಯವಾಗಿದ್ದು, ಇದರಿಂದ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಲ್ಯಾಂಡಿಂಗ್‌ಗೆ ಭಾರಿ ತೊಂದರೆಯಾಯಿತು.

ಹವಾಮಾನ ವೈಪರೀತ್ಯ

ಗುರುವಾರ ಸಂಜೆ 5 ಗಂಟೆ ಬಳಿಕ ಜಿಲ್ಲಾದ್ಯಂತ ಮೋಡ ಕವಿದು ಗುಡುಗು ಸಿಡಿಲಿನೊಂದಿಗೆ ಭಾರಿ ಮಳೆ ಆರಂಭವಾಯಿತು. ಹವಾಮಾನ ವೈಪರೀತ್ಯದಿಂದ ಬೆಂಗಳೂರಿನಿಂದ ಮಂಗಳೂರಿಗೆ ಆಗಮಿಸಿದ್ದ ಎರಡು ವಿಮಾನ ಲ್ಯಾಂಡಿಂಗ್ ಮಾಡಲು ಸ್ವಲ್ಪ ಹೊತ್ತು ಹರಸಾಹಸಪಟ್ಟವು. ಲ್ಯಾಂಡಿಂಗ್ ಮಾಡಲಾಗದೆ ವಿಟ್ಲ, ಬಂಟ್ವಾಳ ಸುತ್ತಮುತ್ತ ಪರಿಸರದಲ್ಲಿ ಈ ವಿಮಾನಗಳು ಕೆಳಮಟ್ಟದಲ್ಲಿ ಹಾರಾಟ ನಡೆಸಿದ್ದು, ಕೆಲ ಕಾಲ ನಾಗರಿಕರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದವು. ಕೆಲ ಹೊತ್ತಿನ ಸುತ್ತಾಟ ಬಳಿಕ ಎರಡು ವಿಮಾನಗಳು ಸುರಕ್ಷಿತವಾಗಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆದವು.

ಅಪರೂಪದ ಹಾವು ಜಪ್ತಿ

ಬೀದರ್: ತೆಲಂಗಾಣದಿಂದ ಮಹಾರಾಷ್ಟ್ರಕ್ಕೆ ಕಾರಿನಲ್ಲಿ ಸಾಗಿಸುತ್ತಿದ್ದ ಅಪರೂಪದ ರೆಡ್ ಸ್ಯಾಂಡ್ ಬೋವಾ ಜೀವಂತ ಹಾವನ್ನು ಬೀದರ್ ಅರಣ್ಯ ಇಲಾಖೆಯ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. 5.34 ಕೆ.ಜಿ ತೂಕದ ಈ ಅಪರೂಪದ ಹಾವನ್ನು ಔಷಧ ತಯಾರಿಸಲು, ಅಕ್ರಮ ಚಟುವಟಿಕೆಗಳಿಗೆ ಬಳಸಲಾಗುತ್ತದೆ ಎನ್ನಲಾಗಿದೆ. ತೆಲಂಗಾಣದ ಒಬ್ಬ ಹಾಗೂ ಮಹಾರಾಷ್ಟ್ರ ಮೂಲದ ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can
ಪ್ರಧಾನ ಕಚೇರಿ : 112, ಜೆ. ಸಿ. ರಸ್ತೆ, ಬೆಂಗಳೂರು - 560 002 www.canarabank.bank.in

ಕೆನರಾ ಬ್ಯಾಂಕಿನ 24ನೇ ವಾರ್ಷಿಕ ಮಹಾಸಭೆ

ಸಭೆಯ ಸೂಚನೆಯಲ್ಲಿ ನಿಗದಿಪಡಿಸಲಾದ ವ್ಯವಹಾರವನ್ನು ನಡೆಸಲು ಮಂಗಳವಾರ, ಜೂನ್ 23, 2026 ರಂದು ಬೆಳಿಗ್ಗೆ 11.00 ಗಂಟೆಗೆ ಬ್ಯಾಂಕ್ ತನ್ನ 24ನೇ ವಾರ್ಷಿಕ ಮಹಾಸಭೆಯನ್ನು ಇತರ ಶ್ರವ್ಯ-ದೃಶ್ಯ ವಿಧಾನಗಳ ಮೂಲಕ ನಡೆಸುತ್ತಿದೆ. ಇನ್ನು ಮುಂದೆ ಇದನ್ನು "ಇ -ಎಜಿಎಂ" ಎಂದು ಕರೆಯಲಾಗುತ್ತದೆ. ಬ್ಯಾಂಕಿನ ಪ್ರಧಾನ ಕಚೇರಿಯು ಸಭೆಯ ಸ್ಥಳವೆಂದು ಪರಿಗಣಿಸಲಾಗುತ್ತದೆ.

ಕಟ್-ಆಫ್ ದಿನಾಂಕ / ದಾಖಲೆ ದಿನಾಂಕ:
ಲಾಭಾಂಶಕ್ಕಾಗಿ ಷೇರುದಾರರ ಹಕ್ಕುಗಳನ್ನು ಪರಿಗಣಿಸಲು ದಾಖಲೆ ದಿನಾಂಕ ಶುಕ್ರವಾರ, ಜೂನ್ 12, 2026, ಮತ್ತು ಇ-ಮತದಾನಕ್ಕಾಗಿ ಮತ್ತು ವಿಸಿ/ಒಎವಿಎಂ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕಟ್-ಆಫ್ ದಿನಾಂಕ ಮಂಗಳವಾರ, ಜೂನ್ 16, 2026. ಕಟ್-ಆಫ್ ದಿನಾಂಕದಂದು ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಆಯಾ ಕಾರ್ಯಸೂಚಿ ಐಟಂಗಳ ಮೇಲೆ ಎಲೆಕ್ಟ್ರಾನಿಕ್ (ರಿಮೋಟ್ ಇ-ಮತದಾನ) ಮತ ಚಲಾಯಿಸಲು ಅರ್ಹರಾಗಿರುತ್ತಾರೆ, ಇದನ್ನು ಸಭೆಯ ಸೂಚನೆಯಲ್ಲಿ ನಿಗದಿಪಡಿಸಲಾಗುತ್ತದೆ.

ವಾರ್ಷಿಕ ಮಹಾಸಭೆಯ ಸೂಚನೆ ಮತ್ತು 2025-26 ರ ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಬ್ಯಾಂಕ್/ಠೇವಣಿ ಭಾಗವಹಿಸುವವರೊಂದಿಗೆ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಎಲ್ಲಾ ಷೇರುದಾರರಿಗೆ ಕಳುಹಿಸಲಾಗುತ್ತದೆ. ಡಿಮೆಟೀರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಇಮೇಲ್ ಐಡಿಗಳನ್ನು ನೋಂದಾಯಿಸದ ಷೇರುದಾರರು ತಮ್ಮ ಠೇವಣಿ ಭಾಗವಹಿಸುವವರ ಮೂಲಕ ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಸಂಬಂಧಿತ ಠೇವಣಿದಾರರೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಹಿಡುವಳಿಗಳನ್ನು ಡಿಮ್ಯಾಟ್ ಮಾಡಲು / ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ಗಳೊಂದಿಗೆ ಇಲ್ಲಿ ಒದಗಿಸುವಂತೆ ವಿನಂತಿಸಲಾಗಿದೆ:

ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಯುನಿಟ್ - ಕೆನರಾ ಬ್ಯಾಂಕ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ 31-32, ಗಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್‌ರಾಮಗುಡ, ಹೈದರಾಬಾದ್- 500 032 ದೂರವಾಣಿ: 1-800-309-4001 (ಟೋಲ್ ಫ್ರೀ), ಇ-ಮೇಲ್ ಐಡಿ - einward.ris@kfintech.com.

ಇದಲ್ಲದೆ, ಷೇರುದಾರರು https://ris.kfintech.com/clientservices/mobilereg/mobileemailreg.aspx ಲಿಂಕ್ ಅನ್ನು ಕ್ಲಿಕ್ ಮಾಡುವ ಮೂಲಕ ತಾತ್ಕಾಲಿಕವಾಗಿ ತಮ್ಮ ಇಮೇಲ್ ಐಡಿಯನ್ನು ನೋಂದಾಯಿಸಿಕೊಳ್ಳಬಹುದು. 24ನೇ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕ ವರದಿ 2025-26ರ ಸೂಚನೆಯನ್ನು ಬ್ಯಾಂಕಿನ ವೆಬ್‌ಸೈಟ್ www.canarabank.bank.in ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿಯೂ ಲಭ್ಯವಾಗುವಂತೆ ಮಾಡಲಾಗುತ್ತದೆ. ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯ ಮೂಲಕ ನಿಗದಿಪಡಿಸಿದಂತೆ ವ್ಯವಹಾರದ ಮೇಲೆ ದೂರದಿಂದಲೇ ಮತ ಚಲಾಯಿಸಲು ಷೇರುದಾರರು ಅವಕಾಶವನ್ನು ಹೊಂದಿರುತ್ತಾರೆ. ಡಿಮೆಟೀರಿಯಲೈಸ್ಡ್ ರೂಪ , ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಷೇರುದಾರರಿಗೆ ದೂರದಿಂದಲೇ ಮತ ಚಲಾಯಿಸುವ ವಿಧಾನವನ್ನು ಷೇರುದಾರರಿಗೆ ಸೂಚನೆಯಲ್ಲಿ ಒದಗಿಸಲಾಗುತ್ತದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ
ಸಂತೋಷ್ ಕುಮಾರ್ ಬಾರಿಕ್
ಕಂಪನಿ ಕಾರ್ಯದರ್ಶಿ

ದಿನಾಂಕ : 14.05.2026
ಸ್ಥಳ : ಬೆಂಗಳೂರು

Ministry of Culture
Government of India

"ಜ್ಞಾನಭಾರತಂ ಸಮೀಕ್ಷೆ ಉಪಕ್ರಮವು ನಮ್ಮ ದೇಶವಾಸಿಗಳಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ."
- ನರೇಂದ್ರ ಮೋದಿ
ಪ್ರಧಾನಮಂತ್ರಿ

ಭಾಗವಹಿಸಿ
ಜ್ಞಾನ ಭಾರತಂ
ಹಸ್ತಪ್ರತಿಗಳ ರಾಷ್ಟ್ರೀಯ ಸಮೀಕ್ಷೆ
ಭಾರತದ ಹಸ್ತಪ್ರತಿ ಪರಂಪರೆಯನ್ನು ಸಂರಕ್ಷಿಸಿ

75+ ಲಕ್ಷ ಹಸ್ತಪ್ರತಿಗಳು ಈಗಾಗಲೇ ಜ್ಞಾನ ಭಾರತಂ ಸಮೀಕ್ಷೆಯಲ್ಲಿ ನೋಂದಾಯಿಸಲ್ಪಟ್ಟಿವೆ

ಈ ರಾಷ್ಟ್ರೀಯ ಆಂದೋಲನದಲ್ಲಿ ನೀವ್ಯಾಕೆ ಭಾಗವಹಿಸಬೇಕು?

- ಅಪರೂಪದ ಮತ್ತು ಪ್ರಾಚೀನ ಹಸ್ತಪ್ರತಿಗಳನ್ನು ರಕ್ಷಿಸಲು
- ನಮ್ಮ ಕಾಲಾತೀತ ಜ್ಞಾನ ವ್ಯವಸ್ಥೆಯ ಸಾಂಸ್ಕೃತಿಕ ಮತ್ತು ಬೌದ್ಧಿಕ ಪರಂಪರೆಯನ್ನು ಸಂರಕ್ಷಿಸಲು
- ಸಂಶೋಧನೆ, ಶಿಕ್ಷಣ ಮತ್ತು ಸಾರ್ವಜನಿಕ ತೊಡಗಿಸಿಕೊಳ್ಳುವಿಕೆಗಾಗಿ ಹಸ್ತಪ್ರತಿಗಳ ಪ್ರವೇಶವನ್ನು ಬೆಂಬಲಿಸಲು

ಹಸ್ತಪ್ರತಿ ಇದೆಯಾ?
ಜ್ಞಾನ ಭಾರತಂ Appನಲ್ಲಿ ಇಂದೇ ನೋಂದಾಯಿಸಿಕೊಳ್ಳಿ!

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಆನ್‌ಲೈನ್ ಸರ್ವೆ ತುಂಬಿ
gyanbharatam.com

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಜ್ಞಾನ ಭಾರತಂ App ಡೌನ್‌ಲೋಡ್ ಮಾಡಿಕೊಳ್ಳಿ
GET IT ON Google Play | Download on the App Store

CBC 09101/13/0012/2627

CREDAI BENGALURU
ಕ್ರೆಡೈ ಬೆಂಗಳೂರು

ಜನ್ಮದಿನದ ಶುಭಾಶಯಗಳು

ಶ್ರೀ ಡಿ. ಕೆ. ಶಿವಕುಮಾರ್

ಕರ್ನಾಟಕದ ಗೌರವಾನ್ವಿತ ಉಪಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರಿಗೆ ಕ್ರೆಡೈ ಬೆಂಗಳೂರು ವತಿಯಿಂದ ಜನ್ಮದಿನದ ಹೃತ್ಪೂರ್ವಕ ಶುಭಾಶಯಗಳು.

ನಿಮ್ಮ ದೂರದೃಷ್ಟಿಯ ನಾಯಕತ್ವ , ಆಧುನಿಕ ಮೂಲಸೌಕರ್ಯಗಳ ನಿರ್ಮಾಣ ಮತ್ತು ಪ್ರಗತಿಪರ ಬೆಂಗಳೂರನ್ನು ರೂಪುಗೊಳಿಸುವ ನಿಮ್ಮ ಪ್ರಯತ್ನಗಳು ನಗರದ ಸಮಗ್ರ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ನಿರಂತರ ಪ್ರೇರಣೆಯಾಗಿವೆ.

ನಿಮ್ಮ ಜೀವನದಲ್ಲಿ ಯಶಸ್ಸು , ಉತ್ತಮ ಆರೋಗ್ಯ ಮತ್ತು ಸಂತೋಷ ಸದಾ ನೆಲೆಸಿರಲಿ ಎಂದು ಹಾರೈಸುತ್ತೇವೆ.

ಸಕ್ಕರೆ ರಫ್ತಿಗೆ ಕೇಂದ್ರ ಕಡಿವಾಣ

ನವದೆಹಲಿ: ಕೇಂದ್ರ ಸರಕಾರ ಪ್ರಸಕ್ತ ವರ್ಷದ ಸೆಪ್ಟೆಂಬರ್‌30 ರವರೆಗೆ ಸಕ್ಕರೆ ರಫ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಿದೆ. ಈ ಕ್ರಮವು ದೇಶೀಯ ಲಭ್ಯತೆಯನ್ನು ಹೆಚ್ಚಿಸಲು ಮತ್ತು ಬೆಲೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಈ ನಿರ್ಬಂಧವು ಕಚ್ಚಾ ಸಕ್ಕರೆ, ಬಿಳಿ ಸಕ್ಕರೆ ಮತ್ತು ಸಂಸ್ಕರಿಸಿದ ಸಕ್ಕರೆಗೆ ಅನ್ವಯವಾಗುತ್ತದೆ. ಆದರೆ ಈ ನಿರ್ಬಂಧವು ಸುಂಕದರ ಕೋಟಾ (ಟಿಆರ್‌ಕ್ಯೂ) ವ್ಯವಸ್ಥೆಯಡಿ ಐರೋಪ್ಯ ಒಕ್ಕೂಟ ಮತ್ತು ಅಮೆರಿಕಕ್ಕೆ ರಫ್ತು ಮಾಡಲಾಗುವ ಸಕ್ಕರೆಗೆ ಅನ್ವಯಿಸುವುದಿಲ್ಲ. ಈ ದೇಶಗಳಿಗೆ ರಫ್ತುದಾರರು ನಿರ್ದಿಷ್ಟ ಪ್ರಮಾಣದ ಸಕ್ಕರೆಯನ್ನು ರಫ್ತು ಮಾಡಬಹುದು. ಮುಂಗಡ ದೃಢೀಕರಣ ಯೋಜನೆ, ಸರಕಾರಗಳ ನಡುವಣ ಸಾಗಣೆ ಮತ್ತು ಈಗಾಗಲೇ ರಫ್ತುಪ್ರಕ್ರಿಯೆಯಲ್ಲಿರುವ ಸರಕುಗಳಿಗೂ ಈ ಆದೇಶ ಅನ್ವಯವಾಗುವುದಿಲ್ಲ.

2025–26ರ ಸಕ್ಕರೆ ಮಾರುಕಟ್ಟೆ ವರ್ಷಕ್ಕೆ (ಅಕ್ಟೋಬರ್‌ನಿಂದ ಸೆಪ್ಟೆಂಬರ್), ಆಹಾರ ಸಚಿವಾಲಯ ಆರಂಭದಲ್ಲಿ 15 ಲಕ್ಷ ಟನ್ ರಫ್ತಿಗೆ ಅವಕಾಶ ನೀಡಿತ್ತು, ನಂತರ ಹೆಚ್ಚುವರಿಯಾಗಿ 87,587 ಟನ್ ಸಕ್ಕರೆ ರಫ್ತಿಗೂ ಅವಕಾಶ ಕಲ್ಪಿಸಲಾಗಿತ್ತು. ಹೀಗಾಗಿ ಸುಮಾರು 16 ಲಕ್ಷ ಟನ್ ಸಕ್ಕರೆ ರಫ್ತಿಗೆ ಅವಕಾಶ ನೀಡಲಾಗಿತ್ತು.

ಉದ್ಯಮ ಸಂಸ್ಥೆ ಐಎಸ್‌ಎಂಎ ಪ್ರಕಾರ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹೆಚ್ಚಿನ ಕಬ್ಬು ಇಳುವರಿಯಿಂದಾಗಿ 2025–26ರ ಮಾರುಕಟ್ಟೆ ಹಂಗಾಮಿನಲ್ಲಿ ಏಪ್ರಿಲ್‌ವರೆಗೆ ಭಾರತದ ಸಕ್ಕರೆ ಉತ್ಪಾದನೆಯು ಶೇ. 7.32 ರಷ್ಟು ಏರಿಕೆಯಾಗಿ 27.52 ದಶಲಕ್ಷ ಟನ್‌ಗಳಿಗೆ ತಲುಪಿದೆ. ಎಥೆನಾಲ್ ತಯಾರಿಕೆಗೆ ಬಳಸಿದ ನಂತರ, 2025–26ರ ಮಾರುಕಟ್ಟೆ ಹಂಗಾಮಿನ ಒಟ್ಟು ಉತ್ಪಾದನೆಯು 29.3 ದಶಲಕ್ಷ ಟನ್ ಆಗಲಿದೆ ಎಂದು ಐಎಸ್‌ಎಂಎ ಅಂದಾಜಿಸಿದೆ. ಇದು 2024–25ರಲ್ಲಿ ದಾಖಲಾದ 26.12 ಮಿಲಿಯನ್ ಟನ್‌ಗಿಂತ ಹೆಚ್ಚಾಗಿದೆ. ಹಣದುಬ್ಬರದ ಆತಂಕಗಳನ್ನು ಪರಿಹರಿಸಲು ಸರಕಾರವು ಆಹಾರ ಉತ್ಪನ್ನಗಳ ಬೆಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತಿದೆ.

ಸೆನ್ಸೆಕ್ಸ್ 790 ಅಂಕ ಜಿಗಿತ: ಹೆಚ್ಚಿದ ಬಲ

ಮುಂಬಯಿ: ಬುಧವಾರ ಅಲ್ಪ ಮಟ್ಟದ ಏರಿಕೆ ಕಂಡಿದ್ದ ಷೇರುಪೇಟೆ ಗುರುವಾರ ಮೇಲೇರಿಕೆಯಲ್ಲಿ ಹೆಚ್ಚು ಬಲ ಮತ್ತು ವೇಗವನ್ನು ತೋರಿತು. ದೂರಸಂಪರ್ಕ, ಡಿಫೆನ್ಸ್ ಮತ್ತು ಖಾಸಗಿ ಬ್ಯಾಂಕ್‌ಗಳ ಷೇರುಗಳನ್ನು ಹೂಡಿಕೆದಾರರು ಉತ್ಸಾಹದಿಂದ ಖರೀದಿಸಿದ್ದರಿಂದ ಷೇರುಪೇಟೆ ಬಲವಾಯಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 75,398.72 ಅಂಕ ಜಿಗಿದು 75,398.72ರಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 277 ಅಂಕ ಏರಿ, 23,689.60ರಲ್ಲಿ ವಹಿವಾಟು ಕೊನೆಗೊಂಡಿತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾಕ್ಕೆ ಭೇಟಿ ನೀಡಿದ್ದು ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ಇದು ಆರ್ಥಿಕ ಸಹಕಾರಕ್ಕೆ ಹೆಚ್ಚು ಬಲ ನೀಡಲಿದೆ ಎಂದು ನಿರೀಕ್ಷಿಸಲಾಗಿದೆ. ಇದು ಹೂಡಿಕೆದಾರರಲ್ಲಿ ಹೊಸ ಬಲ ತುಂಬಿದೆ ಎಂದು ಹೂಡಿಕೆ ತಜ್ಞರು ಹೇಳಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ.1ರಷ್ಟು ಏರಿ ಬ್ಯಾರಲ್‌ಗೆ 106.48 ಡಾಲರ್ ಆಯಿತು. ವಿದೇಶಿ ಸಾಂಸ್ಥಿಕ ಹೂಡಿಕೆದಾರರು 4,703.15 ಕೋಟಿ ರೂ. ಮೌಲ್ಯದ ಈಕ್ವಿಟಿಗಳನ್ನು ಮಾರಾಟ ಮಾಡಿದರು.

ಸಗಟು ಹಣದುಬ್ಬರ ದಾಖಲೆ ಏರಿಕೆ

ಶೇ. 8.3ರಷ್ಟು ಜಿಗಿತ | ಕಳೆದ 42 ತಿಂಗಳಲ್ಲಿ ಭಾರಿ ಜಿಗಿತ | ಗ್ರಾಹಕರಿಗೆ ಆತಂಕ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಇಂಧನ ಬೆಲೆ ಏರಿಕೆಯಾಗಿದೆ. ಇದರಿಂದ ಸಗಟು ಬೆಲೆ ಹಣದುಬ್ಬರವು ಶೇ.8.3ಕ್ಕೆ ನೆಗೆದಿದೆ. ಇದು ಕಳೆದ ಮೂರೂವರೆ ವರ್ಷಗಳಲ್ಲೇ ಅತಿ ಹೆಚ್ಚು. ಸಗಟು ಬೆಲೆ ಸೂಚ್ಯಂಕ (ಡಬ್ಲ್ಯೂಪಿಐ) ಆಧಾರಿತ ಹಣದುಬ್ಬರ ಮಾರ್ಚ್‌ನಲ್ಲಿ ಶೇ.3.88 ರಷ್ಟಿತ್ತು. ಅದರ ಹಿಂದಿನ ವರ್ಷ ಏಪ್ರಿಲ್‌ನಲ್ಲಿ ಇದು ಶೇ. 0.85 ರಷ್ಟಿತ್ತು. ಜಾಗತಿಕ ತೈಲ ಬೆಲೆಗಳಲ್ಲಿನ ತೀವ್ರ ಏರಿಕೆಯು ಒಟ್ಟಾರೆ ಹಣದುಬ್ಬರದ ದರವು ಹೆಚ್ಚಾಗಲು ಕಾರಣವಾಯಿತು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಜಾಗತಿಕ ಬ್ರೋಕರೇಜ್ ಸಂಸ್ಥೆ ಬಾರ್ಕ್‌ಲೇಸ್ ಪ್ರಕಾರ, ಲೋಹಗಳು, ರಾಸಾಯನಿಕಗಳು ಮತ್ತು ಜವಳಿಗಳ ತಯಾರಿಕಾ ಬೆಲೆಗಳ ಏರಿಕೆಯಿಂದಾಗಿ ಮೂಲ ಸಗಟು ಬೆಲೆ ಹಣದುಬ್ಬರ ವರ್ಷದಿಂದ ವರ್ಷಕ್ಕೆ ಶೇ. 5 ಕ್ಕೆ ಏರಿದೆ. ಇಂಧನ ಮತ್ತು ಶಕ್ತಿ ವಿಭಾಗದಲ್ಲಿ ಸಗಟು ಬೆಲೆ ಹಣದುಬ್ಬರವು ಮಾರ್ಚ್‌ನಲ್ಲಿ ಶೇ. 1.05 ರಷ್ಟಿದ್ದದ್ದು ಏಪ್ರಿಲ್‌ನಲ್ಲಿ 42 ತಿಂಗಳ ಗರಿಷ್ಠ ಮಟ್ಟವಾದ ಶೇ.24.71ಕ್ಕೆ ಏರಿದೆ. ಕಚ್ಚಾ ಪೆಟ್ರೋಲಿಯಂನಲ್ಲಿ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ. 88.06 ರಷ್ಟಿತ್ತು, ಇದು ಅಕ್ಟೋಬರ್ 2021ರ ನಂತರದ ಗರಿಷ್ಠ ಮಟ್ಟವಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು ಮತ್ತು ಹರ್ಮುಜ್ ಜಲಸಂಧಿಯ ದಿಗ್ಬಂಧನ ಭಾರತಕ್ಕೆ ಕಚ್ಚಾ ಪೆಟ್ರೋಲಿಯಂ ಆಮದನ್ನು ಅಸ್ತವ್ಯಸ್ತಗೊಳಿಸಿದೆ. ಇದಲ್ಲದೆ ಜಾಗತಿಕವಾಗಿ ಕಚ್ಚಾ ತೈಲ ಬೆಲೆಗಳ ತೀವ್ರ ಏರಿಕೆಯು ಇಂಧನ ಆಮದನ್ನು ದುಬಾರಿಯಾಗಿಸಿದೆ.

ಏಪ್ರಿಲ್ 2026 ರಲ್ಲಿನ ಹಣದುಬ್ಬರದ ಸಕಾರಾತ್ಮಕ ದರಕ್ಕೆ ಪ್ರಮುಖವಾಗಿ ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮೂಲ ಲೋಹಗಳು, ಇತರ ಉತ್ಪಾದನಾ ಮತ್ತು ಆಹಾರೇತರ ವಸ್ತುಗಳ ಬೆಲೆಗಳಲ್ಲಿನ ಹೆಚ್ಚಳವೇ ಕಾರಣ ಎಂದು ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಜಾಗತಿಕ ಬ್ರೋಕರೇಜ್ ಸಂಸ್ಥೆ ಬಾರ್ಕ್‌ಲೇಸ್ ಪ್ರಕಾರ, ಸಗಟು ಹಣದುಬ್ಬರದ ಸತತ ಹೆಚ್ಚಳವು ಈ ಸರಣಿಯಲ್ಲಿ ದಾಖಲಾದ ಅತ್ಯಂತ ಹೆಚ್ಚು ಏರಿಕೆಯಾಗಿದೆ. ಜಾಗತಿಕ ತೈಲ ಬೆಲೆಗಳಲ್ಲಿನ ತೀವ್ರ ಏರಿಕೆಯು ಈ ಒಟ್ಟಾರೆ ದರದ ಹೆಚ್ಚಳಕ್ಕೆ ಕಾರಣವಾಯಿತು. ಲೋಹಗಳು, ರಾಸಾಯನಿಕಗಳು ಮತ್ತು ಜವಳಿಗಳ ತಯಾರಿಕಾ ಬೆಲೆಗಳ ಏರಿಕೆಯಿಂದಾಗಿ ಹಣದುಬ್ಬರ ವಾರ್ಷಿಕ ಆಧಾರದ ಮೇಲೆ ಶೇ. 5 ಕ್ಕೆ ಏರಿದೆ.

ಇಂಧನ ದರ ತುಟ್ಟಿ ಪರಿಣಾಮ

- ಹೆಚ್ಚಿನ ಇಂಧನ ಬೆಲೆಗಳ ಪ್ರಭಾವ ಉತ್ಪಾದನಾ ವಲಯದ ಮೇಲೆ ಆಗುವುದರಿಂದ ಮೇ 2026 ರಲ್ಲಿ ಹಣದುಬ್ಬರವು ಶೇ. 9ಕ್ಕೆ ಏರುವ ಸಾಧ್ಯತೆಯಿದೆ.

— ಮೇಘಾ ಅರೋರಾ ನಿರ್ದೇಶಕಿ ಇಂಡಿಯಾ ರೇಟಿಂಗ್ಸ್ ಅಂಡ್ ರಿಸರ್ಚ್

- ಕಚ್ಚಾ ತೈಲ ಬೆಲೆಗಳು ಏರಿಕೆ ಹಾದಿ ತುಳಿದಿರುವುದರಿಂದ ಮೇ ತಿಂಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಎರಡರ ಮೇಲೂ ಲೀಟರ್‌ಗೆ 5 ರೂ. ಹೆಚ್ಚಳ ನಿರೀಕ್ಷಿಸಲಾಗಿದೆ.

— ಜಾಗತಿಕ ಬ್ರೋಕರೇಜ್ ಸಂಸ್ಥೆ ಬಾರ್ಕ್‌ಲೇಸ್

ಎಲ್ಲವೂ ದುಬಾರಿ

ಆಹಾರ ಪದಾರ್ಥಗಳ ಹಣದುಬ್ಬರ ಮಾರ್ಚ್‌ನಲ್ಲಿ ಶೇ. 1.90 ರಷ್ಟಿದ್ದದ್ದು ಏಪ್ರಿಲ್‌ನಲ್ಲಿ ಶೇ. 1.98 ರಷ್ಟಾಗಿದೆ. ಆಹಾರೇತರ ವಸ್ತುಗಳಲ್ಲಿ ಹಣದುಬ್ಬರವು ಹಿಂದಿನ ತಿಂಗಳ ಶೇ. 11.5 ರಿಂದ ಏಪ್ರಿಲ್‌ನಲ್ಲಿ ಶೇ. 12.18 ಕ್ಕೆ ಏರಿದೆ. ಉತ್ಪಾದಿತ ಉತ್ಪನ್ನಗಳಲ್ಲಿ ಹಣದುಬ್ಬರವು ಹಿಂದಿನ ತಿಂಗಳ ಶೇ. 3.39 ಕ್ಕೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಶೇ. 4.62 ರಷ್ಟಿತ್ತು. ಇಂಧನ ಮತ್ತು ವಿದ್ಯುತ್ ಗುಂಪಿನಲ್ಲಿ, ಎಲ್‌ಪಿಜಿ ಹಣದುಬ್ಬರವು ಮಾರ್ಚ್‌ನಲ್ಲಿ ಮೈನಸ್ ಶೇ. 1.54 ರಷ್ಟಿದ್ದದ್ದು ಏಪ್ರಿಲ್‌ನಲ್ಲಿ ಶೇ. 10.92 ಕ್ಕೆ ಏರಿದೆ. ಪೆಟ್ರೋಲ್‌ನಲ್ಲಿ ಇದು ಹಿಂದಿನ ತಿಂಗಳ ಶೇ. 2.50 ರಿಂದ ಶೇ. 32.40 ಕ್ಕೆ ಏರಿದ್ದರೆ, ಹೈ-ಸ್ಪೀಡ್ ಡೀಸೆಲ್ ಹಣದುಬ್ಬರ ಮಾರ್ಚ್‌ನ ಶೇ. 3.26 ರಿಂದ ಏಪ್ರಿಲ್‌ನಲ್ಲಿ ಶೇ. 25.19 ಕ್ಕೆ ಏರಿದೆ. ಜಾಗತಿಕ ಕಚ್ಚಾ ತೈಲ ಬೆಲೆಯಲ್ಲಿ ಶೇ. 50 ರಷ್ಟು ಏರಿಕೆಯಾಗಿದ್ದರೂ ಸಹ, ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಚಿಲ್ಲರೆ ಬೆಲೆ ಏರಿಕೆಯ ಪರಿಣಾಮದಿಂದ ಜನಸಾಮಾನ್ಯರನ್ನು ರಕ್ಷಿಸಲು ಸರಕಾರ ಪೆಟ್ರೋಲ್, ಡೀಸೆಲ್ ಮತ್ತು ಗೃಹ ಬಳಕೆಯ ಎಲ್‌ಪಿಜಿ ದರಗಳನ್ನು ಸ್ಥಿರವಾಗಿರಿಸಿದೆ. ಆದಾಗ್ಯೂ, ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಹೆಚ್ಚಿಸಲಾಗಿದೆ.

ಸದಾ ನಿಮ್ಮ ಮಾರ್ಗದರ್ಶನದಲ್ಲಿ 5ನೇ ವರ್ಷದ ಸವಿನೆನಪು



ಶ್ರೀ ವೈ ಎಸ್ ಶಿವಣ್ಣ

ಸಂಸ್ಥಾಪಕರು / ಅಧ್ಯಕ್ಷರು ವಿ.ಎಲ್.ಎಸ್ ಸಮೂಹ ವಿದ್ಯಾಸಂಸ್ಥೆಗಳು

ನಮ್ಮೆಲ್ಲರ ಬಾಳಿಗೆ ದಾರಿದೀಪವಾಗಿದ್ದ ನೀವು ನಮ್ಮ ಮನೆ ಮನಗಳಲ್ಲಿ ನಿತ್ಯ ನೂತನ ನಿರಂತರ ಹಾಗೂ ಅಮರ.

ಸದಾ ನಿಮ್ಮ ನೆನಪಿನಲ್ಲಿ: ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಬಂಧು–ಮಿತ್ರರು, ಮತ್ತು ವಿ.ಎಲ್.ಎಸ್ ವಿದ್ಯಾಸಂಸ್ಥೆಯ ಎಲ್ಲಾ ಶಾಖೆಯ ಸಿಬ್ಬಂದಿವರ್ಗದವರು.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: Project-SWR-EL-TSS-CT
ದಿನಾಂಕ: 11.05.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ಮಲ್ಲಾಪುರ, ಬಸವನಬಾಗೇವಾಡಿ ರೋಡ್, ಮಿಂಚನಾಳ, ಲಚ್ಯಾಣ, ಸವಣೂರು, ಮೈಸೂರು ವಿಭಾಗದ ರಾಮಗಿರಿ, ತೊಲಹುಣಿಸೆ, ದೇವರಗುಡ್ಡ, ಶಿವಮೊಗ್ಗ ಟೌನ್, ಸಾಗರ ಜಂಬಗಾರು, ಹೊನ್ನವಳ್ಳಿ ರೋಡ್ ಮತ್ತು ಬೆಂಗಳೂರು ವಿಭಾಗದ ಸಿದ್ದಾಪುರ ಹಾಲ್ಟ್ ನಿಲ್ದಾಣಗಳಲ್ಲಿ ಜಿಎಸ್‌ಎಸ್ ಮತ್ತು ಟಿಎಸ್‌ಎಸ್ ರಲ್ಲಿ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ 200–100/1–1–1–1ಎ ಕರೆಂಟ್ ಟ್ರಾನ್ಸ್‌ಫಾರ್ಮರ್ ಅನ್ನು 400–200/1–1–1–1ಎ ಕರೆಂಟ್ ಟ್ರಾನ್ಸ್‌ಫಾರ್ಮರ್ ಅನ್ನಾಗಿ ಬದಲಾವಣೆ ಮಾಡುವುದು.	ರೂ. 88,48,866.16

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.06.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್ ಅನ್ನು ನೋಡುತ್ತಿರಿ.

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಯೋಜನೆ, ಬೆಂಗಳೂರು
PUB/121/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಎಸ್‌ಎಸ್‌ಕೆಎಲ್ ಸಿಇಒ ಆಗಿ ಭಾರದ್ವಾಜ್ ರಾಚಮಡಗು ನೇಮಕ

ಹೈದರಾಬಾದ್: ಕಳೆದ ಹಲವು ವರ್ಷಗಳಿಂದ ಕಂಪನಿಯ ಕಾರ್ಯ ಪ್ರಗತಿ ಮತ್ತು ಪರಿವರ್ತನೆಗೆ ಗಣನೀಯ ಕೊಡುಗೆ ನೀಡಿದ ಭಾರದ್ವಾಜ್ ರಾಚಮಡಗು ಅವರನ್ನು ಸಾಯಿ ಸಿಲ್ಕ್ಸ್ ಕಲಾಮಂದಿರ್ ಲಿಮಿಟೆಡ್ (ಎಸ್‌ಎಸ್‌ಕೆಎಲ್) ಗುರುತಿಸಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸಿದೆ. ಕಂಪನಿಯ ಐಪಿಒ ಜರ್ನಿಯಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಎಸ್‌ಎಸ್‌ಕೆಎಲ್ ಕಾರ್ಯವನ್ನು ಕ್ಷಿಪ್ರಗೊಳಿಸಲು ಒತ್ತಾಸೆ ನೀಡಿದ್ದಾರೆ ಎಂದು ಎಸ್‌ಎಸ್‌ಕೆಎಲ್ ಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಪ್ರಸಾದ್ ಚಲವಾದಿ ತಿಳಿಸಿದ್ದಾರೆ. ಸೀರೆ, ವಿವಾಹ ಉಡುಪು ಮತ್ತು ಫ್ಯಾಮಿಲಿ ಫ್ಯಾಶನ್‌ನಲ್ಲಿ ಎಸ್‌ಎಸ್‌ಕೆಎಲ್ ಹೆಚ್ಚು ಪ್ರಸಿದ್ಧವಾಗಿದೆ.

'ವಿದ್ಯಾರ್ಥಿಗಳು ಸಮಾಜಕ್ಕೆ ಕೊಡುಗೆ ನೀಡಬೇಕು'

ಬೆಂಗಳೂರು: ವಿದ್ಯಾರ್ಥಿಗಳು ನವ ಭಾರತದ ನಿರ್ಮಾಣ ಶಿಲ್ಪಿಗಳು. ವೃತ್ತಿಯ ಜತೆಗೆ ಸಮಾಜಕ್ಕೂ ಕೈಲಾದಷ್ಟು ಕೊಡುಗೆ ನೀಡಬೇಕು ಎಂದು ವಿಜಯಪುರ ರಾಮಕೃಷ್ಣ ಮತ್ತು ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ಎಂ.ಎಸ್ ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಆಯೋಜಿಸಿದ್ದ 'ಶೈಕ್ಷಣಿಕ ಸಾಧಕರ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದರು. "ನೀವು ವಿದ್ಯಾವಂತರಾದ ನಂತರ ಸ್ವ ಸುಖ-ಭೋಗದಲ್ಲಿ ಮೈಮರೆಯಬಾರದು," ಎಂದು ಮಾರ್ಗದರ್ಶನ ನೀಡಿದರು. ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಡಾ.ಎಂ.ಆರ್.ಸೀತಾರಾಮ್ ಉಪಾಧ್ಯಕ್ಷ ಎಮ್. ಆರ್. ಜಾನಕಿರಾಮ್, ನಿರ್ದೇಶಕ ಎಂ. ಆರ್. ರಾಮಯ್ಯ, ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್.ವಿ. ಪಾರ್ಶ್ವನಾಥ್, ಮುಖ್ಯಹಣಕಾಸು ಅಧಿಕಾರಿ ಜಿ. ರಾಮಚಂದ್ರ ಇದ್ದರು.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

SJES GROUP OF INSTITUTIONS Estd. 1979
We are looking for passionate and experienced educators to join our dynamic team.
1. PRT (PRIMARY TEACHERS) Subjects: English, EVS, GK B.A./B.Sc. + D.Ed./B.Ed.
2. TGT (TRAINED GRADUATE) Subjects: Maths, Science, Hindi Social Science, Art & Craft Graduate in subject + B.Ed.
3. PGT (POST GRADUATES) Subjects: Physics, Chemistry, Maths, Biology, Computer Science, Accountancy, Economics, Business Studies, English Master's in subject + B.Ed.
4. PU COLLEGE FACULTY Streams: Science & Commerce. M.Sc./ M.Com. / MCA + B.Ed.
Apply or Walk-in @ SJES Medahalli, Old Madras Road, Bangalore-49 Call : 9606016670 hr@sjesinstitutions.ac.in
ROUNAQH

WANTED-TEACHING-STAFF with 3-4 years of experience for school & PU college ,Kannada ,English Social science ,Mathematics, Physics ,History Economics, Music & dance .Pre-School teachers with NTT/ MTT Special educator Diploma in special education with BAPC & office staff with Accounting knowledge. Needed all Master Degree holders with BEd Mob : 9980777633 / 9980777933 jnanasangamaprathishtana @gmail.com

ENGLISH Trainers for Prerana Global Academy. Freshers/Exp(21-50) Relocating all India. Free Stay, Salary+ Inctv: 9741246900 / 7899806077

WANTED: Teachers in all subjects. Engineering Graduates can also apply. Ph. 9242484476, send Bio data to email: info16bfet@gmail.com

WANTED experienced teachers for high school in electronicity 1)science 2)social 3) Hindi and 4) Drivers. Contact: 8197984094/ 7406532264

ADMINISTRATION

EXECUTIVES

TARGET Oriented Sales Exe, Min 3yrs Exp, 2 Wheeler, Good English. Salary 25k, Big Incent. Big Value Orders. 8884504422/ 8123243297 info@behlinnov.com

OFFICE ASSISTANTS

OFFICE ASSISTANT: Retired persons also apply. Minimum : PUC with Computer knowledge Location: Vijayanagar, B.lore Call: 93412 89221 / 95911 89221.

SENIOR / TOP MANAGERS

CAREER Offer For Retd/VRS Bank/ State, Central Govt Employees/ Business Man/ Home Mkrs @ Hotel Krishnam Udupi Kanakapura Rd 15th May 2026 on Friday: 8197273568

ASIA'S Biggest Co. Need Financial Advisors, Become Business Leaders. Incentives & Salary. Ex Retired, Govt Employee, Business Person, House Wife. Call: 6364688752

MANAGERS

EMPLOYMENT Opportunity for Retired,VRS NRI's, Self Employed, Teachers & Homemakers. Fixed Pay & Incentives. Contact:-7026655688 /8197350128

LEGAL

ADVOCATE

WANTED-ADVOCATE for Real Estate Company hiring with 2–3 years' experience Location : #4921, 10th Floor, Highpoint - 4, Palace Road, old chalukya Bangalore - 560001. Contact : 9945222666 | Email : legal@sahassra.com

ಉದ್ಯೋಗವಕಾಶ ಬೆಂಗಳೂರಿನ ಹೆಸರಾಂತ ಕಂಪನಿಗೆ ನುರಿತ ಅನುಭವವುಳ್ಳ, ವಕೀಲರು (Advocate) ಬೇಕಾಗಿದ್ದಾರೆ. ಸಂಪರ್ಕಿಸಿ: 9187534379

MARKETING, ADVERTISING & SALES

SALES

WORK at home tele calling 120 calls 200 per day weekly payment 2) 5PM to 8 door to door pomplet distribution 6000 +Bus pass Babusapalya. 90524 70111

TIMES TRIBUTE PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

BUSINESS EXECUTIVES

WANTED BUSINESS EXECUTIVES (Graduates Male / Female with 2 Wheelers Must & Experience in Media Field Preffered) **CUSTOMER CARE EXE.** **TELECALLERS** (Females with Good Communication Skills)
ADVERTISING CO. in Basveswarnagar Banglore is Looking For Dynamic Candidates Good Salary + Incentives. Call: 9845411113

MEDICAL

MEDICAL

HIRING-DOCTORS An Excellent opportunity for Qualified & passionate BDS Doctors to join a well-established Dental Clinic at Ulsoor, Bangalore.Attractive salary package. Growth-oriented clinical exposure Immediate joining preferred Ct : 89515 49044 , 95338 93555

OTHER VACANCIES

GENERAL

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೇಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

ಮನೆಯಿಂದಲೇ ಕೆಲಸ ಡೇಟಾಎಂಟ್ರಿ, ಫಾರಂಫಿಲ್ಲಿಂಗ್, ಟೆಲಿಕಾಲರ್, ಪ್ಯಾಕಿಂಗ್, ಮಾಡುವುದು ಗೃಹಿಣಿಯರಿಗೆ, ಪುರುಷರಿಗೆ, ವಿದ್ಯಾರ್ಥಿಗಳಿಗೆ 18000-25000. ಸಂ: 7090177661

ಬೇಕಾಗಿದ್ದಾರೆ. ಆಫೀಸ್‌ಗಳಿಗೆ, ಶೋ ರೂಂಗಳಿಗೆ ಪಿಯುಸಿ, ಡಿಗ್ರಿಯವರು ನೇರ ನೇಮಕಾತಿ. ಸಂಬಳ– 18000/- ಸಂಪರ್ಕಿಸಿ: ಮೊ. 7760243115.

MULTIPLE VACANCIES

ಬೆಂಗಳೂರಿನಲ್ಲಿರುವ ಕಂಪನಿಗೆ ಕೆಲಸ ಮಾಡಲು 18 ವರ್ಷ ಮೇಲ್ಪಟ್ಟ ಯುವಕರು ಬೇಕಾಗಿದ್ದಾರೆ. Drivers (Goods)-20,000, Electrician-20,000, Carpenter-20,000, Helpers-15,000 Female Accts admin asst B.Com with tally 3 yrs & exp. Male admin asst age b/w 45-50 salary 18,000 with good English & ಕಂಪ್ಯೂಟರ್ Knowledge Ph: 9845026220.

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

WORK FROM HOME

EXCELLENT INCOME TOP MNC in BANGALORE Hiring Rtd Govt, Pvt, Defence, HNI, Bank, Teacher, VRS, NRI, IT, CA, Sr.CITIZEN, HOUSEWIFE Age 30-70 9845673443 8073400868

ಆಸ್ತಿಗಳು PROPERTY

BANGALORE PROPERTIES

OTHERS

Verna Developers Barton Centre, MG Road **9620253180** **We do Funding & Solutions/ Settlements for disputed Properties** **UNDER BANK,HIGH** Court, Civil/ DC/ AC/ Tribunal/ Tahsildar courts pending cases. 9620253180.

VARTHUR

1350SFT North West Corner, Commercial Site for Sale, with E Khatha, Further from Varthur Sub-Register Office CONTACT- 99809 88788

ಪ್ರವಾಸ TRAVEL

PACKAGE TOURS

17.5.2026, 1 ದಿನ ಧರ್ಮಸ್ಥಳ, ಸೌತಡ್ಕ ಶ್ರೀ ಮಹಾಗಣಪತಿ, ಕೂಕ್ಕಡ ವೈದ್ಯನಾಥೇಶ್ವರ ಸ್ವಾಮಿ ಇತ್ಯಾದಿ. 14.6.26. 1 ದಿನ ಕೇರಳ ಕೊಟ್ಟಿಯಾರು ಮಹದೇವ. ಸಂ: 94814 33157.

personal

CHANGE OF NAME

ನಾನು, Kavyashree K M, ತಂದೆ Manjunath K S, ನಂ.19, ಡಾ.ನಂಜಯ್ಯ ಕಾಂಪ್ಲೆಕ್ಸ್ , ಫ್ಲಾಟ್ ನಂ.3, 3ನೇ ಮಹಡಿ, 1ನೇ ಮೇನ್, ಹಂಪಿನಗರ, ವಿಜಯನಗರ, ಬೆಂಗಳೂರು- 560040. ನನ್ನ SSLC ಅಂಕಪಟ್ಟಿಯಲ್ಲಿ Kavyashree K M ಬದಲಿಗೆ Kavya Shree K M ಎಂದು ಉಲ್ಲೇಖಿಸಲಾಗಿದೆ. ಎರಡೂ ಹೆಸರುಗಳು ಒಂದೇ ವ್ಯಕ್ತಿಗೆ ಅಂದರೆ ನನಗೆ ಸೇರಿವೆ ಎಂದು ಈ ಮೂಲಕ ಘೋಷಿಸುತ್ತೇನೆ. ಇದನ್ನು ಮೇ 13, 2026 ರಂದು ಬೆಂಗಳೂರಿನಲ್ಲಿ ನೋಟರಿ H S Sakalesh Aradhya ಅವರ ಮುಂದೆ ಪ್ರಮಾಣೀಕರಿಸಲಾಗಿದೆ.

I, Raghuraj Bheemasena Rao Venkatapur S/o of Bheemasena Rao V K, Residing at at, 2A 906 Provident Park Square, Judicial Layout Near Talaghattapura metro station, Kanakapura Road, Talaghattapura, Dist Bangalore, 560062, here by declare that Raghuraj Bheemasena Rao Venkatapur And Raghuraj Venkatapur both the names belongs to me only, vide affidavit No :IN-KA53449842635886Y dt: 07.05.2026 for all Future purposes.

I, NANDHABALAN NAGARAJAN, S/o Late Nagarajan, residing at No. 104, Ground Floor, 4th Main Road, 3rd Cross, Cybele Green Layout, Kithagnur, Bangalore – 560036, hereby declare that the names "NANDHABALAN S.N" and "NANDHABALAN NAGARAJAN" appearing in different documents refer to one and the same person.

I, Usha Nadiger, W/o. Dattatray Sheshagirirao Nadiger, A-903, SJR Equinox Apartments, Velankani Drive, Doddathogur, E-City Phase-1, Bangalore-560100, have changed my name to USHA DATTATRAY NADIGER vide affidavit Dt: 14/05/26 before Notary M. Rajendra, Blr.

I, Prasham Girish Hodlur S/o Girish Krishnarao Hodlur R/o F1034 Juniper Brigade Orchards Devanahalli Bangalore 562110 do hereby solemnly declare that Prasham Hodlur and Prasham Girish Hodlur refer to one & same person namely myself. This declaration is for the purpose of passport and all other official records vide affidavit dtd 09/05/2026 sworn before notary SP Gandhi, Bangalore.

ನಾನು, ರಾಮ್‌ಕುಮಾರ್ ಶಿವಾನಂದನ್, ಎಸ್/ಓ ಶಿವಾನಂದನ್ ಗೋವಿಂದನ್ 1ನೇ ಮಾರ್ಚ್ 1982 ರಂದು ಫ್ಲಾಟ್ ನಂ 206, ಬ್ಲಾಕ್ 1, ಚನ್ನಸಂದ್ರದಲ್ಲಿ ಎಂವಿಜೆ ಕಾಲೇಜು ಹಿಂಭಾಗ, ಚನ್ನಸಂದ್ರದಲ್ಲಿ ವಾಸವಾಗಿದ್ದೇನೆ, ವಿಟಿಸಿ: ಕೆ ಚನ್ನಸಂದ್ರ, ಅಂಚೆ: ಕಾಡುಗೋಡಿ, ಬೆಂಗಳೂರು, ರಾಜ್ಯ ಕೋಡ್: 5 ಕರ್ನಾಟಕ, ಬೆಂಗಳೂರು 6 ಎಂದು ಬದಲಾಯಿಸಿದ್ದೇವೆ. ರಾಮ್‌ಕುಮಾರ್ ಶಿವ ಅವರು ಬೆಂಗಳೂರಿನಲ್ಲಿ IN-KA55044208740747Y ದಿನಾಂಕದ ಅಫಿಡವಿಟ್ ಅನ್ನು ವೀಕ್ಷಿಸಿದ್ದಾರೆ.

I, L SHRIYA REDDY aged about 18 years, D/o Sri Lakshmipathy Reddy P., residing at No. 379, Shree Nilaya, West Ring Road, Amarjyothi Layout, Domlur, Bengaluru - 560071, Karnataka, do hereby declare that the names SHRIYA REDDY, LAKSHMIPATHY SHRIYA REDDYand L SHRIYA REDDY are one and the same person. The initial "L" stands for Lakshmipathy. Henceforth, I shall be known and called as L SHRIYA REDDY for all purposes.vide affidavit dated 13.05.2026 sworn to before A.R.MUNEER AHMED Advocate and Notary Bangalore

14869686P HAV/CLK (SD) Vipan Kumar ASC records south my daughter name service records Ishika to Ishika Thakur, for all purpose.

I, Santhosh Kumar K, S/o Late Krishnan, R/o # 301 The Potters Hand Apartment Doddagubbi Main Road, Bangalore-560077, have changed my name to Santhosh Kumar.

I Rashmi S W/O, Ramesh Lakshminarayan R/o Flat No 303 Gangothri Ventures Balaji Layout Gollahalli Extension Electronic City Phase1 Bengaluru 560100 have changed my name to Rashmi Ramesh.

I, Aalif Ur Rehman Khaleel Ur Rehman S/o Khaleel Ur Rehman R/o #46/2, 10th Cross, Kanaka Nagar, R.T. Nagar Bangalore North-560032 have changed my name to Aalif Ur Rehman for all purposes.

I, Priya Srinivasan, W/o Suryaganesh Dhandabani, residing at No. 4, 1st Floor, Near Anikethan Public School, Bilijaji Village, Bengaluru Rural-560088, have changed my name to Priya for all purposes.

I,H.C.MANJULA W/o S.M.Srinivas residing at no.72,pf layout, vijayanagar , Bangalore -560040 have changed my name to H.S. Mamatha vide affidavit dated:11/5/2026 sworn before notary Deepa.M, Bangalore

I, Mahesh Bala Nagarkar S/o Bala Nagarkar R/o No F-1202 Wing 1 Kolte Patil Mirabilis Horamavu Agra Road Horamavu Bengaluru 560043 I have change my name from Mahesh Nagarkar to Mahesh Bala Nagarkar vide sworn before notary Uday Kumar K Bengaluru dated 06.05.2026

I Yamini W/o Late Devamruth D. M., R/o. #31, 1st Main, 1st Stage, Arekere, MICO Lyt., BG Road, Blr-076, have changed my minor son's name from Arnav Devamruth Doddamani to ARNAV YAMINI SENTHIL for all purposes vide affidavit Dt: 30/04/26 before Notary Dharani P., Blr.

I, SATHISH GOWDA K N, S/O NAGARAJU K H, aged 19 years, residing at VTC: Karekyathanahalli, Ragalahalli Post, Sira Taluk, Tumkur District, Karnataka – 572113, have changed my name to ISHAN GOWDA K N as per Affidavit No. IN-KA55438338771644Y dated 11/05/2026 issued by Notary Public H. GURUMURTHY, Sira.

I, Raghuraj Bheemasena Rao Venkatapur S/o Bheemasena Rao V K, Residing at, 2A 906 Provident Park Square, Judicial Layout Near Talaghattapura metro station, Kanakapura Road, Talaghattapura, Dist Bangalore, 560062, here by declare that Raghuraj Bheemasena Rao Venkatapur And Raghuraj Venkatapur both the names belongs to me only vide affidavit No: IN-KA53449842635886Y dt: 07. 05.2026 for all Future purposes

I, Syed Ghani R/o No 16 1st Floor Reading Room Street Munireddy Palya Bangalore 560006 Have Changed My Name to Syed Gani for All Purposes.

I, Mohammed Faizan Bintory R/o No 105 R2 Alpine Eco Apartment Doddanakundi Bangalore 560037 Have changed my name to Mohammed Faizaan Bintory All Purposes.

I, Manjula .V W/O Ranjith Kumar . E # No-323, 4th A Main Rd , 7th Cross, AMS Layout, Vidyaranyapura, Bangalore-560097 have changed my name to Manjula RanjithKumar for all purposes

I, Neelkant Ramesh Talreja S/o Ramesh Motiram Talreja R/o Kapleshwar No.16, Crescent road, Srikantan Lyt, Bengaluru 560001 have changed my name to Neelkant Talreja. I shall be called by this for all purposes

I, Talari Tadenna Ramya Nagini, C/o Hema Venkatesh Bezawada, 1B-804, Ebony 8th Floor, Godrej Woodsman Estate, Dasarahalli, Bengaluru, Karnataka - 560024 have changed my name to Talari Tadennagari Ramya Nagini

I, Avni ShriHarsha Kulkarni , R/o : 3122 Prestige Pinewood, Cauvery Colony,Koramangala bangalore : 560034 , declare that in passport my name has been mentioned has Avni Kulkarni. both the names are one & the same person.My Correct name is Avni Shriharsha Kulkarni .

I, PARWATI PRASHANTH W/o K. Prashanth, aged about 50 Years, residing at # 311, 12th 'A' Main Road, 6th Block, Rajajinagar, Bengaluru-560010, declare that PARWATI PRASHANTH and PARWATI referred to same person. Hence forth I will use PARWATI for all legal purposes.

I, R PREMRAJ S /O K RAJENDRA R/O 14 1ST Main 5th Cross Saraswathipuram Nandini Layout Bangalore karnataka-560096 have changed my religion from HINDUISM to CHRISTIANITY by my own will and conscience without any undue pressure or force by any person or institution.

I hitherto known as Venkata Subramaniam son of Swaminathan, resident of Flat G-1,Sai Brinda Apartments,7th Main Road,128/4,NGEF Layout Triangle Park, Sadananda Nagar, Bangalore North, Bengaluru, Karnataka -560038; have changed my name and shall hereafter be known as ADITYA.

I hitherto known as Sumeeta PM alias Sumeeta Parameswari Mariadas alias Sumeeta David D/o Mariadas Mandadi and wife of S K David R/o No. 517, Vishnuvallabha Nilaya,Balaji Layout, Vajarahalli, Bengaluru – 560062; have changed my name and shall hereafter be known as Sumeeta Starlina David.

I, NARAYAN G A alias NARAYAN GOPINATH ANANTHA, S/o Gopinath, R/o Flat No.201, Tower 2, Mana Capital Apts, Chikkanayakanahalli, Sarjapur Main Road, Carmelaram, Bengaluru - 560035, have changed my name as NARAYAN GOPINATH, vide affidavit dated 14.05.2026, sworn before notary Nijagunaradhya T.C, Bengaluru.

14845467P HAV/MT Aneesh C ASC centre south my father name in service records P Chandran to Punhen Chandran, for all purpose.

14845467P HAV/MT Aneesh C ASC centre south my mother name service records Jayasree C to Jayasree Chalangodan, Dt: 14.05.2026, for all purpose.

I, Syed Gani Sahib R/o No 2/6 Next to Eidgha Sulaiman Manzil Bhoopsandra Bangalore 560094 Have Changed to Syed Gani All Purposes.

I, Panikker Arun Sethumadhavan S/O Sethumadhavan Kalarickel R/O 101, Aswatha Griha, Hoodi, Bangalore have changed my name to Panicker Arun Sethumadhavan.

I Shaik Mohammed Riyaz Ahmed r/o 829/43 1st floor 6th G Main Street Gourav nagar JP Nagar 7th phase Bengaluru- have changed my son's name from Shaik Mohammed Irfan Ahamed to Shaik Mohammed Irfan Ahmed dt-15/06/26

I, Sridhara S, residing at Byrasandra Palya, Aralumallige-po, Dodda Ballapur Tq, Bengaluru rural 562103 have changed my name to Sridhar Shivakumar (Sridhar S) I shall be called by this name for all purposes

I, MRS. JONE JARO J, D/O JOHN ARULDOSS, R/O NO. 108, PHASE II, INNOVATIVE OAK GARDEN, BHOGANAHALLI, BENGALURU, KARNATAKA-560103 HAVE CHANGED MY NAME TO JONE JARO FOR ALL PURPOSES.

I, Ravishankar N S/o Natarajan R R/o E5-702, SNN Raj Greenbay, 1st Main Road, Electronic City Phase 2, Doddanagamangala, Bengaluru, Karnataka- 560100, have changed the name of my minor daughter Riya to Riyannikka Ravishankar aged 3 years.

I, Sreekar Badugu, S/O; Sadasiva Reddy Badugu, R/O: Flat NO 803, A Block Kristal Beryl Apartment, Bannerghatta Road, Gottigere, BLR - 560083. Have changed my name as Sreekar Pratap Reddy Badugu.

CHRISTENING

I, SAJIYA BEGUM ABDUL REHMAN, W/o Abdul Rehman.C, R.o at #3, JTS Building, Mosque Road, Basavanagudi, Bangalore-560004. I State that I have deleted my surname of ABDUL REHMAN along with my name SAJIYA BEGUM. Henceforth my name will be SAJIYA BEGUM in all records, Vide Affidavit Dated 13-05-2026 Sworn before Pathan Rahamathulla, Notary Public at Chikkaballapur Court Hall.

LOST & FOUND

LOST: I, CHETAN RAGHU G C, S/o Late. Channa Reddy G T, R/at #303, Purva Fountain Square, P Block Marathalli, Bangalore Marathahalli-560 037, have lost my Original Sale Deed dated.31-03-1982, bearing Document No.03/1982-83, registered at the office of the Sub-Registrar Jayanagar Bangalore, with respect to the property bearing Site No.2045, Measuring East To West 48 Feet and North to South 30 Feet, of 9th Block Jayanagar Extension Bangalore, lost while traveling from Mysore to Bangalore. Regarding this we have given police complaint, Lost Report No. 2189429/2026. If anybody found, kindly contact Mob no. 82776 42604 or submit to nearby police station.

I, B B Revati, r/at No. 637, 1st Main, 1st Stage, Indira Nagar, Bangalore have lost my Site Sale Document registered in my name as ANK-1-12587-2003-2004 in CD No. ANKD2, book I on 24.01.2004. Police complaint given vide Lost Report No. 2194040/2026 dt. 09.05.2026. If found please call 9449727772.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

GALLERIA

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-26701

ಮೈ.ಚ.ಜಯದೇವ ಅವಿಶ್ರಾಂತ ಧ್ಯೇಯಜೀವಿ ಪುಸ್ತಕ ಬಿಡುಗಡೆಯಲ್ಲಿ ಹೊಸಬಾಳೆ ಬಣ್ಣನೆ

ಸಂಘಕ್ಕೆ ಬೆವರು, ರಕ್ತ ಹರಿಸಿದ ಕರ್ಮಯೋಗಿ ಮೈ.ಚ.

■ **ವಿಕ ಸುದ್ದಿಲೋಕ** ಬೆಂಗಳೂರು

''ಕೇವಲ ಭಾವುಕ, ಧ್ಯೇಯ ಜೀವಿಯಾಗಿ ಉಳಿಯದೆ ತಮ್ಮ ಕನಸುಗಳನ್ನು ನನಸಾಗಿಸಲು ಹಗಲಿರುಳು ಶ್ರಮಿಸುವ ಕರ್ಮಯೋಗಿಯಾಗಿದ್ದ ಮೈ.ಚ.ಜಯದೇವ ಅವರು ಸಂಘ ಮತ್ತು ಸಂಘ ಪರಿವಾರದ ಸಂಸ್ಥೆಗಳನ್ನು ಕಟ್ಟಿ ಬೆಳೆಸಲು ಜೀವನದ ಬೆವರು ಹಾಗೂ ರಕ್ತ ಹರಿಸಿದ್ದಾರೆ,'' ಎಂದು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ನಗರದ ಪುರಭವನದಲ್ಲಿ ಗುರುವಾರ ಆಯೋಜಿಸಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಮೈ.ಚ.ಜಯದೇವ (ಮೈಸೂರು ಚನ್ನಬಸಪ್ಪ ಜಯದೇವ) ಅವರ ಬದುಕು-ನೆನಪನ್ನು ತೆರೆದಿಡುವ ಅವಿಶ್ರಾಂತ ಧ್ಯೇಯಜೀವಿ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

''ಜಯದೇವ ಅವರು ಇನ್‌ಸ್ಟಿಟ್ಯೂಟ್ ಬಿಲ್ಡರ್ ಆಗಿದ್ದರು. ಬೆಂಗಳೂರಿನ ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ಸಂಸ್ಥೆ ಹಾಗೂ ಅಬಲಾಶ್ರಮದಂತಹ ಹತ್ತಾರು ಸಂಸ್ಥೆಗಳಿಗೆ ಪ್ರೇರಕ ಶಕ್ತಿಯಾಗಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ತಿನ ಆರಂಭದ ದಿನಗಳಲ್ಲಿ ಅದರ ಜವಾಬ್ದಾರಿ ಹೊತ್ತು ಸಾಹಿತ್ಯ ಮತ್ತು ಸೇವಾ ಕ್ಷೇತ್ರದ ಪ್ರಮುಖ ಕೇಂದ್ರವಾಗಿ ರೂಪಿಸಿದ್ದಾರೆ,'' ಎಂದು ಬಣ್ಣಿಸಿದರು.

''ಬೆಂಗಳೂರಿನ ಜನತೆಗೆ ಹೊಸ ವಿಚಾರಧಾರೆಗಳನ್ನು ಪರಿಚಯಿಸುವಲ್ಲಿ ಈ ಉಪನ್ಯಾಸ ಮಾಲಿಕೆ ಪ್ರಮುಖ ಪಾತ್ರ ವಹಿಸಿದೆ. ಕೇವಲ ಹತ್ತು ಜನ ಸೇರುವ ಕಾರ್ಯಕ್ರಮಗಳ ಬದಲು, ಸಾವಿರಾರು ಜನರನ್ನು ಪುಸ್ತಕ ಬಿಡುಗಡೆಗೆ ಸೇರಿಸುವ ಹೊಸ ಸಂಪ್ರದಾಯವನ್ನು ಜಯದೇವ ಹುಟ್ಟು ಹಾಕಿದರು. ಅವರು ಯಾವುದೇ ವಿಷಯದ ಆಳ ಮತ್ತು ಹರವನ್ನು ಪೂರ್ತಿಯಾಗಿ ಅರ್ಥೈಸಿಕೊಳ್ಳುತ್ತಿದ್ದರು. ಕೇಳುವ ತಾಳ್ಮೆ ಅವರಲ್ಲಿತ್ತು. ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳ ನೂರಾರು ಜನರಿಗೆ ಜಯದೇವ ಮಾರ್ಗದರ್ಶಕರಾಗಿದ್ದರು.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈ.ಚ. ಜಯದೇವ ಅವರ ಬದುಕಿನ 'ಅವಿಶ್ರಾಂತ ಧ್ಯೇಯಜೀವಿ' ಪುಸ್ತಕವನ್ನು ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮತ್ತಿತರರು ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸಹ ಹಾಜರಿದ್ದರು.

ಬಿಎಸ್‌ವೈ ಸಂಘಕ್ಕೆ ಬರಲು ಜಯದೇವ ಕಾರಣ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಸಂಘಕ್ಕೆ ತಂದ ಶ್ರೇಯಸ್ಸು ಜಯದೇವ ಅವರದ್ದು. ಯಡಿಯೂರಪ್ಪನವರು ಒಮ್ಮೆ ಸಂಘದ ಕಾರ್ಯಕ್ರಮಕ್ಕೆ ಬರದಿದ್ದಾಗ, ಬೂಕನಕೆರೆಗೆ ಸೈಕಲ್‌ನಲ್ಲಿ ಹೋಗಿ ಅವರನ್ನು ವಿಚಾರಿಸಿಕೊಂಡು ಬಂದು, ಅವರನ್ನು ಪೂರ್ಣಾವಧಿ ಕಾರ್ಯಕರ್ತರಾಗಿ ಮಾಡುವಲ್ಲಿ ಜಯದೇವ ಪ್ರಮುಖ ಪಾತ್ರ ವಹಿಸಿದ್ದರು. **– ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ**

ಜಯದೇವ ಅವರು ತಮ್ಮನ್ನು ಸಂಘಕ್ಕೆ ಸಮರ್ಪಿಸಿಕೊಂಡಿದ್ದರು. ಸಂಘ ಕೊಟ್ಟಂತಹ ಕೆಲಸಗಳನ್ನು ಶ್ರದ್ಧೆ, ನಿಷ್ಠೆ, ಸಮರ್ಪಣಾ ಭಾವನೆಯಿಂದ ಮಾಡುತ್ತಿದ್ದರು. ಅವರ ಕುರಿತು ಸಂಗತಿಗಳನ್ನು ಪುಸ್ತಕದಲ್ಲಿ ಇನ್ನಷ್ಟು ಬರೆಯಬೇಕೆಂದುಕೊಂಡಿದ್ದೆ. ಆದರೆ, ಕಾರಣಾಂತರಗಳಿಂದ ಸಾಧ್ಯಗಲಿಲ್ಲ. **-ಡಾ. ಬಾಬು ಕೃಷ್ಣಮೂರ್ತಿ** ಲೇಖಕ

ಸಂಸ್ಥೆಯ ಅಧಿಕಾರ ಹಿಡಿಯುವ ಹಂಬಲ ತೋರದೆ ನಾಯಕತ್ವದ ಗುಣವಿರುವ ವ್ಯಕ್ತಿಗಳನ್ನು ರೂಪಿಸುವುದು ಅವರ ಪ್ರಮುಖ ಗುರಿಯಾಗಿತ್ತು,'' ಎಂದು ಶ್ಲಾಘಿಸಿದರು.

''28 ಅಧ್ಯಾಯಗಳ 276 ಪುಟಗಳ ಈ ಪುಸ್ತಕ ಒಬ್ಬ ವ್ಯಕ್ತಿಯ ಜೀವನ ಚರಿತ್ರೆ ಮಾತ್ರವಲ್ಲ ಅಥವಾ ಸ್ತುತಿ ಪಾಠವಲ್ಲ, ಅಭಿನಂದನಾ ಗ್ರಂಥವಲ್ಲ, ಇದು ಜಯದೇವ ಅವರ ವ್ಯಕ್ತಿತ್ವದ ಆಯಾಮಗಳನ್ನು ಪದರ ಪದರವಾಗಿ ಹೇಳುತ್ತದೆ. ಓದಿದ ನಂತರವೂ ಇದು ಮುಗಿದಿಲ್ಲ, ಈ ಪುಸ್ತಕದಲ್ಲಿ ಶೃಂಗಾರ ಸ್ವಲ್ಪ ಕಡಿಮೆ, ಬಂಗಾರ ಜಾಸ್ತಿಯಿದೆ,'' ಎಂದು ಅಭಿಪ್ರಾಯಪಟ್ಟರು.

ಕಿಂಗ್ ಮೇಕರ್ ವ್ಯಕ್ತಿತ್ವ: ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ''ಜಯದೇವ ಅವರು ಎಂದೂ ಅಧಿಕಾರಕ್ಕಾಗಿ ಅಥವಾ ಕಿಂಗ್ ಆಗಲು ಆಸೆ ಪಟ್ಟವರಲ್ಲ, ಅವರು ಸದಾ 'ಕಿಂಗ್ ಮೇಕರ್' ಆಗಿ ಕೆಲಸ ಮಾಡಿದ ಅಪರೂಪದ ವ್ಯಕ್ತಿತ್ವದವರು. ಅವರ ಪಾಲಿಗೆ ಉದ್ಯೋಗ ಕೇವಲ ಅರೆಕಾಲಿಕವಾಗಿತ್ತು. ಅವರ ಸಂಪೂರ್ಣ ಸಮಯ ಹಾಗೂ ಗಮನವೆಲ್ಲಾ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಗಳ ಮೇಲೆಯೇ ಇರುತ್ತಿತ್ತು,'' ಎಂದರು.

''ಜಯದೇವ ಅವರು ಅಧಿಕಾರ ಅಥವಾ ಪ್ರಚಾರಕ್ಕೆ ಆಸೆ ಪಟ್ಟವರಲ್ಲ, ಪ್ರಚಾರಕರಾಗಿ ಮರಳಿದಾಗ ತಮಗೆ ಸಿಗುತ್ತಿದ್ದ ಪ್ರಣಾಮವನ್ನು ಸಂಘ ಕಿತ್ತುಕೊಂಡಿದೆ ಎಂದು ಹಾಸ್ಯದ ಮೂಲಕವೇ ತಮ್ಮ ನಿರ್ಮೋಹವನ್ನು ವ್ಯಕ್ತಪಡಿಸುತ್ತಿದ್ದರು. ಜಯದೇವ ಅವರು ಅನಾರೋಗ್ಯದ ಸಂದರ್ಭದಲ್ಲಿ ಇತರರು ನೀಡಿದ ಚಿಕಿತ್ಸಾ ನೆರವನ್ನು ನಿರಾಕರಿಸಿ, ಸಂಘವೇ ತನ್ನ ಪಾಲಿಗೆ ಎಲ್ಲವೂ. ಅದು ಕೊಟ್ಟಿದ್ದಷ್ಟೇ ತನ್ನದು ಎಂದು ಘೋಷಿಸಿದ ಅವರ ಧೀಮಂತ ವ್ಯಕ್ತಿತ್ವ ಇಂದಿನ ಪೀಳಿಗೆಗೆ ಮಾದರಿ,'' ಎಂದರು. ಮಾಜಿ ಸಿಎಂ ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕರಾದ ಡಾ.ಅಶ್ವತ್ಥನಾರಾಯಣ, ಎಸ್.ಸುರೇಶ್ ಕುಮಾರ್, ಸಿ.ಟಿ.ರವಿ, ಲೇಖಕರಾದ ಡಾ.ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕುಮಾರ್ ಹಾಜರಿದ್ದರು.

ಗೇಮಿಂಗ್, ₹530 ಕೋಟಿ ಚರಾಸ್ತಿ ಜಪ್ತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಆನ್‌ಲೈನ್ ಗೇಮಿಂಗ್ ಆ್ಯಪ್ ಮೂಲಕ ಹಣ ದ್ವಿಗುಣದ ಆಮಿಷವೊಡ್ಡಿ ಜನರಿಗೆ ವಂಚಿಸಿದ ಪ್ರಕರಣ ಸಂಬಂಧ ಗೇಮ್ಸ್ ಕ್ರಾಫ್ಟ್ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಚೇರಿಗಳ ಮೇಲೆ ದಾಳಿ ಮಾಡಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಚಿನ್ನಾಭರಣ, ನಗದು ಸೇರಿದಂತೆ ಸುಮಾರು 530 ಕೋಟಿ ರೂ. ಮೌಲ್ಯದ ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಗೇಮ್ಸ್ ಕ್ರಾಫ್ಟ್ ಕಂಪನಿಯ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳ ಮೂಲಕ ನಡೆದಿದೆ ಎನ್ನಲಾದ ವಂಚನೆಗೆ ಸಂಬಂಧಿಸಿದಂತೆ ಇ.ಡಿ. ಅಧಿಕಾರಿಗಳು, ಮೇ 7ರಂದು ದಾಳಿ ಮಾಡಿದ್ದರು. ವಂಚನೆಗೆ ಸಂಬಂಧಿಸಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಪ್ರಕರಣ ದಾಖಲಾಗಿವೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

- ಮೇ 13ರವರೆಗೆ ಕಾರ್ಯಾಚರಣೆ
- 16 ಸ್ಥಳಗಳಲ್ಲಿ ಶೋಧನೆ
- 526.49 ಕೋಟಿ ರೂ. ಮೌಲ್ಯದ ಚರಾಸ್ತಿ ಜಪ್ತಿ
- 3.50 ಕೋಟಿ ರೂ. 2.30 ಕೆ.ಜಿ ಚಿನ್ನ, ವಜ್ರದ ಆಭರಣ ವಶ
- 11 ಲಕ್ಷರೂ. ನಗದು ಜಪ್ತಿ

ಗೇಮ್ಸ್ ಕ್ರಾಫ್ಟ್ ಕಂಪನಿಯು ಕಾನೂನುಬಾಹಿರವಾಗಿ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳನ್ನು ನಿರ್ವಹಿಸಿದೆ. ದೇಶದಾದ್ಯಂತ ಸುಮಾರು 3 ಕೋಟಿ ಜನರು ಈ ಆ್ಯಪ್‌ಗಳನ್ನು ಬಳಸುತ್ತಿದ್ದರು. ಆನ್‌ಲೈನ್ ರಿಯಲ್ ಮನಿ ಗೇಮಿಂಗ್ ನಿಷೇಧಿಸಲಾಗಿರುವ ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಮತ್ತಿತರ ರಾಜ್ಯಗಳಲ್ಲಿ ಕೋಟ್ಯಂತರ ಜನರಿಗೆ ಈ ಆ್ಯಪ್‌ಮೂಲಕ ಸುಮಾರು 1,154 ಕೋಟಿ ರೂ. ವಂಚಿಸಿದೆ. ಗೇಮಿಂಗ್ ಆ್ಯಪ್‌ಗಳಲ್ಲಿ ಆಟವನ್ನು ತಿರುಚಿ ಬಳಕೆದಾರರಿಗೆ ವಂಚಿಸಿದೆ. ನಂತರ ನಕಲಿ ವೆಚ್ಚ ತೋರಿಸಿ, ಅದನ್ನು ನಗದು ರೂಪದಲ್ಲಿ ವಾಪಸ್ ಪಡೆಯಲಾಗಿದೆ. ವಂಚನೆ ಸಂಬಂಧ ಕಂಪನಿಯ ನಿರ್ದೇಶಕರಾದ ದೀಪಕ್‌ಸಿಂಗ್ ಅಹ್ಲಾವತ್, ಪೃಥ್ವಿರಾಜ್ ಸಿಂಗ್, ವಿಕಾಸ್ ತನೇಜಾ ಅವರನ್ನು ಬಂಧಿಸಲಾಗಿದೆ. ಆರೋಪಿಗಳು ಜನರ ಹಣವನ್ನು ಅಕ್ರಮವಾಗಿ ವಿದೇಶಿ ಸಂಸ್ಥೆಗಳ ಖಾತೆಗಳಿಗೆ ವರ್ಗಾಯಿಸಿದ್ದಾರೆ. ಮ್ಯೂಚುವಲ್ ಫಂಡ್, ಬಾಂಡ್‌ಗಳು, ಚರಾಸ್ತಿ ಹಾಗೂ ಸ್ಥಿರಾಸ್ತಿಗಳಲ್ಲಿ ಹೂಡಿಕೆ ಮಾಡಿ ಅಕ್ರಮ ಎಸಗಿದ್ದಾರೆ. ಈ ಸಂಬಂಧ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಂಚನೆ ಹೇಗೆ: ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳ ಮೂಲಕ ಆರಂಭದಲ್ಲಿ ಬಳಕೆದಾರರಿಗೆ ಹೆಚ್ಚಿನ ಲಾಭದ ಆಮಿಷವೊಡ್ಡಲಾಗುತ್ತಿತ್ತು. ಆ್ಯಪ್ ಬಳಕೆದಾರರು ಒಮ್ಮೆ ದೊಡ್ಡ ಮೊತ್ತದ ಹಣವನ್ನು ಆಟದಲ್ಲಿ ತೊಡಗಿಸಿದ ನಂತರ, ತಾಂತ್ರಿಕ ಕೈಚಳಕದ ಮೂಲಕ ಅಥವಾ ವಂಚನೆ ಮಾರ್ಗಗಳನ್ನು ಬಳಸಿ ವಂಚಿಸಲಾಗಿದೆ. ಈ ಹಣವನ್ನು ವಿದೇಶಕ್ಕೆ ಅಥವಾ ಬೇರೆ ಬೇರೆ ಬೇನಾಮಿ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮರ್ಥ್, ಮೇಟಿ ಪ್ರಮಾಣ ವಚನ ಸ್ವೀಕಾರ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನಸಭೆ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಸಮರ್ಥ್ ಶಾಮನೂರು ಹಾಗೂ ಬಾಗಲಕೋಟೆಯ ಉಮೇಶ ಮೇಟಿ ಅವರು ಗುರುವಾರ ನೂತನ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ನೂತನ ಶಾಸಕರಿಗೆ ಪ್ರಮಾನ ವಚನ ಬೋಧಿಸಿದರು. ದಾವಣಗೆರೆ ಕ್ಷೇತ್ರದ ನೂತನ ಶಾಸಕ ಸಮರ್ಥ ತಮ್ಮ ತಾತ ಶಾಮನೂರು ಶಿವಶಂಕರಪ್ಪ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

ಸ್ಟಾರ್ಟ್‌ಅಪ್, ಶುದ್ಧ ಇಂಧನ ಸಹಭಾಗಿತ್ವಕ್ಕೆ ಚಿಲಿ ಒಲವು

ಬೆಂಗಳೂರು: ಸ್ಟಾರ್ಟ್‌ಅಪ್, ಶುದ್ಧ ಇಂಧನ ಹಾಗೂ ಹೊಸ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಲ್ಯಾಟಿನ್ ಅಮೆರಿಕ ರಾಷ್ಟ್ರವಾದ ಚಿಲಿ ಕರ್ನಾಟಕ ದೊಂದಿಗೆ ಸಹಭಾಗಿತ್ವ ಬಯಸಿದೆ.

ವಿದೇಶಾಂಗ ಸಚಿವ ಫ್ರಾನ್ಸಿಸ್ಕೊ ಪೆರೆಜ್ ಮೆಕೆನ್ನಾ ನೇತೃತ್ವದ ಚಿಲಿಯ ಉನ್ನತ ಮಟ್ಟದ ನಿಯೋಗವು ಗುರುವಾರ ವಿಧಾನಸೌಧದಲ್ಲಿ ಐಟಿ, ಬಿಟಿ ಮತ್ತು ಎಲೆಕ್ಟ್ರಾನಿಕ್ಸ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿ ಮಾಡಿ, ಈ ಸಂಬಂಧ ಚರ್ಚಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ''ಡೀಪ್ ಟೆಕ್, ನಾವೀನ್ಯತೆ ಕ್ಷೇತ್ರಗಳಲ್ಲಿ ರಾಜ್ಯದೊಂದಿಗೆ ಪಾಲುದಾರಿಕೆಗೆ ಚಿಲಿ ಆಸಕ್ತಿ ವಹಿಸಿದ್ದು, ಇದರಿಂದ ರಾಜ್ಯದ ನವೋದ್ಯಮಗಳು ಜಾಗತಿಕವಾಗಿ ತಮ್ಮ ವಹಿವಾಟು ವಿಸ್ತರಿಸಲು ಉತ್ತಮ ಅವಕಾಶಗಳು ಸಿಗಲಿವೆ. ಪರಸ್ಪರ ವಾಣಿಜ್ಯ ಸಂಬಂಧ ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಚರ್ಚೆ ನಡೆಯಿತು,'' ಎಂದು ತಿಳಿಸಿದರು.

''ಡೀಪ್-ಟೆಕ್, ಕೃತಕ ಬುದ್ಧಿಮತ್ತೆ (ಎಐ), ವೈಮಾಂತರಿಕ್ಷ ಮತ್ತಿತರ ಕ್ಷೇತ್ರಗಳಲ್ಲಿ ರಾಜ್ಯವು ಜಾಗತಿಕ ಕೇಂದ್ರವಾಗಿ ಗಮನ ಸೆಳೆಯುತ್ತಿದೆ. ಚಿಲಿ ಸಹಭಾಗಿತ್ವದಿಂದ ಈ ವಲಯಗಳಲ್ಲಿ ಅವಕಾಶಗಳು ಇನ್ನಷ್ಟು ಹೆಚ್ಚಲಿವೆ'' ಎಂದರು.

ಪಿಡಿಒಗಳಿಂದ ಗ್ರಾಪಂ ಸದೃಢ: ಖರ್ಗೆ

ಬೆಂಗಳೂರು: ಗ್ರಾ. ಪಂಗಳನ್ನು ಆರ್ಥಿಕ ಬೆಳವಣಿಗೆಯ ಎಂಜಿನ್ ಆಗಿ ಪರಿವರ್ತಿಸಲು ಪಿಡಿಒಗಳು ಶ್ರಮಿಸಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದರು.

ವಿಕಾಸಸೌಧದಲ್ಲಿ ಗುರುವಾರ ಪಿಡಿಒ ಕ್ಷೇಮಾಭಿವೃದ್ಧಿ ಸಂಘದ ಬೇಡಿಕೆಗಳ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಅವರು, ''ಪಿಡಿಒಗಳು ತಮ್ಮ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಆರ್ಥಿಕ ಸುಧಾರಣೆಗೆ ಇರುವಂತಹ ಸಾಧ್ಯತೆಗಳ ಬಗ್ಗೆ ಅಧ್ಯಯನ ನಡೆಸಿ ಪಂಚಾಯಿತಿಗಳನ್ನು ಆರ್ಥಿಕವಾಗಿ ಸದೃಢವಾಗಿಸ ಬೇಕು,'' ಎಂದು ಸೂಚನೆ ನೀಡಿದರು.

ಜಿಬಿಎ ಚುನಾವಣೆ ಸಿದ್ಧತೆ: ಬಿಜೆಪಿ ಮುಂದೂಡಿಕೆ

ಬೆಂಗಳೂರು: ಜಿಬಿಎ ಚುನಾವಣೆ ಸಂಬಂಧ ಬಿಜೆಪಿ ಉಸ್ತುವಾರಿ ರಾಮ್ ಮಾಧವ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆಯಬೇಕಿದ್ದ ಬಿಜೆಪಿ ಪ್ರಮುಖ ನಾಯಕರ ಸಭೆ ಮುಂದೂಡಿಕೆಯಾಗಿದೆ. ಕೇಂದ್ರ ಚುನಾವಣಾ ಆಯೋಗವು ಕರ್ನಾಟಕದಲ್ಲಿ ಎಸ್‌ಐಆರ್ ಘೋಷಣೆಯಾಗಿರುವ ಬೆನ್ನಲ್ಲೇ ಶುಕ್ರವಾರ ನಡೆಯುಬೇಕಿದ್ದ ಸಭೆ ಮುಂದೂಡಿಕೆಯಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಡಿಕೆಶಿ ಭೂ ಗ್ಯಾರಂಟಿ ನಂಬಬೇಡಿ: ಎಚ್ಡಿಕೆ

ಬೆಂಗಳೂರು: ನಗರದ ಸುಮಾರು 7 ಲಕ್ಷ 'ಬಿ' ಖಾತೆದಾರರಿಗೆ ಸರಕಾರ ಘೋಷಣೆ ಮಾಡಿರುವ 'ಭೂ ಗ್ಯಾರಂಟಿ'ಯು ದುಡ್ಡು ಹೊಡೆಯುವ ತಂತ್ರ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಜೆಡಿಎಸ್ ಕಚೇರಿ 'ಜೆಪಿ ಭವನ'ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಎ- ಖಾತಾ, ಇ-ಖಾತಾ ಹೆಸರಿನಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರು ದುಡ್ಡು ಹೊಡೆಯಲು ಹೊರಟಿದ್ದಾರೆ. ಅವರು ಹೇಳಿರುವುದೆಲ್ಲಾ ಸುಳ್ಳು,'' ಎಂದು ದೂರಿದರು. ''ಈ ಘೋಷಣೆ ನಂಬಿ ನಗರದ 'ಬಿ' ಖಾತೆದಾರರು ಹಣ ಕಟ್ಟುವುದು ಬೇಡ. ಎರಡು ವರ್ಷಗಳ ಸರಕಾರ ನಮ್ಮದೇ ಸರಕಾರ ಅಧಿಕಾರಕ್ಕೆ ಬರಲಿದ್ದು, ದುಡ್ಡು ಪಡೆಯದೇ ಜನರಿಗೆ ಅನುಕೂಲವಾಗುವಂತೆ ಈ ಕೆಲಸ ಮಾಡಿಕೊಡುತ್ತೇವೆ,'' ಎಂದು ಭರವಸೆ ನೀಡಿದರು.

ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆ 14ಕ್ಕೆ

ಬೆಂಗಳೂರು: ಮೇ 24ರಂದು ನಡೆಯಬೇಕಿದ್ದ ಎಂಬಿಎ ಹಾಗೂ ಎಂಸಿಎ ಕೋರ್ಸ್‌ಗಳ ಪ್ರವೇಶ ಪರೀಕ್ಷೆ (ಪಿಜಿ-ಸಿಇಟಿ)ಯನ್ನು ಜೂ.14ಕ್ಕೆ ಮುಂದೂಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಮೇ 24 ರಂದು ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ನಿಗದಿಯಾಗಿರುವ ಹಿನ್ನೆಲೆಯಲ್ಲಿ ಈ ಬದಲಾವಣೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಆದರೆ, ಈ ಹಿಂದೆ ಪ್ರಕಟಿಸಿದಂತೆ ಮೇ 23ರಂದು ಎಂ.ಟೆಕ್, ಎಂಬಿಎ ಹಾಗೂ ಡಿಸಿಇಟಿ ಪ್ರವೇಶ ಪರೀಕ್ಷೆಗಳು ನಡೆಯಲಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001

ಸಂ.: ಇಡಿ 18 ಯುಎನ್‌ಇ 2026 ದಿನಾಂಕ: 14.05.2026

ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿ

ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ https://hed.karnataka.gov.in ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/-
ಸರ್ಕಾರದ ಉಪ ಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)
ಉನ್ನತ ಶಿಕ್ಷಣ ಇಲಾಖೆ

DIPR/CP/651/SA//2026-27

ಭಾರತೀಯ ರಿಸರ್ವ್ ಬ್ಯಾಂಕ್
ನಿಯಂತ್ರಣ ವಿಭಾಗ, ಪ್ರಾದೇಶಿಕ ಕಚೇರಿ, ಬೆಂಗಳೂರು
www.rbi.org.in

ಸಾರ್ವಜನಿಕ ಸೂಚನೆ

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಏಪ್ರಿಲ್ 27,2026 ರ ಆದೇಶದ ಮೂಲಕ # 1101, ಕ್ಯಾಬಿನ್ ಸಂಖ್ಯೆ 311/ಬಿ, 3 ನ ಮಹಡಿ, 24ನೇ ಮುಖ್ಯ ರಸ್ತೆ, ಜೆ ಪಿ ನಗರ 1ನೇ ಹಂತ, ಬೆಂಗಳೂರು, ಕರ್ನಾಟಕ - 560 078 ಇಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವ ಮೆಸರ್ಸ್ ಕಲ್ಲರಕ್ಕಲ್ ಫಿನ್ ಕಾರ್ಪ್ ಪ್ರೈವೇಟ್ ಲಿಮಿಟೆಡ್ (CIN - U65910KA1994PTC015617) ಗೆ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ,1934 ರ ('ಅಧಿನಿಯಮ') ಕಲಂ 45-ಐ (ಎ)ಯಲ್ಲಿ ವ್ಯಾಖ್ಯಾನಿಸಿದಂತೆ ಬ್ಯಾಂಕೇತರ ಹಣಕಾಸು ಸಂಸ್ಥೆಯ ವ್ಯವಹಾರವನ್ನು ನಡೆಸಲು ಡಿಸೆಂಬರ್ 30, 2016 ರಂದು ನೀಡಲಾಗಿದ್ದ ನೋಂದಣಿ ಪ್ರಮಾಣಪತ್ರ ಸಂಖ್ಯೆ B-02.00161 ಅನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಕಲಂ 45-ಐಎ(6)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರದ್ದುಪಡಿಸಿದೆ. ಆದ್ದರಿಂದ ಕಂಪನಿಯು ಅಧಿನಿಯಮದ ಅಡಿಯಲ್ಲಿ ಬ್ಯಾಂಕೇತರ ಹಣಕಾಸು ಸಂಸ್ಥೆಯಾಗಿ ವ್ಯವಹಾರ ನಡೆಸುವಂತಿಲ್ಲ.

2. ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸಲಾಗಿರುವ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಹೆಸರುಗಳನ್ನು ಹೊಂದಿರುವ ಪಟ್ಟಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕೃತ ಜಾಲತಾಣ (ವೆಬ್ ಸೈಟ್) https://rbi.org.in/Scripts/BS_NBFCList.aspx ದಲ್ಲಿ ಪ್ರಕಟಿಸಲಾಗಿದೆ ಮತ್ತು ಅದನ್ನು ನಿಯಮಿತವಾಗಿ ಅಪ್ ಡೇಟ್ ಮಾಡಲಾಗುತ್ತಿದೆ.

ಇದನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಜಾರಿ ಮಾಡಲಾಗಿದೆ.

ಸ್ಥಳ: ಬೆಂಗಳೂರು ಸಹಿ/-
ದಿನಾಂಕ: ಮೇ 15, 2026 ಮಹಾ ವ್ಯವಸ್ಥಾಪಕರು

भारतीय रिज़र्व बैंक
विनियमन विभाग, क्षेत्रीय कार्यालय, बेंगलूरु
www.rbi.org.in

सार्वजनिक सूचना

भारतीय रिज़र्व बैंक अधिनियम, 1934 ('अधिनियम') की धारा 45-आईए (6) के अंतर्गत प्रदत्त शक्तियों का प्रयोग करते हुए भारतीय रिज़र्व बैंक ने अपने 27 अप्रैल 2026 के आदेश द्वारा, मेसर्स कल्लरक्कल फिनकॉर्प प्राइवेट लिमिटेड (सीआईएन - U65910KA1994PTC015617), जिसका पंजीकृत कार्यालय #1101, केबिन नंबर 311/B, तीसरी मंजिल, 24वीं मुख्य, जे पी नगर, पहला चरण, बैंगलोर, कर्नाटक – 560 078 में है, को जारी किया गया दिनांक 30 दिसंबर 2016 की पंजीकरण प्रमाणपत्र संख्या बी-02.00161 रद्द कर दिया है, जिसके अंतर्गत यह कंपनी अधिनियम की धारा 45-आई (ए) में परिभाषित गैर-बैंकिंग वित्तीय संस्था के रूप में व्यवसाय करती थी। इसलिए, यह कंपनी अधिनियम के तहत गैर-बैंकिंग वित्तीय संस्था के रूप में व्यवसाय नहीं कर सकती है।

2. जिन गैर-बैंकिंग वित्तीय कंपनियों के पंजीकरण प्रमाणपत्र रद्द कर दिए गए हैं, उनकी सूची, भारतीय रिज़र्व बैंक की आधिकारिक वेबसाइट, https://rbi.org.in/Scripts/BS_NBFCList.aspx पर प्रकाशित की जाती है, और इसे नियमित रूप से अद्यतन किया जा रहा है।

इसे जनहित में जारी किया गया है।

स्थान: बेंगलूरु हस्ता/-
दिनांक: 15 मई 2026 महाप्रबंधक

ಬ್ರೈಲ್ ಫುಟ್‌ಪಾತ್

ಸ್ಪರ್ಶದಾಯಕ ನೆಲಹಾಸು ಹೊಂದಿರುವ ಫುಟ್‌ಪಾತನ್ನು 'ಬ್ರೈಲ್ ಫುಟ್‌ಪಾತ್' ಎಂದು ಕರೆಯಲಾಗುತ್ತದೆ. ಇದು ಅಂಧರಿಗೆ ದಾರಿಯನ್ನು ಗುರುತಿಸಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾದ ವಿಶೇಷ ನೆಲಹಾಸಾಗಿದೆ. ಇದರಲ್ಲಿ ಎರಡು ಮಾದರಿಗಳಿವೆ. ನೇರವಾದ ಗೆರೆಗಳು (ದಾರಿ ತೋರಿಸಲು) ಮತ್ತು ಗುಂಡನೆಯ ಚುಕ್ಕೆಗಳು (ಅಪಾಯ ಅಥವಾ ತಿರುವುಗಳ ಬಗ್ಗೆ ಎಚ್ಚರಿಸಲು). ಬ್ರೈಲ್ ಫುಟ್‌ಪಾತ್ ಪರಿಕಲ್ಪನೆಯು ಅಂಧರು ನಗರದಲ್ಲಿ ಸ್ವತಂತ್ರವಾಗಿ ಸಂಚರಿಸಲು ಸಹಾಯ ಮಾಡುತ್ತದೆ. ನಗರಗಳನ್ನು ಅಂಧ ಸ್ನೇಹಿಯಾಗಿಸಲು ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಧ್ವನಿ ಸಂಕೇತಗಳು, ಮೆಟ್ಟಿಲುಗಳಲ್ಲಿ ಬ್ರೈಲ್ ಹ್ಯಾಂಡ್‌ರೈಲ್‌ಗಳು ಮತ್ತು ಮೆಟ್ರೋಗಳಲ್ಲಿ ಧ್ವನಿ ಪ್ರಕಟಣೆಗಳನ್ನು ಬಳಸಲಾಗುತ್ತದೆ. ಬ್ರೈಲ್ ಫುಟ್‌ಪಾತ್ ವ್ಯವಸ್ಥೆಯನ್ನು ಜಾರಿಗೆ ತಂದ ಜಗತ್ತಿನ ಮೊದಲ ದೇಶ ಜಪಾನ್. ಒಕಾಯಾಮ ನಗರದಲ್ಲಿ 1967ರಲ್ಲಿ ಅಂಧರಿಗೆ ನೆರವಾಗುವ ಈ ವ್ಯವಸ್ಥೆ ಮೊದಲ ಬಾರಿಗೆ ಲೋಕಾರ್ಪಣೆಗೊಂಡಿತು.

ವಿಕ ಜಾಣ ತಾಣ

ಒಡಿಶಾ ಮೂಲದ 37 ಕಾರ್ಮಿಕರ ರಕ್ಷಣೆ

ಜೀತ ಪದ್ಧತಿಯಿಂದ ಕಾರ್ಮಿಕರಿಗೆ ಮುಕ್ತಿ | ಜಿಲ್ಲಾಡಳಿತದ ಯಶಸ್ವಿ ಕಾರ್ಯಾಚರಣೆ

■ **ವಿಕ ಸುದ್ದಿಲೋಕ** ಹೊಸಪೇಟೆ (ವಿಜಯನಗರ)

ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡಿ ಗ್ರಾಮದಲ್ಲಿ ಜೀತ ಪದ್ಧತಿಗೆ ಒಳಗಾಗಿದ್ದ ಒಡಿಶಾ ಮೂಲದ 37 ಕಾರ್ಮಿಕರನ್ನು ರಕ್ಷಿಸಿ, ತವರು ರಾಜ್ಯಕ್ಕೆ ಕಳಿಸುವಲ್ಲಿ ಜಿಲ್ಲಾಡಳಿತ ಯಶಸ್ವಿಯಾಗಿದೆ,

ರಕ್ಷಿಸಲ್ಪಟ್ಟವರಲ್ಲಿ 10 ಮಕ್ಕಳು, 11 ಮಹಿಳೆಯರು ಹಾಗೂ 16 ಪುರುಷರು ಸೇರಿದ್ದಾರೆ. ಇವರೆಲ್ಲರೂ ಒಡಿಶಾದ ಬಲಂಗೀರ್ ಮತ್ತು ನವರಂಗ್‌ಪುರ ಜಿಲ್ಲೆಯವರಾಗಿದ್ದಾರೆ. ಬೆಳಗಾವಿ ಮೂಲದ 'ಸ್ಪಂದನ' ಎಂಬ ಎನ್‌ಜಿಒ ನೀಡಿದ ಖಚಿತ ಮಾಹಿತಿ ಮೇರೆಗೆ ಸಹಾಯಕ ಆಯುಕ್ತ ವಿವೇಕಾನಂದ ಅವರ ನೇತೃತ್ವದ ತಂಡ ಕಾರ್ಮಿಕರು ಇದ್ದ ಸ್ಥಳದ ಮೇಲೆ ಹಠಾತ್ ದಾಳಿ ನಡೆಸಿದೆ. ಕಾರ್ಮಿಕರು ಪುಟ್ಟ ಮನೆಗಳಲ್ಲಿ ಕನಿಷ್ಠ ಮೂಲ ಸೌಕರ್ಯಗಳಿಲ್ಲದೇ ದಯನೀಯ ಸ್ಥಿತಿಯಲ್ಲಿ ಬದುಕುತ್ತಿರುವುದು ಬೆಳಕಿಗೆ ಬಂದಿದೆ.

ಜೀವ ಬೆದರಿಕೆ: ''ಒಡಿಶಾದಿಂದ ಆರು ತಿಂಗಳ ಹಿಂದೆ ಪ್ರತಿ ವ್ಯಕ್ತಿಗೆ 40,000 ರೂ. ಮುಂಗಡ ಹಣ ನೀಡಿ ಇಲ್ಲಿಗೆ ಕರೆತರಲಾಗಿತ್ತು. ಆರಂಭದಲ್ಲಿ ಆರು ತಿಂಗಳ ಅವಧಿಗೆ ಅಷ್ಟೇ ಕೆಲಸ ಮಾಡಿಸುವುದಾಗಿ ಹೇಳಿದ್ದರು. ಕೆಲಸದ ಆಧಾರದ ಮೇಲೆ ಹಣ ನೀಡುವ ಭರವಸೆಯನ್ನೂ ನೀಡಲಾಗಿತ್ತು. ಹಣದ ಆಸೆಗೆ ವಾರವಿಡೀ ಮೈಮುರಿದು ಕೆಲಸ ಮಾಡಿದರೂ ಇಡೀ ಕುಟುಂಬಕ್ಕೆ ವಾರಕ್ಕೆ ಕೇವಲ 500 ರೂ. ನೀಡಲಾಗಿದೆ. ನಮ್ಮ ಅವಧಿ ಮುಗಿದಿದ್ದು ವಾಪಸ್ ಹೋಗುತ್ತೇವೆ ಎಂದರೂ ಜೀವ ಬೆದರಿಕೆಯೊಡ್ಡಿ ಕೂಡಿಹಾಕಲಾಗಿತ್ತು. ಹೊರ ಪ್ರಪಂಚದ ಸಂಪರ್ಕವಿಲ್ಲದಂತೆ ಕಾಯಲು ಸೆಕ್ಯೂರಿಟಿ ಗಾರ್ಡ್ ನೇಮಿಸಲಾಗಿತ್ತು,'' ಎಂದು ಸಂತ್ರಸ್ತರು ಅಳಲು ತೋಡಿಕೊಂಡಿದ್ದಾರೆ.

ಜೀತ ಪದ್ಧತಿಯಿಂದ ಮುಕ್ತರಾದ ಒಡಿಶಾ ಮೂಲದ ಕಾರ್ಮಿಕರು ಹಾಗೂ ಮಕ್ಕಳಿಗೆ ಹೊಸಪೇಟೆಯ ರೈಲು ನಿಲ್ದಾಣದಲ್ಲಿ ಡಿಸಿ ಕವಿತಾ ಎಸ್ ಮನ್ನಿಕೇರಿ ಅವರು ಹೂವು ನೀಡಿ ಶುಭ ಹಾರೈಸಿ ಬೀಳ್ಕೊಟ್ಟ ಕ್ಷಣ.

ಕಾರ್ಮಿಕರ ರಕ್ಷಣೆ ಜತೆಗೆ ಅವರೆಲ್ಲರನ್ನೂ ಒಡಿಶಾಕ್ಕೆ ರೈಲಿನಲ್ಲಿ ಕಳುಹಿಸುವಲ್ಲಿ ಜಿಲ್ಲಾಡಳಿತ ವಿಶೇಷ ಕಾಳಜಿ ವಹಿಸಿತು. ಕಾರ್ಮಿಕರೊಂದಿಗೆ ಇಬ್ಬರು ಪೊಲೀಸ್ ಮತ್ತು ಕಂದಾಯ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ರಕ್ಷಣೆಗಾಗಿ ಕಳುಹಿಸಿಕೊಡಲಾಗಿದೆ. ಕಾರ್ಮಿಕರ ಬೀಳ್ಕೊಡುವ ವೇಳೆ ಡಿಸಿ ಕವಿತಾ ಎಸ್. ಮನ್ನಿಕೇರಿ, ಎಸ್ಪಿ ಎಸ್.ಜಾಹ್ನವಿ, ಡಿವೈಎಸ್ಪಿ ಪಿ.ಮುರಳೀಧರ, ಉಪವಿಭಾಗಾಧಿಕಾರಿ ವಿವೇಕಾನಂದ ಇದ್ದರು.

ಮೂವರ ವಿರುದ್ಧ ಪ್ರಕರಣ

ನಂದಿಬಂಡಿಯ ಸಣ್ಣದುರುಗಪ್ಪ ಅವರ 2.64 ಎಕರೆ ಜಮೀನು ಮತ್ತು ಸರಕಾರಕ್ಕೆ ಸೇರಿದ 1.61 ಎಕರೆ ಜಮೀನಿನಲ್ಲಿ ಆಂಧ್ರಪ್ರದೇಶದ ನೆಲ್ಲೂರಿನ ಶ್ರೀನಿವಾಸ ಎಂಬುವವರು ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡಲು ಈ ಕಾರ್ಮಿಕರನ್ನು ಶೆಡ್‌ನಲ್ಲಿ ಕೂಡಿ ಹಾಕಿದ್ದರು. ಈ ಬಗ್ಗೆ ಕಾರ್ಮಿಕ ಇಲಾಖೆಯ ನಿರೀಕ್ಷಕ ಜಿ.ಬಿ.ದೂಪದ್ ನೀಡಿದ ದೂರು ಆಧರಿಸಿ ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಶ್ರೀನಿವಾಸ್, ಮಹಾದೇವರಾವ್ ಮತ್ತು ವೆಂಕಟಪ್ರಸಾದ್ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

ಜೀತದಂತಹ ಅನಿಷ್ಟ ಪದ್ಧತಿ ಬೆಂಬಲಿಸುವವರ ವಿರುದ್ಧ ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಲಾಗುವುದು.

-ಕವಿತಾ ಎಸ್. ಮನ್ನಿಕೇರಿ
ಜಿಲ್ಲಾಧಿಕಾರಿ, ವಿಜಯನಗರ

ಥಾಮಸ್ ಕುಕ್‌ನಿಂದ ಗ್ರ್ಯಾಂಡ್ ಹಾಲಿಡೇ ಕಾರ್ನಿವಲ್

ಹುಬ್ಬಳ್ಳಿ: ಪ್ರವಾಸ ಪ್ರಿಯರಿಗಾಗಿ ಥಾಮಸ್ ಕುಕ್ ವತಿಯಿಂದ ಕೊಪ್ಪಿಕರ್ ರಸ್ತೆಯಲ್ಲಿರುವ ಹುಬ್ಬಳ್ಳಿ ಶಾಖೆಯಲ್ಲಿ ಮೇ 15, 16ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯ ತನಕ 'ಹಾಲಿಡೇ ಕಾರ್ನಿವಲ್' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಇಂದು ಮತ್ತು ನಾಳೆ ಹುಬ್ಬಳ್ಳಿಯಲ್ಲಿ ಆಯೋಜನೆ

ಇದು ಪ್ರವಾಸ ಯೋಜನೆ ರೂಪಿಸಲು ಬಯಸುವವರಿಗೆ ಅತ್ಯುತ್ತಮ ವೇದಿಕೆಯಾಗಿದೆ. ಇಲ್ಲಿ ಪ್ರವಾಸದ ವಿವಿಧ ಆಯ್ಕೆಗಳು, ವಿಶೇಷ ಪ್ಯಾಕೇಜುಗಳು ಹಾಗೂ ಆಕರ್ಷಕ ರಿಯಾಯಿತಿಗಳು ಲಭ್ಯವಿರುತ್ತವೆ. ಈಗಾಗಲೇ ಮುಂಗಡ ಕಾಯ್ದಿರಿಸಿದರೆ ಶೇ. 20ರ ತನಕ ವ್ಯಾಲ್ಯೂ ಬ್ಯಾಕ್ ಆಫರ್ ಇದೆ. ಗ್ರಾಹಕರು 40,000 ಪಾಯಿಂಟ್ ತನಕ ಪ್ರಯೋಜನ ಪಡೆಯಬಹುದು. ಇದೇ ಕಾರ್ಯಕ್ರಮದಲ್ಲಿ ಹಾಲಿಡೇ ಪೇ, ಹಾಲಿಡೇ ಫ್ರೀ ಮತ್ತು ಉಚಿತ ಅಮೆರಿಕನ್ ಟೂರಿಸ್ಟರ್ ಬ್ಯಾಗ್ ಜೊತೆಗೆ ಫಾರೆಕ್ಸ್ ಕಾರ್ಡ್ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 9900982392 ಸಂಪರ್ಕಿಸಬಹುದು ಎಂದು ಥಾಮಸ್ ಕುಕ್ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮೇ 30ರಿಂದ ಎಸ್‌ಐಆರ್

» ಮೊದಲ ಪುಟದಿಂದ

ಮೂರನೇ ಹಂತದ ರಾಜ್ಯಗಳು: ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಅರುಣಾಚಲ ಪ್ರದೇಶ, ಹರಿಯಾಣ, ಜಾರ್ಖಂಡ್, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದಿಲ್ಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರ, ಉತ್ತರಾಖಂಡ ಜತೆಗೆ ಕೇಂದ್ರಾಡಳಿತ ಪ್ರದೇಶಗಳಾದ ಡಿಯು-ಡಮನ್, ದಾದರ್ ಮತ್ತು ನಗರ್ ಹವೇಲಿ, ಚಂಡೀಗಢದಲ್ಲಿ ಮತಪಟ್ಟಿ ಸಮಗ್ರ ಪರಿಷ್ಕರಣೆ ನಡೆಯಲಿದೆ.

ಮೂರನೇ ಹಂತದಲ್ಲಿ 36 ಕೋಟಿ ಮತದಾರರು ಪರಿಷ್ಕರಣೆಯಲ್ಲಿ ಭಾಗಿಯಾಗಲಿದ್ದಾರೆ. ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಲಡಾಕ್ ಹೊರತುಪಡಿಸಿ, ದೇಶವ್ಯಾಪಿ 'ಎಸ್‌ಐಆರ್' ಪೂರ್ಣಗೊಳ್ಳಲಿದೆ. ಹವಾಮಾನ ಪರಿಸ್ಥಿತಿ ಆಧರಿಸಿ ಈ ಮೂರು ಪ್ರದೇಶಗಳಲ್ಲಿ ಪ್ರತ್ಯೇಕ 'ಎಸ್‌ಐಆರ್' ದಿನಾಂಕ ಘೋಷಣೆ ಮಾಡಲು ಆಯೋಗ ನಿರ್ಧರಿಸಿದೆ.

ವಿಜಯಪುರ ಜಿಲ್ಲೆ ವಿಕ ಸೂಪರ್ ಸ್ಟಾರ್ ರೈತರು

ವಿಜಯಪುರ ಜಿಲ್ಲೆಯ ನಿಡಗುಂದಿಯ ಗ್ರಾಮೀಣ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಗುರುವಾರ 8ನೇ ವರ್ಷದ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಸಾಧಕ ಕೃಷಿಕರಾದ ಮುದ್ದೇಬಿಹಾಳ ತಾಲೂಕಿನ ಹುಲ್ಲೂರಿನ ರಾವಸಾಹೇಬ ದೇಸಾಯಿ, ನಿಡಗುಂದಿಯ ಚನ್ನಮ್ಮ ಅಶೋಕ ಸುರಪುರ, ಕೊಲ್ಹಾರ ತಾಲೂಕಿನ ಮುಳವಾಡದ ಬಸವರಾಜ ಸಿದ್ದಾಪೂರ, ಚಡಚಣ ತಾಲೂಕಿನ ಇಂಚಗೇರಿಯ ಶೆಟ್ಟೆಪ್ಪ ಡಿ.ನಾವಿ, ವಿಜಯಪುರ ತಾಲೂಕಿನ ಕಗ್ಗೋಡು ಗ್ರಾಮದ ನವೀನ ಮಂಗಾನವರ, ಮುದ್ದೇಬಿಹಾಳ ತಾಲೂಕಿನ ಚೊಂಡಿ ಗ್ರಾಮದ ಶ್ರೀಶೈಲ ಮೇಟಿ ಅವರಿಗೆ ಜಿಲ್ಲಾಮಟ್ಟದ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ರುದ್ರೇಶ್ವರ ಮಠದ ರುದ್ರಮುನಿ ಶಿವಾಚಾರ್ಯರು, ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಎಸ್.ಪಾಟೀಲ, ಕೆಬಿಜೆಎನ್‌ಎಲ್ ವಲಯ ಅರಣ್ಯಾಧಿಕಾರಿ ಮಹೇಶ ಪಾಟೀಲ, ತಾಲೂಕು ಪಂಚಾಯಿತಿ ಇಒ ವೆಂಕಟೇಶ ವಂದಾಲ, ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಉಪಸ್ಥಿತರಿದ್ದರು.

ಐದು ತಾಸು ವಚನಾನಂದ ಸ್ವಾಮೀಜಿ ವಿಚಾರಣೆ

ಲೈಂಗಿಕ ದೌರ್ಜನ್ಯ ಸಂಬಂಧ 50ಕ್ಕೂ ಹೆಚ್ಚು ಪ್ರಶ್ನೆ

■ **ವಿಕ ಸುದ್ದಿಲೋಕ** ಬೆಳ್ಳೂಡಿ (ಹರಿಹರ)

ಬಾಲಕನೊಬ್ಬನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಎದುರಿಸುತ್ತಿರುವ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಗೆ ಗುರುವಾರ ಖುದ್ದು ಹಾಜರಾಗಿ, 5 ತಾಸು ವಿಚಾರಣೆ ಎದುರಿಸಿದರು.

ಠಾಣೆ ಎದುರು ಭಕ್ತರಿಂದ ಟ್ರಸ್ಟಿಗಳ ವಿರುದ್ಧ ಘೋಷಣೆ

ನಂತರ ನಗರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಸಹಕರಿಸಿ, ಸಂಜೆ ಮರಳಿ ಮಠಕ್ಕೆ ತೆರಳಿದರು. ವಿಚಾರಣೆ ಸಂದರ್ಭ ಠಾಣೆಯ ಎದುರು ಶ್ರೀಗಳ ಬೆಂಬಲಿಗರು ಜಮಾಯಿಸಿ ಮಠದ ಟ್ರಸ್ಟಿಗಳ ವಿರುದ್ಧ ಘೋಷಣೆ ಕೂಗಿದರು.

2024ನೇ ಮಾರ್ಚ್ 20ರಂದು ವಿದ್ಯಾರ್ಥಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಆರೋಪಿಸಿ, ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕಿನ ಶ್ಯಾಬಳ ಮೂಲದ ಮಹಿಳೆ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಮೇ 8ರಂದು ದೂರು ನೀಡಿದ್ದರು. ಪರಿಣಾಮ ಸ್ವಾಮೀಜಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ಹರಿಹರ ಠಾಣೆಗೆ ವರ್ಗಾವಣೆ ಮಾಡಿದ ಹಿನ್ನೆಲೆಯಲ್ಲಿ ವಿಚಾರಣೆ ಕೈಗೆತ್ತಿಕೊಳ್ಳಲಾಗಿದೆ.

ಲೈಂಗಿಕ ಕಿರುಕುಳ ನಡೆಸಿದ್ದೇನೆಂದು ನನ್ನ ವಿರುದ್ಧ ದಾಖಲಾಗಿರುವ ದೂರಿನ ಕುರಿತು ಬುಧವಾರ ಸಂಜೆ ಪೊಲೀಸರು ಪೀಠಕ್ಕೆ ಆಗಮಿಸಿ ವಿಚಾರಣೆಗೆ ಬರುವಂತೆ ತಿಳಿಸಿದ್ದರು. ಕಾನೂನನ್ನು ಗೌರವಿಸಿ ವಿಚಾರಣೆಗೆ ಹಾಜರಾಗಿ ಸಹಕರಿಸಿದ್ದೇನೆ. ಸತ್ಯಕ್ಕೆ ಯಾವಾಗಲೂ ಜಯ ಸಿಕ್ಕೇ ಸಿಗುತ್ತದೆ ಎಂಬ ವಿಶ್ವಾಸ ನನಗಿದೆ.



- ವಚನಾನಂದ ಸ್ವಾಮೀಜಿ

ಬೆಳಗ್ಗೆ ವಚನಾನಂದ ಸ್ವಾಮೀಜಿ ಅವರನ್ನು ಪೊಲೀಸರು ಠಾಣೆಗೆ ಕರೆತಂದು ವಿಚಾರಣೆ ನಡೆಸಿದರು. ವಿದ್ಯಾರ್ಥಿ ಸ್ನಾನಗೃಹಕ್ಕೆ ಹೋದಾಗ ಜತೆಯಲ್ಲಿ ಹೋಗಿ ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದರು ಎಂಬ ದೂರಿನ ಕುರಿತಾದ 50 ಪ್ರಶ್ನೆಗಳನ್ನು ವಿಚಾರಣೆ ವೇಳೆ ಕೇಳಲಾಗಿದೆ. ಅದಕ್ಕೆ ಸ್ವಾಮೀಜಿಯವರಿಂದ ಉತ್ತರ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ದಾವಣಗೆರೆ ಗ್ರಾಮೀಣ ಡಿವೈಎಸ್ಪಿ ಜಿ. ಎಸ್. ಬಸವರಾಜು, ಗ್ರಾಮೀಣ ವೃತ್ತ ನಿರೀಕ್ಷಕ ಸುರೇಶ್ ಸಗರಿ, ಮಹಿಳಾ ಪಿಎಸ್‌ಐ ಮಂಜುಳಾ ಅವರು ವಿಚಾರಣೆ ನಡೆಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು- 560023, ದೂರವಾಣಿ ಸಂಖ್ಯೆ:080-29557023, ಇ-ಮೇಲ್: cekhsdrp@gmail.com

ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ-3/ಸಇಂ-5/ಟೆಂಡರ್/2026-27/345 ದಿನಾಂಕ:14.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಅಲ್ಪಾವಧಿ ಟೆಂಡರ್‌ರನ್ನು ಆಹ್ವಾನಿಸಲಾಗಿದೆ.

Sl. No	Description of works	Approximate Amount Put to tender (Excluding GST) (Rs. in lakhs)	EMD (Rs.in Lakhs)	Stipulated period for Completion (including monsoon)
1	Providing Additional Infrastructure Facilities to CHC Malkhed in Sedam Taluk of Kalaburagi District.	158.31	2.38	06 Months
2	Providing Consultancy Service for Preparation of DPR, Architectural, Structural and other service Drawings for the work of Construction of an Integrated 200 Bedded Cancer Hospital and Institute, inclusive of linear accelerator with Bunkers, along with Necessary Equipment and Furniture at BMCRC, Ballari.	116.00 (Including GST)	1.75	18 Months

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **30.05.2026 ರಂದು 16.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **01.06.2026 ರಂದು 16.01 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through Karnataka Public Procurement Portal) www.kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.kppp.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ - 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/14/2026-27 ದಿನಾಂಕ: 13-05-2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು-2 ಹೋಬಳಿ, ಸೂಲುಕುಂಟೆ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಚಿದಾನಂದ. ಕೆ.ಎಸ್ ಬಿನ್ ಶಿವಣ್ಣ ಮತ್ತು ಶ್ರೀ ಪುರುಷೋತ್ತಮ್. ಎಸ್.ಹೆಚ್ ಬಿನ್ ಹೊನ್ನಪ್ಪ	ನೆಲಮಂಗಲ / ತ್ಯಾಮಗೊಂಡ್ಲು-2/ ಸೂಲುಕುಂಟೆ	13/2	00-23	ವ್ಯವಸಾಯ	ವಸತಿ
2			14/2	00-37		
3			14/3	00-37		
4			14/4	00-37		

ಷರಾ:- ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/661/ಅಡ್ವರ್ಟೋರ್/2026-27

ಜನಗಣತಿ: ಅಪಘಾತದಲ್ಲಿ ಶಿಕ್ಷಕಿ ಸಾವು

ಸಿದ್ದಾಪುರ (ಉತ್ತರ ಕನ್ನಡ): ಜನಗಣತಿ ಮಾಹಿತಿಯನ್ನು ಪಟ್ಟಣ ಪಂಚಾಯಿತಿಗೆ ಕೊಡಲು ಸ್ಕೂಟಿಯಲ್ಲಿ ಹೊರಟಿದ್ದ ಶಿಕ್ಷಕಿಯೊಬ್ಬರು ಗುರುವಾರ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಪಟ್ಟಣದ ಶಿರಸಿ ರಸ್ತೆಯ ಮಳವತ್ತಿ ಹತ್ತಿರ ಟ್ರ್ಯಾಕ್ಟರ್ ಹಾಗೂ ಸ್ಕೂಟಿ ನಡುವೆ ಡಿಕ್ಕಿಯಾಗಿದ್ದು, ಶಿಕ್ಷಕಿ ಪೂರ್ಣಿಮಾ ಗಣಪತಿ ಭಟ್ಟ(47) ದುರ್ಮರಣ ಹೊಂದಿದ್ದಾರೆ. ಪಟ್ಟಣದ ಹೊಸೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿಯಾಗಿರುವ ಪೂರ್ಣಿಮಾ ಭಟ್ಟ, ಇಲ್ಲಿನ ಕೋಲಸಿರ್ಸಿ ಕ್ರಾಸ್ ಹತ್ತಿರದ ಬಸವಗಿರಿ ನಿವಾಸಿಯಾಗಿದ್ದಾರೆ. ಅಪಘಾತ ಸಂಭವಿಸಿದ ತಕ್ಷಣ ಅವರನ್ನು ಸಿದ್ದಾಪುರ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ದಮ್ಮನಕಟ್ಟೆ ಸಫಾರಿ ಕೇಂದ್ರದ ಬಳಿಯ ಮೈಸೂರು-ಮಾನಂದವಾಡಿ ರಸ್ತೆಯ ಅಂಚಿನಲ್ಲಿ ನಿಂತಿದ್ದ ನೀರಿನಲ್ಲಿ ವಿಶ್ರಮಿಸುತ್ತಿದ್ದ ಹುಲಿ ಗುರುವಾರ ಪ್ರವಾಸಿಗರ ಕಣ್ಣಿಗೆ ಕಾಣಿಸಿಕೊಂಡಿತು.

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ

ಸಮಗ್ರ ಶಿಕ್ಷಣ, ಕರ್ನಾಟಕ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು - 560009
ದೂರವಾಣಿ: 080-22131430 Email ID: egovbangalorenorth@gmail.com

ಸಂಖ್ಯೆ:ಸಿ1/ಸ.ಶಿ.ಕ/ಐ.ಸಿ.ಟಿ/01/2021-22 (ಭಾಗ-3) ದಿನಾಂಕ:30.04.2026

ಇ-ಟೆಂಡರ್ ಪ್ರಕಟಣೆ

2021-22ನೇ ಸಾಲಿನಲ್ಲಿ ಐ.ಸಿ.ಟಿ ಮತ್ತು ಡಿಜಿಟಲ್ ಇನೋವೇಟಿವ್ ಚಟುವಟಿಕೆ ಅಡಿಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಆಯ್ದ 14 ಸರ್ಕಾರಿ ಹಿರಿಯ/ಪ್ರೌಢ ಶಾಲೆಗಳಿಗೆ ಆಲ್-ಇನ-ಒನ್ ಕಂಪ್ಯೂಟರ್, ಪ್ರೊಜೆಕ್ಟರ್ ಹಾಗೂ ಸ್ಕ್ರೀನ್ ಮತ್ತು 2ಕೆ.ವಿ ಸಾಮರ್ಥ್ಯದ ಯುಪಿಎಸ್ ಬ್ಯಾಟರಿ ಉಪಕರಣಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಲು ಟೆಂಡರನ್ನು ಅರ್ಹ ಸಂಸ್ಥೆಗಳಿಂದ ಕೆಳಕಂಡಂತೆ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: https://kppp.karnataka.gov.in ಹಾಗೂ ಸಂಪರ್ಕಿಸಬಹುದಾದ ಮೊಬೈಲ್ ಸಂಖ್ಯೆ: 7483379906 / 948042681.

ಸಾಮಗ್ರಿ/ಉಪಕರಣಗಳು ಮತ್ತು ಒದಗಿಸಬೇಕಾದ ಘಟಕ ಸಂಖ್ಯೆ (ಪ್ರತಿ ಶಾಲೆಗೆ): (a) Projector with Screen-01, (b) All-in-one Computer-10, (c) 2KVA UPS with Battery-01, **ಶಾಲೆಗಳ ಸಂಖ್ಯೆ: 14.**

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.05.2026

ಸಹಿ/-
ಉಪನಿರ್ದೇಶಕರು ಹಾಗೂ
ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ. ಶಿ.ಕ, ಬೆಂಗಳೂರು ಉತ್ತರ ಜಿಲ್ಲೆ

ಡಿಐಪಿಆರ್/ಸಿಪಿ/664/ಸಿಸಿಎಲ್/2026-27

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರ - ನೋಂದಾಯಿತ ಸ್ವಾಯತ್ತ ಸಂಸ್ಥೆ ಹಾಗೂ ಎನ್.ಎ.ಬಿ.ಹೆಚ್. ನಿಂದ ಮಾನ್ಯತೆ ಹೊಂದಿದ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 069
Bannerghatta Road, Bangalore - 560069. Ph.: 080 22977400 / 500 / 600
E-mail: director@jayadevacardiology.com Website: www.jayadevacardiology.com

REF: SJICS&R/ACCTS/FD/2026-27 ದಿನಾಂಕ: 14.05.2026

ಇ-ಹರಾಜು

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರು, ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಕೆಳಗೆ ಉಲ್ಲೇಖಿಸಲಾದ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಏಕ ಬಿಡ್ ವ್ಯವಸ್ಥೆಯಲ್ಲಿ ಟೆಂಡರ್ ಆಹ್ವಾನಿಸಿದೆ:

ಕ್ರ ಸಂ.	ಹರಾಜು ಸೂಚನೆ ಸಂಖ್ಯೆ & ದಿನಾಂಕ	ವಿವರಗಳು
1	SJICR/2026-27/ AUCTION-024 Dtd.14.05.2026	ಒಂದು ವರ್ಷದ ಅವಧಿಗೆ ಎಸ್‌ಜೆಐಸಿಆರ್‌ನ ರೂ. 77.1135 ಕೋಟಿ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಇ-ಹರಾಜು

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https:/kppp.karnataka.gov.in** ನಿಂದ **15.05.2026**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಆಸಕ್ತಿ ಉಳ್ಳವರು ಇ-ಹರಾಜಿನಲ್ಲಿ ಭಾವಹಿಸಲು ಕೊನೆಯ ದಿನಾಂಕ ಮತ್ತು ಸಮಯ: **19.05.2026**ರ ಸಂಜೆ **4:00** ಗಂಟೆಯವರೆಗೆ ಆಗಿರುತ್ತದೆ.

1. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.05.2026**ರ ಸಂಜೆ **4:00** ಗಂಟೆಗೆ.
2. ಇಎಂಡಿ: **ರೂ. 5,000.00** ಪ್ರತಿಯೊಂದಕ್ಕೆ.
3. ನೇರ ಬಿಡ್ಡಿಂಗ್ (ಇ-ಹರಾಜು): **22.05.2026** ರಂದು ಬೆಳಿಗ್ಗೆ **10:00** ಗಂಟೆಗೆ ಪ್ರಾರಂಭವಾಗಿ ಮಧ್ಯಾಹ್ನ **03:00** ಗಂಟೆಗೆ ಮುಕ್ತಾಯಗೊಳ್ಳುತ್ತದೆ.
4. ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com** ನ್ನು ಸಂಪರ್ಕಿಸಿ.
5. ಟೆಂಡರ್ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಕಾರಣವನ್ನು ನೀಡದೆ ಭಾಗಶಃ ಅಥವಾ ಸಂಪೂರ್ಣವಾಗಿ ಟೆಂಡರ್ ಸ್ವೀಕರಿಸುವ/ತಿರಸ್ಕರಿಸುವ/ ರದ್ದುಗೊಳಿಸುವ ಹಕ್ಕನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/-,
ನಿರ್ದೇಶಕರು

ವಾಸಾಸಂಇ/ವಾಪ್ರ/ಎಲ್‌ಸಿ/677/2026-27

PUBLIC NOTICE

NOTICE is hereby given to the public that we are investigating the right, title, interest, benefits, entitlements of whatsoever nature of the owner of office space bearing No. G-12, situated on the Ground Floor of 'Prestige Towers', bearing BBMP katha / PID No. 76-15-100/13, constructed on property bearing Municipal Nos. 99 and 100, Field Marshal K.M. Cariappa Road (formerly known as Residency Road), Bangalore and hereinafter referred to as the **"Schedule Property"**.

Any individual, company, bank, financial institution (banking or non-banking), firm, association, or any other person or entity having any claim, right, title, or interest in the Schedule Property — whether arising from sale, mortgage, pledge, charge, gift, trust, inheritance, lease, tenancy, license, assignment, lien, court order/decree, development rights, or any other means, is hereby requested to submit their objection or claim in writing, along with original supporting documents, to the undersigned at 6/12, Gurappa Avenue, Primrose Road, Bengaluru 560 025 within 14 (Fourteen) days from the date of publication of this notice. Failure to do so will be treated as a waiver and abandonment of such claim(s), and our client shall be free to proceed with the sale of the Schedule Property without further notice.

SCHEDULE

ALL THAT PIECE AND PARCEL of office space bearing No. G-12, situated on ground floor of 'Prestige Towers', with a super built-up area of 1119 sq.ft and 268.99 sq.ft of undivided land share, bearing BBMP katha / PID No. 76-15-100/13, constructed on property bearing Municipal Nos. 99 and 100, situated at Field Marshal K.M. Cariappa Road (formerly known as Residency Road), Bangalore and is bounded on the :
East by : Private Property;
West by : 25 Feet wide common passage in property bearing No.5, Residency Road;
North by : Residency Road; and
South by : Portion of Property bearing No.5, Residency Road

Dated: 15.05.2026

Mr. S T Prashantha Kumar,
Senior Partner and Advocate
Mr. B.C. Keerthi Kishore,
Practice Head and Advocate
Fox Mandal & Associates
Solicitors & Advocates,
FM House, 6/12, Primrose Road,
Bangalore – 560025, Karnataka, India
Phone: +91 80 2559 5911
e-mail : prashantha.kumar@foxmandal.in

ಹರಪನಹಳ್ಳಿಯಲ್ಲಿ ಮಳೆ ಆರ್ಭಟ

ಹರಪನಹಳ್ಳಿ (ವಿಜಯನಗರ): ತಾಲೂಕಿನ ತೆಲಿಗಿ, ಯಡಿಹಳ್ಳಿ, ಕಡತಿ, ನಂದ್ಯಾಲ, ಮತ್ತೂರು, ಯರಬಾಳು, ಕಂಬಟ್ರಹಳ್ಳಿ, ಕುಂಚೂರು ಕೆರೆತಾಂಡಾ, ನಂದ್ಯಾಲ ಕ್ಯಾಂಪ್ ಸೇರಿ ಇತರೆಡೆ ಗುರುವಾರ ಬಿರುಗಾಳಿ, ಗುಡುಗು, ಸಿಡಿಲು ಸಹಿತ ಮಳೆ ಸುರಿದಿದೆ.

ಯಡಿಹಳ್ಳಿ ಗ್ರಾಮದಲ್ಲಿ ಮನೆಗೆ ಹೊದಿಸಿದ್ದ ಸಿಮೆಂಟ್ ಶೀಟ್‌ಗಳು ಸಂಪೂರ್ಣ ಜಖಂಗೊಂಡಿವೆ. ಶೀಟ್ ಮೇಲೆ ಇಟ್ಟಿದ್ದ ಕಲ್ಲುಗಳು ಮನೆಯೊಳಗೆ ಬೀಳುತ್ತಿದ್ದಂತೆ ತಾಯಿ ಹಾಗೂ ಮಗು ಎಚ್ಚೆತ್ತು ಬೇರೆಡೆ ಓಡಿಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಯರಬಾಳು ಗ್ರಾಮದ ಶಾಲೆಗೆ ಹೊದಿಸಿದ ಶೀಟ್‌ಗಳು ಗಾಳಿಗೆ ಹಾರಿ ಹೋಗಿವೆ. ಕಡತಿ ಕಂಡಿಕೇರಿ ಮುಖ್ಯ ರಸ್ತೆ ಮೇಲೆ ಮರಗಳು ಉರುಳಿವೆ. ನಂದ್ಯಾಲ ಕ್ಯಾಂಪ್, ಮತ್ತೂರು ರಸ್ತೆ ಬಂದ್ ಆಗಿತ್ತು. ಹಲವಾಗಲು ವಿತರಣಾ ಪರಿವರ್ತಕ ಕೇಂದ್ರ ವ್ಯಾಪ್ತಿಯಲ್ಲಿ 3, ಕುಂಚೂರು ಕೆರೆತಾಂಡಾ 8, ಮತ್ತೂರು 3, ನಿಟ್ಟೂರು ಬಸಾಪುರ 1, ಯಡಿಹಳ್ಳಿ 3, ಕಂಬಟ್ರಹಳ್ಳಿ 2, ನಂದ್ಯಾಲ 2 ಕಡತಿಯಲ್ಲಿ 4 ವಿದ್ಯುತ್ ಕಂಬಗಳು ಬಿದ್ದಿವೆ.

ಸಿಡಿಲು ಬಡಿದು ಕುರಿಗಾಹಿ ಸಾವು

ಹಿರೇಕೋಗಲೂರು (ದಾವಣಗೆರೆ): ದಾವಣಗೆರೆ ತಾಲೂಕಿನ ಜರೀಕಟ್ಟೆ ಗ್ರಾಮದಲ್ಲಿ ಕುರಿ ಕಾಯುವ ಯುವಕನೊಬ್ಬ ಸಿಡಿಲು ಬಡಿದು ಗುರುವಾರ ಸಂಜೆ ಮೃತಪಟ್ಟಿದ್ದಾನೆ. ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಮರಡಿ ಗ್ರಾಮದ ದುಂಡಪ್ಪ(19) ಮೃತ ಯುವಕ. ಮಳೆ ಸುರಿಯುತ್ತಿದ್ದ ಕಾರಣ ಕುರಿಗಳನ್ನು ಮರದ ಕೆಳಗೆ ತರುಬಿಕೊಂಡು ನಿಂತಿದ್ದಾಗ ಸಿಡಿಲು ಬಡಿದಿದೆ.

ನಟಿ ತ್ರಿಶಾ ಚಿತ್ರರಂಗಕ್ಕೆ ಬಂದು ಸುಮಾರು 25 ವರ್ಷಗಳಾದರೂ ಅವರ ಸ್ಟಾರ್‌ಡಮ್ ಕಡಿಮೆಯಾಗಿಲ್ಲ. ಈಗ ಸಿನಿಮಾ ಜೊತೆ ತಮಿಳುನಾಡಿನ ರಾಜಕೀಯದಲ್ಲೂ ಅವರ ಹೆಸರು ಸದ್ದು ಮಾಡುತ್ತಿದೆ.

ಬಹುಭಾಷಾ ನಟಿ ರಕುಲ್ ಪ್ರೀತ್ ಸಿಂಗ್ ಅವರು 'ರಾಮಾಯಣ' ಸಿನಿಮಾದಲ್ಲಿ ಶೂರ್ಪನಖಿ ಪಾತ್ರದಲ್ಲಿ ಕಾಣಿಸಲಿದ್ದು , ಈಗಾಗಲೇ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ.

ತ್ರಿಶಂಕು ಸ್ವರ್ಗದಲ್ಲಿ ತ್ರಿಶಾ

ತಮಿಳುನಾಡಿನ ರಾಜಕೀಯ ಚಿತ್ರಣವನ್ನೇ ನಟ ವಿಜಯ್ ಗೆಲುವು ಬದಲಿಸಿದೆ. ಈ ನಡುವೆ ವಿಜಯ್ ಅವರ ಆಪ್ತ ಗೆಳತಿ ಹಾಗೂ ನಟಿ ತ್ರಿಶಾ ಅವರ ರಾಜಕೀಯ ಪ್ರವೇಶದ ಬಗ್ಗೆ ಚರ್ಚೆ ಶುರುವಾಗಿದೆ. ತ್ರಿಶಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ ಮತ್ತು ವಿಜಯ್ ಅವರ ಬೆಂಬಲದೊಂದಿಗೆ ಗೆದ್ದು ಅವರ ಮಂತ್ರಿಮಂಡಲ ಸೇರುತ್ತಾರೆ ಎಂಬ ಮಾತುಕತೆಗಳೂ ಕೇಳಿಬರುತ್ತಿವೆ. ಇದೇ ಸಮಯದಲ್ಲಿ ತ್ರಿಶಾರ ಸಿನಿಮಾ ವೃತ್ತಿಜೀವನದ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ.

ಸೋಲಿನ ಸುಳಿಯಲ್ಲಿ ತ್ರಿಶಾ

ತ್ರಿಶಾ ಮತ್ತು ವಿಜಯ್ ಅಭಿನಯದ 'ಲಿಯೋ' ಸಿನಿಮಾ 2023ರಲ್ಲಿ ಬಿಡುಗಡೆಯಾಗಿ ಹಿಟ್ ಆಗಿತ್ತು. ಆದರೆ 2024ರಲ್ಲಿ ಅವರ ಯಾವುದೇ ಸಿನಿಮಾ ಬಿಡುಗಡೆಯಾಗಲಿಲ್ಲ. 2025ರಲ್ಲಿ ತ್ರಿಶಾ ಅಭಿನಯದ 4 ಸಿನಿಮಾಗಳು ತೆರೆಕಂಡವು. ಮಲಯಾಳಂನ 'ಐಡೆಂಟಿಟಿ', ತಮಿಳಿನಲ್ಲಿ ಅಜಿತ್ ಜೊತೆಗಿನ 'ವಿದಾಮುಯರ್ಚಿ' ಮತ್ತು 'ಗುಡ್ ಬ್ಯಾಡ್ ಅಗ್ಲಿ' ನಿರೀಕ್ಷಿತ ಮಟ್ಟದಲ್ಲಿ ಗೆಲುವು ಸಾಧಿಸದೆ ಫ್ಲಾಪ್ ಲಿಸ್ಟ್ ಸೇರಿದವು. ಕಮಲ್ ಹಾಸನ್ ಜೊತೆ ನಟಿಸಿದ 'ಥಗ್ ಲೈಫ್' ಬಾಕ್ಸ್ ಆಫೀಸ್‌ನಲ್ಲಿ ಮಕಾಡೆ ಮಲಗಿತು. ಈ ವಾರ ಸೂರ್ಯ ಅಭಿನಯದ 'ಕರುಪ್ಪು' ಸಿನಿಮಾ ಬಿಡುಗಡೆಯಾಗಬೇಕಿತ್ತು. ಆದರೆ ಹಣಕಾಸಿನ ವಿಷಯವಾಗಿ ಸಿನಿಮಾ ರಿಲೀಸ್ ಮುಂದೂಡಲಾಗಿದೆ.

ಚಿತ್ರೀಕರಣ ಮುಗಿಸಿರುವ ತ್ರಿಶಾ

ತ್ರಿಶಾ ಸದ್ಯ ಚಿರಂಜೀವಿ ನಟನೆಯ 'ವಿಶ್ವಂಭರ' ಬಿಡುಗಡೆಗಾಗಿ ಕಾಯುತ್ತಿದ್ದಾರೆ. ಈ ಸಿನಿಮಾ ಈ ವರ್ಷವೇ ತೆರೆಗೆ ಬರುವ ಸಾಧ್ಯತೆ ಇದೆ. ಹತ್ತು ವರ್ಷಗಳ ನಂತರ ತ್ರಿಶಾ ನಟಿಸಿರುವ ತೆಲುಗು ಸಿನಿಮಾ ಇದು. ಕೆಲ ವರ್ಷಗಳ ಹಿಂದೆ ಮೋಹನ್ ಲಾಲ್ ಜೊತೆ ತ್ರಿಶಾ ನಟಿಸಬೇಕಿದ್ದ, ಜೀತು ಜೋಸೆಫ್ ನಿರ್ದೇಶನದ ಮಲಯಾಳಂ ಸಿನಿಮಾ ಪೂರ್ಣಗೊಂಡಿಲ್ಲ. ಸದ್ಯ ನಿರ್ದೇಶಕ ನೆಲ್ಸನ್ ಅವರು ಕಮಲ್ ಹಾಸನ್ ಮತ್ತು ರಜನಿಕಾಂತ್ ಕಾಂಬಿನೇಷನ್‌ನಲ್ಲಿ ಮಾಡುತ್ತಿರುವ ಸಿನಿಮಾದಲ್ಲಿ ತ್ರಿಶಾ ನಟಿಸಲಿದ್ದಾರೆ ಎಂಬ ಸುದ್ದಿ ಇದೆ. ಈ ನಡುವೆ ಮಾಜಿ ಉಪಮುಖ್ಯಮಂತ್ರಿ ಉದಯ್‌ನಿಧಿ ಸ್ಟಾಲಿನ್ ಅವರ ಮುಂದಿನ ಸಿನಿಮಾದಲ್ಲಿ ನಟಿಸಲು ತ್ರಿಶಾ 12 ಕೋಟಿ ರೂ. ಸಂಭಾವನೆ ಕೇಳಿದ್ದಾರೆ ಎಂಬ ಸುದ್ದಿ ಇದೆ. ■

ಡಿಸೆಂಬರ್‌ನಲ್ಲಿ ಟಾಕ್ಸಿಕ್ ಅದೃಷ್ಟ ಪರೀಕ್ಷೆ?



ಪದೇಪದೆ 'ಟಾಕ್ಸಿಕ್' ಸಿನಿಮಾದ ಬಿಡುಗಡೆಯ ದಿನವನ್ನು ಮುಂದೆ ಹಾಕುತ್ತಿರುವ ಚಿತ್ರತಂಡ ಈಗ ಡಿಸೆಂಬರ್ ತಿಂಗಳ ಅದೃಷ್ಟವನ್ನು ನೆಚ್ಚಿಕೊಂಡಿದೆ.

ಕಿರಣ್ ಚಂದ್ರ
kiran.b@timesofindia.com

ಯಶ್ ನಟಿಸಿರುವ ಬಹುನಿರೀಕ್ಷಿತ ಸಿನಿಮಾ 'ಟಾಕ್ಸಿಕ್' ಡಿಸೆಂಬರ್‌ನಲ್ಲಿ ತೆರೆ ಕಾಣುವ ಸಾಧ್ಯತೆ ಇದೆ.

ಚಿತ್ರ ಬಿಡುಗಡೆಯ ದಿನಾಂಕವನ್ನು ಪದೇಪದೆ ಮುಂದೆ ಹಾಕುತ್ತಿದ್ದ ತಂಡ ಈಗ ಕ್ರಿಸ್‌ಮಸ್ ತಿಂಗಳನ್ನೇ ಗುರಿಯಾಗಿಸಿಕೊಂಡಿದೆ. ಆ ಸಮಯದಲ್ಲಿ ಬಿಡುಗಡೆಗೆ ತಯಾರಿ ನಡೆಸಲಾಗಿದೆ ಎಂದು ಹೇಳಲಾಗುತ್ತಿದೆ.

ಯಶ್‌ಗೆ ಲಕ್ಕಿ ಡಿಸೆಂಬರ್

ಡಿಸೆಂಬರ್ ಯಶ್ ಪಾಲಿಗೆ ಅದೃಷ್ಟದ ತಿಂಗಳು. ಯಶ್ ಅಭಿನಯದ ಕಮರ್ಷಿಯಲ್ ಸೂಪರ್ ಹಿಟ್ ಸಿನಿಮಾಗಳಾದ 'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ', 'ಮಾಸ್ಟರ್‌ಪೀಸ್' ಮತ್ತು 'ಕೆಜಿಎಫ್ ಚಾಪ್ಟರ್-1' ಬಿಡುಗಡೆಯಾಗಿದ್ದು ಇದೇ ಡಿಸೆಂಬರ್‌ನಲ್ಲಿ. ಯಶ್ ಪಾಲಿಗೆ ವರ್ಷದ ಕೊನೆಯ ತಿಂಗಳು ಯಶಸ್ಸು ತಂದುಕೊಟ್ಟಿದೆ. ಕನ್ನಡ ಚಿತ್ರರಂಗದ ಪಾಲಿಗೂ ಕ್ರಿಸ್‌ಮಸ್ ರಜೆಗಳು ಲಾಭದಾಯಕ. ಡಿಸೆಂಬರ್ ಕೊನೆಯ ವಾರದಲ್ಲಿ ಬಿಡುಗಡೆಯಾದ ಬಹುತೇಕ ಸಿನಿಮಾಗಳು ಸೂಪರ್ ಹಿಟ್ ಆಗಿವೆ. ಕ್ರಿಸ್‌ಮಸ್ ರಜೆ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಮಂದಿರಕ್ಕೆ ಜನ ಬರುತ್ತಾರೆ ಎಂಬ ನಂಬಿಕೆ ಇದೆ. ಹಾಲಿವುಡ್ ಸಿನಿಮಾಗಳು ಇದೇ ಕಾರಣಕ್ಕೆ ಕ್ರಿಸ್‌ಮಸ್ ರಜೆಯನ್ನು ನೆಚ್ಚಿಕೊಳ್ಳುತ್ತವೆ. ಆದ್ದರಿಂದ 'ಟಾಕ್ಸಿಕ್' ಸಿನಿಮಾವನ್ನು ಡಿಸೆಂಬರ್‌ನಲ್ಲಿ ಬಿಡುಗಡೆ ಮಾಡಲು ಯೋಜನೆ ರೂಪಿಸಲಾಗಿದೆ.

ವಿಳಂಬ ಏಕೆ?

'ಟಾಕ್ಸಿಕ್' ಚಿತ್ರವನ್ನು ನಿರ್ಮಿಸಿರುವ ಸಂಸ್ಥೆಯಿಂದಲೇ ತಯಾರಾಗಿರುವ ಮತ್ತೊಂದು ಬಹುನಿರೀಕ್ಷಿತ ಸಿನಿಮಾ 'ಜನನಾಯಗನ್' ಜೂನ್‌ನಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ. ನಿರ್ಮಾಣ ಸಂಸ್ಥೆಯ ಇನ್ನಷ್ಟು ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗುತ್ತಿವೆ. ಹಾಗಾಗಿ ಡಿಸೆಂಬರ್ ತಿಂಗಳು ಸೂಕ್ತ ಎನ್ನಲಾಗುತ್ತಿದೆ. ಇದರೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಿನಿಮಾವನ್ನು ದೊಡ್ಡ ಮಟ್ಟದಲ್ಲಿ ಪ್ರಚಾರ ಮಾಡಲು ಸಮಯದ ಅಗತ್ಯವಿದೆ. ಅಕ್ಟೋಬರ್‌ನಲ್ಲಿ ಯಶ್ ಅಭಿನಯದ ಮತ್ತೊಂದು ಬಹುನಿರೀಕ್ಷಿತ ಸಿನಿಮಾ 'ರಾಮಾಯಣ' ಬಿಡುಗಡೆಯಾಗುತ್ತಿದೆ. ಅದಕ್ಕೂ ಮುನ್ನವೇ 'ಟಾಕ್ಸಿಕ್' ಬಿಡುಗಡೆ ಮಾಡಿದರೆ ಎರಡೂ ಸಿನಿಮಾಗಳ ನಡುವೆ ಕ್ಲಾಷ್ ಆಗಬಹುದು. ಒಂದು ವೇಳೆ 'ಟಾಕ್ಸಿಕ್'ಗೆ ಮಿಶ್ರ ಪ್ರತಿಕ್ರಿಯೆ ಬಂದರೆ, ಅದು ಸಾವಿರಾರು ಕೋಟಿ ಬಜೆಟ್‌ನ 'ರಾಮಾಯಣ' ಸಿನಿಮಾದ ಮೇಲೂ ಪರಿಣಾಮ ಬೀರಬಹುದು. ಹೀಗಾಗಿ ಎರಡೂ ಸಿನಿಮಾಗಳಿಗೆ ಪ್ರತ್ಯೇಕವಾಗಿ ಪ್ರಚಾರ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂಬ ಮಾತಿದೆ.

ಗೊಂದಲದ ಟಾಕ್ಸಿಕ್

'ಟಾಕ್ಸಿಕ್' ಸಿನಿಮಾ ಆರಂಭದಿಂದಲೂ ಗೊಂದಲಗಳ ಸುಳಿಯಲ್ಲಿದೆ. ಮೊದಲು ಗೀತು ಮೋಹನ್ ದಾಸ್ ನಿರ್ದೇಶನದಲ್ಲಿ ಆರಂಭವಾದ ಸಿನಿಮಾದ ಕಥೆಯಲ್ಲಿ ಯಶ್ ಕೆಲವು ಬದಲಾವಣೆಗಳನ್ನು ತಂದರು. ಸಂಗೀತ ನಿರ್ದೇಶನದಲ್ಲಿ ಮೊದಲು ಅನಿರುದ್ಧ್ ಹೆಸರು ಕೇಳಿಬಂತು. ನಂತರ ರವಿ ಬಸ್ರೂರ್ ಬಂದರು. ನಂತರ ಸಿನಿಮಾ ನಿರ್ಮಾಣದಲ್ಲೂ ಯಶ್ ತಮ್ಮ ಪಾಲುದಾರಿಕೆಯನ್ನು ಘೋಷಿಸಿದರು. ಬೆಂಗಳೂರಿನಲ್ಲಿ ನಡೆಯಬೇಕಿದ್ದ ಚಿತ್ರೀಕರಣ ಮುಂಬಯಿಗೆ ಸ್ಥಳಾಂತರವಾಯಿತು. ಒಂದಷ್ಟು ಬೆಳವಣಿಗೆ ಹಾಗೂ ಬದಲಾವಣೆ ನಡುವೆ 'ಟಾಕ್ಸಿಕ್' ಸದಾ ಸುದ್ದಿಯಲ್ಲಿ ಇರಲು ಬಯಸಿದಂತಿದೆ. ■

ಶಾರ್ಟ್ ಮೂವಿ ಮೂಲಕ ಮನೆಮಾತಾದ ನಟಿ ಪಾಯಲ್ ಚಂಗಪ್ಪ ಈಗ ಕನ್ನಡ ಮಾತ್ರವಲ್ಲದೆ ತೆಲುಗು ಸಿನಿಮಾ, ವೆಬ್ ಸರಣಿಗಳಲ್ಲಿ ಮಿಂಚುತ್ತಿದ್ದಾರೆ.

ಶಾರ್ಟ್ ಮೂವಿ ಪಾಯಲ್ ಸ್ಟೋರಿ

ಮಲ್ಲೀರ
feedbacklvk@vijaykarnataka.com

ನಟಿ ಪಾಯಲ್ ಚಂಗಪ್ಪ ಶಾರ್ಟ್ ಮೂವಿಯಿಂದ ಹಿಡಿದು ಸಿನಿಮಾತನಕ ತಮ್ಮನ್ನು ನಟನೆಯಲ್ಲಿ ತೊಡಗಿಸಿಕೊಂಡಿದ್ದು, ಸದ್ಯ ಸಾಕಷ್ಟು ಪ್ರಾಜೆಕ್ಟ್‌ಗಳಲ್ಲಿ ಬಿಝಿ.

ಪಾಯಲ್ ಚೆಂಗಪ್ಪ ಶಾರ್ಟ್ ಮೂವಿಗಳಲ್ಲಿ ಕ್ಲಿಕ್ ಆಗಿದ್ದು ಪಕ್ಕದ ಮನೆ ಹುಡುಗಿ ಇಮೇಜ್‌ನಿಂದ. ಇದೇ ಇಮೇಜ್‌ನಿಂದ ಸಿನಿಮಾಗಳಲ್ಲಿ ಆಫರ್ ಗಿಟ್ಟಿಸಿಕೊಂಡ ಪಾಯಲ್ ಡಾರ್ಲಿಂಗ್ ಕೃಷ್ಣ ಜೋಡಿಯಾಗಿ 'ಬ್ರ್ಯಾಟ್'ನಲ್ಲಿ ಮಿಂಚಿ, ಕನ್ನಡದ 'ಅಮೃತಾ ಅಂಜನ್' ಹಾಗೂ ತೆಲುಗಿನಲ್ಲಿ 'ಬ್ಯಾಡ್ ಗರ್ಲ್ಸ್' ಸಿನಿಮಾ ಮೂಲಕ ಒಂದಷ್ಟು ಹೊಸ ಪ್ರಯೋಗಗಳಿಗೆ ತಮ್ಮನ್ನು ತೊಡಗಿಸಿಕೊಂಡರು. ಈಗ ಕನ್ನಡದ ವೆಬ್ ಸರಣಿ 'ಜೆರಾಕ್ಸ್'ನಲ್ಲೂ ವಿಭಿನ್ನ ಪಾತ್ರ ಮಾಡಿ ಸೈ ಎನಿಸಿಕೊಂಡಿದ್ದಾರೆ.

ಪಾಯಲ್ ಸದ್ಯ ಕನ್ನಡದ ಹಾರರ್ ಕಾಮಿಡಿ ಸಿನಿಮಾ 'ಮುದ್ದು ಗುಮ್ಮ' ಚಿತ್ರೀಕರಣದಲ್ಲಿ ಬಿಝಿಯಾಗಿದ್ದು, ಈಗಾಗಲೇ ಮತ್ತೊಂದು ಮಹಿಳಾ ಪ್ರಧಾನ ಆ್ಯಕ್ಷನ್ ಥ್ರಿಲ್ಲರ್ ತೆಲುಗು ಸಿನಿಮಾ 'ಮಯೂಕ'ದ ಶೂಟಿಂಗ್ ಮುಗಿಸಿದ್ದಾರೆ. ಸದ್ಯ ಟ್ರೆಂಡ್ ಆಗುತ್ತಿರುವ ಮೈಕ್ರೋ ವರ್ಟಿಕಲ್ ಸರಣಿಗಳಲ್ಲೂ ನಟಿಸಿದ್ದು, ರಿಲೀಸ್‌ಗೆ ಕಾಯುತ್ತಿದ್ದಾರೆ. ಶಾರ್ಟ್ ಮೂವಿಯಿಂದಲೇ ತೆಲುಗಿನಲ್ಲಿ 'ರ್‍ಯಾಂಬೋ ಇನ್ ಲವ್' ಎಂಬ ವೆಬ್ ಸರಣಿ ತೆಲುಗಿನಲ್ಲಿ ಜನಪ್ರಿಯತೆ ತಂದುಕೊಟ್ಟಿತ್ತು. ಅದರಿಂದಲೇ ಅವರಿಗೆ ಸಿನಿಮಾ ಅವಕಾಶಗಳು ಬರಲು ಶುರುವಾದವು.

ಮನರಂಜನಾ ವೇದಿಕೆಗಳ ವ್ಯತ್ಯಾಸ

ಎಲ್ಲಾ ಬಗೆಯ ಮನರಂಜನಾ ವೇದಿಕೆಗಳಲ್ಲಿ ಗುರುತಿಸಿಕೊಂಡಿರುವ ಪಾಯಲ್ ಪ್ರತಿ ವೇದಿಕೆಗೂ ಅದರದ್ದೇ ಆದ ಮಿತಿ ಹಾಗೂ ಶಕ್ತಿ ಇದೆ ಎನ್ನುತ್ತಾರೆ. 'ಸಿನಿಮಾದಲ್ಲಿ ನಟನೆಗೆ ಹಾಗೂ ಭಾವಗಳ ಅಭಿವ್ಯಕ್ತಿಗೆ ಹೆಚ್ಚಿನ ಅವಕಾಶ ಹಾಗೂ ಸಮಯವೂ ಇದೆ. ಹೊಸ ಪ್ರಯೋಗ ಮಾಡಲು ಹಾಗೂ ಪಾತ್ರವಾಗಿ ನಮ್ಮನ್ನೇ ಎಕ್ಸ್‌ಪ್ಲೋರ್ ಮಾಡಲು ಅವಕಾಶವಿರುತ್ತದೆ. ಆದರೆ ಮೈಕ್ರೋ ಸೀರೀಸ್ ಒಂದು ನಿಮಿಷ ಅಥವಾ ಅದಕ್ಕಿಂತ ಕಡಿಮೆ ಸಮಯದ ಎಪಿಸೋಡ್ ಹೊಂದಿರುತ್ತದೆ. ಹೀಗಾಗಿ ಸ್ಕ್ರೀನ್ ಸ್ಪೇಸ್ ಹೆಚ್ಚು ಸಿಗುವುದಿಲ್ಲ. ನಾಲ್ಕೈದು ದಿನಗಳಲ್ಲಿ ಮೈಕ್ರೋ ಸೀರೀಸ್‌ನ 60 ಎಪಿಸೋಡ್‌ಗಳನ್ನು ಮುಗಿಸಬೇಕು. ಆದರೆ ಸಿನಿಮಾ ವರ್ಷಗಟ್ಟಲೆ ಶೂಟ್ ಆಗುತ್ತೆ. ಹೀಗಾಗಿ ತಿದ್ದುಪಡಿ ಮಾಡಲು ಸಾಕಷ್ಟು ಸಮಯ ಸಿಗುತ್ತದೆ' ಎಂದಿದ್ದಾರೆ.

> ಶಾರ್ಟ್ ಮೂವಿಗಳಲ್ಲಿ ಸಾಕಷ್ಟು ಬಿಝಿ ಇದ್ದೇನೆ. ಉತ್ತಮ ಸಂಪಾದನೆಯೂ ಇದೆ. ಆದರೆ ಸಿನಿಮಾ ನನ್ನ ಪ್ಯಾಷನ್, ದೊಡ್ಡ ಪರದೆಯಲ್ಲಿ ನನ್ನ ನೋಡುವುದು ಕನಸು. ಉತ್ತಮ ಪಾತ್ರಕ್ಕಾಗಿ ಕಾಯುತ್ತಿದ್ದೇನೆ.
>
> -ಪಾಯಲ್ ಚಂಗಪ್ಪ । ನಟಿ

ರೀಚ್ ಹೆಚ್ಚು

'ಶಾರ್ಟ್ ಮೂವಿಯಲ್ಲಿ ಸಿಕ್ಕಿರುವ ಜನಪ್ರಿಯತೆ ಸಿನಿಮಾದಿಂದ ಸಿಕ್ಕಿಲ್ಲ. ಶಾರ್ಟ್ ಮೂವಿಯನ್ನು ಉಚಿತವಾಗಿ ನೋಡಬಹುದು. ಅದು ಬೇರೆ ಸಾಮಾಜಿಕ ಜಾಲತಾಣಗಳಲ್ಲೂ ಶೇರ್ ಆಗುವ ಕಾರಣ ಹೆಚ್ಚು ಜನರನ್ನು ಬಹುಬೇಗ ರೀಚ್ ಆಗುತ್ತೇವೆ. ಅವುಗಳಿಂದಲೇ ನನಗೆ ಸಿನಿಮಾ, ವೆಬ್ ಸರಣಿಗಳ ಅವಕಾಶಗಳು ಬಂದವು. ಓಟಿಟಿಯಲ್ಲಿ ಬರುವ ಸರಣಿಗಳಿಗೆ ಹಣ ಕೊಟ್ಟು ನೋಡಬೇಕಾದ ಕಾರಣ ಹೆಚ್ಚು ಜನರನ್ನು ಮುಟ್ಟುವುದು ಕಷ್ಟ' ಎಂದು ಹೇಳಿದ್ದಾರೆ.

ವಿಭಿನ್ನ ಪಾತ್ರ ಇಷ್ಟ

'ಒಂದು ಶಾರ್ಟ್ ಮೂವಿಯೇ ನನಗೆ ಸಾಕಷ್ಟು ಜನಪ್ರಿಯತೆ ತಂದುಕೊಟ್ಟಿದೆ. ಆ ವಿಷಯದಲ್ಲಿ ನಾನು ಅದೃಷ್ಟವಂತೆ. ಆದರೆ ನನಗೆ ಸೀಮಿತ ವ್ಯಾಪ್ತಿಗೆ ಒಳಗಾಗಲು ಇಷ್ಟವಿಲ್ಲ. ಹೀಗಾಗಿ ಹೊಸತುಗಳಿಗೆ ತೆರೆದುಕೊಂಡೆ. ವೆಬ್ ಸರಣಿಗೆ ಹೋದ ಮೇಲೆ ನನ್ನ ಪಾತ್ರ, ಶೇಡ್ ಬದಲಾಯ್ತು. ನಾನು ಗ್ಲಾಮರಸ್ಸಾಗಿ, ಎಮೋಷನಲ್ ಸೀನ್‌ಗಳಲ್ಲಿ ನಟಿಸಬಲ್ಲೆ ಎಂಬುದು ಜಗತ್ತಿಗೆ ಗೊತ್ತಾಯಿತು. ವೈವಿಧ್ಯಮಯ ಪಾತ್ರಗಳು ಸಿಕ್ಕಾಗ ಮಾತ್ರ ಬೆಳೆಯಲು ಸಾಧ್ಯ. ಹೀಗಾಗಿ ನನಗೆ ವಿಭಿನ್ನ ಪಾತ್ರಗಳಲ್ಲಿ ಗುರುತಿಸಿಕೊಳ್ಳಲು ಇಷ್ಟ' ಎಂದಿದ್ದಾರೆ ಪಾಯಲ್. ■

ಸಿಂಗಲ್ ಸ್ಕ್ರೀನ್ ಚಿತ್ರಮಂದಿರದ ಉಳಿವಿಗೆ ಉಪೇಂದ್ರ

ಲವಲvk ಸುದ್ದಿ ಲೋಕ
feedbacklvk@vijaykarnataka.com

ಕೆಲವು ವರ್ಷಗಳ ಹಿಂದೆ ಬಿಡುಗಡೆಯಾದ ಸಿನಿಮಾಗಳನ್ನು ಸಿಂಗಲ್ ಸ್ಕ್ರೀನ್ ಚಿತ್ರ ಮಂದಿರದಲ್ಲಿ ತೋರಿಸುವ ಮೂಲಕ ಪ್ರೇಕ್ಷಕರನ್ನು ಸೆಳೆಯಲು ಮುಂದಾಗಿದೆ ಕನ್ನಡ ಚಿತ್ರರಂಗ. ಇದಕ್ಕೆ ಪೂರಕವಾಗಿ ಈಗ ನಟ ಉಪೇಂದ್ರ, ಅಭಿನಯಿಸಿ, ನಿರ್ದೇಶಿಸಿದ್ದ ಬ್ಲಾಕ್‌ಬಸ್ಟರ್ ಸಿನಿಮಾ 'ಉಪೇಂದ್ರ' ಮರು ಬಿಡುಗಡೆಯಾಗುತ್ತಿದೆ. ಸಿನಿಮಾ ನೋಡಿ 1 ಕೋಟಿ ರೂಪಾಯಿ ಗೆಲ್ಲುವ ಅವಕಾಶವನ್ನು ಪ್ರೇಕ್ಷಕರಿಗೆ ನೀಡಲಾಗಿದೆ. ಚಿತ್ರ ವೀಕ್ಷಿಸಿದ ನಂತರ ಕೇಳಲಾಗುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುವ ಪ್ರೇಕ್ಷಕರಿಗೆ ಆ ಶೋನ ಕಲೆಕ್ಷನ್ ಹಣವನ್ನು ಬಹುಮಾನವಾಗಿ ನೀಡಲಾಗುವುದು. ಅಲ್ಲದೆ, ಚಿತ್ರದ ಪ್ರದರ್ಶನದ 25ನೇ ದಿನದಂದು ಸರಿಯಾದ ಉತ್ತರ ನೀಡಿದ ಒಬ್ಬ ಅದೃಷ್ಟವಂತ ಪ್ರೇಕ್ಷಕರಿಗೆ 1 ಕೋಟಿ ರೂ. ಬಹುಮಾನ ನೀಡಲಾಗುವುದು.

ಪರಮೇಶ್ವರ್ ಬಿ.

'ಸುಮಾರು 100 ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ಪ್ರತಿ ಥಿಯೇಟರ್‌ನಲ್ಲಿ ಶೋ ಮುಗಿದ ನಂತರ 10 ನಿಮಿಷಗಳ ಪ್ರಶ್ನೋತ್ತರ ಕಾರ್ಯಕ್ರಮವಿರುತ್ತದೆ. ಕನ್ನಡ ಚಿತ್ರರಂಗದ ಇತಿಹಾಸದ ಮೈಲಿಗಲ್ಲುಗಳನ್ನು ಇಂದಿನ ತಲೆಮಾರಿನ ಸಿನಿಮಾ ಪ್ರೇಮಿಗಳಿಗೆ ತಿಳಿಸುವ, ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಕರೆತಂದು ಸಿಂಗಲ್ ಸ್ಕ್ರೀನ್‌ಗಳನ್ನು ಉಳಿಸಿಕೊಳ್ಳುವ ಉದ್ದೇಶ ಇದರ ಹಿಂದಿದೆ' ಎಂದು ಆಯೋಜಕ ಪರಮೇಶ್ವರ್ ಬಿ. ಹೇಳಿದ್ದಾರೆ. ■



ಕಾನ್ಸ್‌ನಲ್ಲಿ ಇಂಡಿಯನ್ ಬ್ಯೂಟೀಸ್

ಆಲಿಯಾ ಭಟ್

ಕೆನಡಾದಲ್ಲಿ ನಡೆಯುತ್ತಿರುವ 79ನೇ ಕಾನ್ಸ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾರತೀಯ ಸಿನಿಮಾಗಳು ಪ್ರದರ್ಶನವಾಗುತ್ತಿವೆ. ಇದರಲ್ಲಿ ಭಾರತೀಯ ಸೆಲೆಬ್ರಿಟಿಗಳು, ಕಂಟೆಂಟ್ ಕ್ರಿಯೇಟರ್‌ಗಳು, ಇನ್‌ಫ್ಲುಯೆನ್ಸರ್‌ಗಳು ಭಾಗಿಯಾಗಿದ್ದಾರೆ. ಆಕರ್ಷಕ ದಿರಸು, ಮೇಕಪ್, ಆಭರಣಗಳ ಮೂಲಕ ಸೆಲೆಬ್ರಿಟಿಗಳು ಕಾನ್ಸ್ ಮೆರುಗು ಹೆಚ್ಚಿಸಲು ಸಜ್ಜಾಗಿದ್ದಾರೆ. ಮೊದಲೆರಡು ದಿನ ರೆಡ್ ಕಾರ್ಪೆಟ್‌ನಲ್ಲಿ ಕಂಡವರು ಮೂರನೇ ದಿನಕ್ಕೆ ಸಿದ್ಧವಾಗಿರುವವರ ಬಗೆಗೆ ಇಲ್ಲಿದೆ ವಿವರ:

ಕಾನ್ಸ್ ರೆಡ್ ಕಾರ್ಪೆಟ್ ಉದ್ಘಾಟನೆಯಲ್ಲಿ ಪೀಚ್ ವರ್ಣದ ತಾಮರಾ ರಾಲ್ಫ್ ವಿನ್ಯಾಸದ ಗೌನ್ ತೊಟ್ಟು ಬಂದ ಬಾಲಿವುಡ್ ನಟಿ ಆಲಿಯಾ ಭಟ್ ಅವರನ್ನು ಫೋಟೋಗ್ರಾಫರ್‌ಗಳು ಗುರುತಿಸಲಿಲ್ಲ ಎಂಬ ಸುದ್ದಿ ಹರಿದಾಡಿತ್ತು. ಆದರೆ ರೆಡ್ ಕಾರ್ಪೆಟ್‌ಗೆ ಆಲಿಯಾ ಬಂದ ತಕ್ಷಣ 'ಆಲಿಯಾ... ಆಲಿಯಾ' ಎಂದು ಕೂಗುತ್ತಿರುವ ವಿಡಿಯೋ ಈಗ ವೈರಲ್ ಆಗಿದ್ದು, ಆಲಿಯಾರನ್ನು ಕಡೆಗಣಿಸಿಲ್ಲ ಎಂದು ಬಿಂಬಿಸಲಾಗುತ್ತಿದೆ. ಕಾನ್ಸ್‌ನಲ್ಲಿ ಈಗಾಗಲೇ ಹಲವು ವಿನ್ಯಾಸಗಳ ವಸ್ತ್ರಗಳನ್ನು ತೊಟ್ಟ ಆಲಿಯಾ ಮಿಂಚುತ್ತಿದ್ದಾರೆ.

ಮೊದಲ ದಿನ ಕಾನ್ಸ್ ರೆಡ್ ಕಾರ್ಪೆಟ್‌ನಲ್ಲಿ ಬಾಲಿವುಡ್ ನಟಿ, ಕನ್ನಡದ 'ಐರಾವತ' ಸಿನಿಮಾ ಖ್ಯಾತಿಯ ಊರ್ವಶಿ ರೌಟೇಲಾ, ಕಾಣಿಸಿಕೊಂಡಿದ್ದರು. 5ನೇ ಬಾರಿ ಕಾನ್ಸ್ ಚಲನಚಿತ್ರೋತ್ಸವದಲ್ಲಿ ಕಾಣಿಸಿಕೊಳ್ಳುತ್ತಿರುವ ಊರ್ವಶಿ, 'ನಾನು ಜಾಗತಿಕವಾಗಿ ನನ್ನ ದೇಶವನ್ನು ಪ್ರತಿನಿಧಿಸುವಾಗ, ನನ್ನ ಹೆಸರಿಗಿಂತ ದೇಶದ ಹೆಸರನ್ನೇ ಹೇಳಿಕೊಳ್ಳುತ್ತೇನೆ, ನಾನೇ ಇಂಡಿಯಾ' ಎಂದಿದ್ದಾರೆ. ಬೆಳ್ಳಿ ವರ್ಣದಲ್ಲಿ ಸ್ಫಟಿಕ ಪೋಣಿಸಿದ ವಿಶಿಷ್ಟ ವಿನ್ಯಾಸದ ಗೌನ್ ತೊಟ್ಟು ಅವರು ಪೋಸ್ ನೀಡಿದ್ದು, ಇದರ ಬೆಲೆ 1,472 ಕೋಟಿ ರೂ ಎನ್ನಲಾಗಿದೆ. ಇದು ಊರ್ವಶಿ ಅವರು ಪ್ರತಿನಿಧಿಸುತ್ತಿರುವ ಐದನೇ ಕಾನ್ಸ್ ಚಲನಚಿತ್ರೋತ್ಸವ ಆಗಿದ್ದು, ವಿಯೆಟ್ನಾಮಿ ಮೂಲದ ವಿನ್ಯಾಸ ಸಂಸ್ಥೆ ಅವರ ದಿರಸನ್ನು ವಿನ್ಯಾಸಿಸಿದೆ. 'ಟಾಕ್ಸಿಕ್' ಮೂಲಕ ಸದ್ಯ ಗಮನ ಸೆಳೆಯುತ್ತಿರುವ ಬಾಲಿವುಡ್ ನಟಿ ತಾರಾ ಸುತಾರಿಯಾ ಈ ಬಾರಿ ಮೊದಲ ಸಲ ಕಾನ್ಸ್‌ನಲ್ಲಿ ಭಾಗಿಯಾಗಿದ್ದಾರೆ. ತಾರಾ ಅವರನ್ನು ರೆಡ್ ಸೀ ಫಿಲ್ಮ್ ಫೌಂಡೇಶನ್ ಆಯೋಜನೆ ಮಾಡುತ್ತಿರುವ ವಿಮೆನ್ಸ್ ಇನ್ ಸಿನಿಮಾ ಗಾಲಾದಲ್ಲಿ ಗೌರವಿಸಿದ್ದು, ಹರ್ಷ ವ್ಯಕ್ತಪಡಿಸಿದ್ದಾರೆ. ಮೊದಲ ದಿನ ಅವರು ತೊಟ್ಟ ವಿಂಟೇಜ್ ಶೈಲಿಯ ಬ್ಲಾಕ್ ಡ್ರೆಸ್ ಸೆಳೆದಿದೆ. ಹುಮಾ ಖುರೇಷಿ, ಐಶ್ವರ್ಯಾ ರೈ, ಕಲ್ಯಾಣಿ ಪ್ರಿಯದರ್ಶನ್, ಮೌನಿ ರಾಯ್ ಸೇರಿದಂತೆ ಅನೇಕರು ಕಾನ್ಸ್ ಕಳೆ ಹೆಚ್ಚಿಸಲಿದ್ದಾರೆ. ■

ಕನ್ನಡದ ಕಂಪು

ಕಾನ್ಸ್ ಫೆಸ್ಟಿವಲ್‌ನಲ್ಲಿ ಕನ್ನಡತಿ ದಿಶಾ ಮದನ್ ಈ ಬಾರಿಯೂ ಭಾಗಿಯಾಗುತ್ತಿದ್ದು, ಈಗಾಗಲೇ ಕೆನಡಾ ತಲುಪಿದ್ದಾರೆ. ಇವರ ಜತೆಗೆ ಕನ್ನಡದ ಕಿರಿ ವಯಸ್ಸಿನ ನಿರ್ದೇಶಕಿ ಕ್ಷಿತಿ ಕರೇನ್ ಸುವರ್ಣ ಹಾಗೂ ಕನ್ನಡಿಗರ ನೆಚ್ಚಿನ ನಟಿ ಪ್ರಿಯಾಂಕಾ ಉಪೇಂದ್ರ ತಮ್ಮ ಸಿನಿಮಾ 'ಸೆಪ್ಟೆಂಬರ್ 21'ರ ಪ್ರೀಮಿಯರ್ ಶೋನಲ್ಲಿ ಭಾಗಿಯಾಗಲು ಕಾನ್ಸ್‌ಗೆ ಹೋಗಿದ್ದಾರೆ. ಕಾನ್ಸ್ ರೆಡ್ ಕಾರ್ಪೆಟ್‌ನಲ್ಲಿ ಕೊಡಗು ಮೂಲದ ಫ್ಯಾಷನ್ ಕಂಟೆಂಟ್ ಕ್ರಿಯೇಟರ್, ಬೆಂಗಳೂರಿನ ರಿದಾ ತರಾನಾ ಕಾಣಿಸಿಕೊಂಡಿದ್ದಾರೆ. ರಿದಾ ಅವರ ಚೊಚ್ಚಲ ಕಾನ್ಸ್ ಸಿನಿಮೋತ್ಸವವಿದು.



ಊರ್ವಶಿ ರೌಟೇಲಾ

ರಿದಾ ತರಾನಾ

ತಾರಾ ಸುತಾರಿಯಾ

Advertorial

ಮಂಡಿನೋವಿನ ಉಪಶಮನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

ಅಲಿವಿಯೇಟ್ ಕ್ಲಿನಿಕ್‌ನಲ್ಲಿದೆ ನೋವಿಗೆ ಉಪಾಯ I ಸ್ಟಿರಾಯ್ಡ್ ಎಂಬ ಶಾರ್ಟ್‌ಕಟ್ ಬಳಕೆ ಇಲ್ಲ

■ ವಿಶೇಷ ವರದಿ ಬೆಂಗಳೂರು

ಮೊಣಕಾಲಿನ ನೋವು ಇತ್ತೀಚಿನ ವರ್ಷಗಳಲ್ಲಿ ಅನೇಕ ಜನರ ಜೀವನ ನಿರ್ವಹಣೆಯನ್ನು ಕಷ್ಟಕರವಾಗಿಸಿದೆ. ಆದರೆ, ಇದರ ಬಗ್ಗೆ ಆತಂಕ ಬೇಡ. ಬೆಂಗಳೂರಿನ ಪ್ರಸಿದ್ಧ 'ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್'ನಲ್ಲಿ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'ಪಿಆರ್‌ಪಿ ಚಿಕಿತ್ಸೆ' ವರದಾನವಾಗಿದೆ.

ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರವರೆಗೆ ಬಹಳಷ್ಟು ಮಂದಿ ಕೀಲು ಸವೆತ ಮತ್ತು ಸಂಧಿವಾತ ದಂತಹ ನೋವಿನಿಂದ ನರಳುತ್ತಿದ್ದಾರೆ. ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟವಾಗಿದ್ದು, ಕುಳಿತಿದ್ದ ಜಾಗದಿಂದ ಏಳುವುದು ಕಷ್ಟಕರ. ಇವೆಲ್ಲವೂ ಅಸ್ಥಿ ಸಂಧಿವಾತದ ಲಕ್ಷಣಗಳಾಗಿದ್ದು, ಇದಕ್ಕಾಗಿ ನೋವು ನಿವಾರಕಗಳ ಮೇಲೆ ಅತಿಯಾದ ಅವಲಂಬನೆ ಹೊಂದುತ್ತಿದ್ದಾರೆ.

ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ

- **ಮೂಲಕ್ಕೆ ಚಿಕಿತ್ಸೆ:** ನೋವಿಗೆ ಕಾರಣವಾದ ಅಂಗಾಂಶದ ಹಾನಿ ಸರಿಪಡಿಸಲಿದೆ. ಇದರಿಂದ ನೋವಿನ ಸಮಸ್ಯೆ ಬುಡದಿಂದಲೇ ಉಪಶಮನ ಸಾಧ್ಯವಾಗುತ್ತದೆ.
- **ನಿಮ್ಮದೇ ದೇಹದ ಶಕ್ತಿ ಬಳಕೆ:** ನಿಮ್ಮ ದೇಹದಿಂದ ತೆಗೆದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳು (ಗುಣ ಮಾಡುವ ಶಕ್ತಿಯನ್ನು) ಪ್ರತ್ಯೇಕಿಸಿ, ಚುಚ್ಚುಮದ್ದಿನ ಮೂಲಕ ನೋವಿರುವ ಜಾಗಕ್ಕೆ ನೀಡಲಾಗುತ್ತದೆ.
- **ದೀರ್ಘಕಾಲೀನ ಉಪಶಮನ:** ಕೇವಲ ತಾತ್ಕಾಲಿಕ ಆರಾಮಕ್ಕಷ್ಟೇ ಸೀಮಿತವಾಗದೆ, ದೀರ್ಘಕಾಲದ ನೋವು ಮುಕ್ತ ಜೀವನಕ್ಕಾಗಿ ರೂಪಿಸಲಾದ ಸುರಕ್ಷಿತ ಮಾರ್ಗವಿದು.
- **ಆಪರೇಷನ್‌ಗೆ ಸೂಕ್ತ ಪರ್ಯಾಯ:** ಶಸ್ತ್ರಚಿಕಿತ್ಸೆ (ಆಪರೇಷನ್) ಬೇಡ ಎನ್ನುವವರಿಗೆ ಮತ್ತು ಆಪರೇಷನ್‌ಗೆ ಸೂಕ್ತವಲ್ಲದವರಿಗೆ ಈ ವರದಾನವಾಗಿದೆ.
- **ಡೇ ಕೇರ್ ಕಾರ್ಯವಿಧಾನ:** ಈ ಚಿಕಿತ್ಸೆಯು ಡೇ ಕೇರ್ ಕಾರ್ಯವಿಧಾನ ಹೊಂದಿದ್ದು, ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್ ಮಾಡಲಾಗುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಲಾಭಗಳು

- ಆಸ್ಪತ್ರೆ ವಾಸ ಇರುವುದಿಲ್ಲ
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಬಹುದು

ಈ ನೋವು ದೇಹದೊಳಗಿನ ಸಮಸ್ಯೆ ಸೂಚಿಸುವ ಒಂದು ಪ್ರಬಲವಾದ ಎಚ್ಚರಿಕೆ ಸಂದೇಶ ಅಷ್ಟೇ. ಅದಕ್ಕೆ ನೋವು ನಿವಾರಕಗಳ ಮೊರೆ ಹೋಗುವುದು, ಸ್ಟೀರಾಯ್ಡ್ ಚುಚ್ಚುಮದ್ದುಗಳನ್ನು ಹಾಕಿಸಿಕೊಳ್ಳುವುದರಿಂದ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬಹುದು. ಆದರೆ ಪೂರ್ಣ ಗುಣ ಸಾಧ್ಯವಿಲ್ಲ. ಹಾಗಾಗಿ ಸಮಸ್ಯೆಯನ್ನು ಬುಡದಿಂದಲೇ ಪರಿಹರಿಸುವ ಅಗತ್ಯವಿದೆ. ಅದಕ್ಕಾಗಿ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್‌ನಲ್ಲಿ ಪರಿಹಾರ ಲಭ್ಯವಿದೆ.

ಇತರ ಚಿಕಿತ್ಸೆ

ಮೊಣಕಾಲು ಮಾತ್ರವಲ್ಲದೆ ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ.

ವಿಳಾಸ: ಅಲಿವಿಯೇಟ್ ನೋವು ನಿವಾರಣಾ ಕೇಂದ್ರ,
ಬೆಂಗಳೂರು ಶಾಖೆಗಳು:
ಪೀಣ್ಯ ದಾಸರಹಳ್ಳಿ, ಸದಾಶಿವನಗರ, ಜಯನಗರ, ಇಂದಿರಾನಗರ, ವೈಟ್‌ಫೀಲ್ಡ್
ದೂ: 080 25256878; 080 23614888

RNI No. KARKAN/2016/71628

Vol. 11 Issue no. 134

This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011."

© All Rights Reserved. Reproduction in whole or part without permission is prohibited.

CRETA benefits up to ₹1 05 000*

EXTER benefits up to ₹45 000*

i20 benefits up to ₹65 000*

Scan for offers, updates & support or give a missed call at 9555295868

6 hai toh safe hai — 6 airbags standard

3 YEAR Unlimited** Kilometer Warranty
Up to 7 years extended warranty^^

i20 starts at ₹5.99 Lakh~~. ALCAZAR available in 6 & 7 seater.
Hy-CNG Duo (Dual cylinder technology) also available in EXTER & Grand i10 NIOS.
For bulk deals contact: corporatesales@hmil.net

HYUNDAI

Pavan Hyundai: Kanakpura Road Ph: 7337882522, Electronic City Ph: 7337882373; **Trident Hyundai:** SankeyRoad Ph: 7353762526 , K R Puram Ph: 9844266873, Hosur Road Ph: 9743786716, Indiranagar Ph: 9743107927, Yelahanka Ph: 7353750677, Yeshwantpur Ph: 9844701452 **Advaith Hyundai:** Residency Road, Ph: 9606076451, Marathahalli, Outer Ring Road, Ph: 9606076452, Vasanthnagar Ph: 9606076453, Bannerghatta Road Ph: 9606076454, Kormangala Ph: 9606076455, Avalahalli Ph: 9606076456, Sarjapura Ph: 9606076458, Bilekahalli Ph: 9606076457, Anekal Ph: 9964039537; **Blue Hyundai:** New BEL Road Ph: 9513000800, Magadi Road Ph: 9513200033, Rajajinagar Ph: 9591200001, Basavangudi, Ph: 9591211118, Mysore Road Ph: 9591100001; Hessarghatta Main Road: 9916208888; **Dhruvdesh Hyundai:** Banashankari 3rd stage Ph: 9205770577; **Lakshmi Hyundai:** Hebbal Ph: 9900037900, Kalyan Nagar Ph: 8884441111, Whitefield Ph: 8884497700, Hennur Ph: 8904777500, Devanahalli Ph: 8884499037; **Nelamangala: Blue Hyundai** Ph: 9742245636; **Ramanagara: Advaith Hyundai** Ph: 9620594433; **Kanakpura: Pavan Hyundai** Ph: 7892718572, **Kolar: Advaith Hyundai:** Ph: 9620229885, **Tumkur: Pavan Hyundai:** Ph: 7337882383: **Tiptur: Advaith Hyundai:** Ph: 7619577050; **Chintamani: Advaith Hyundai:** Ph: 8147994737.

my Hyundai app

Hyundai Promise — Certified Pre-Owned Car

*Terms & conditions apply. *Offers and benefits mentioned are valid till 31st May 2026. Offers and benefits mentioned include cash, corporate, government employee exclusive offers, upgrade offers, either exchange or scrappage benefits as applicable. Total benefit amount may vary depending upon the eligibility of the customer. Offers and benefits may vary from variant to variant. **3-year warranty or up to 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, VERNA and IONIQ 5. ^^Up to 7 Years extended warranty or 1 40 000 km whichsoever is earlier is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric & ALCAZAR in all variants (Petrol/Diesel/CNG) and subject to payment. For more details, visit your nearest Hyundai showroom. ~~Price mentioned is ex-showroom price. ~Finance offers on select Hyundai vehicles are solely at the discretion of the financier, subject to their terms, and HMIL has no role in finance offers. #2 to 4 wheeler upgrade offer only applicable for customers who provide a valid original 2 wheeler registration certificate at the time of booking. ##CSD: Canteen Stores Department, KPKB: Kendriya Police Kalyan Bhandar. This advertisement and car shown here is for creative representation purposes only and the depictions are for illustrative purposes. Features and specifications shown may or may not be part of standard fitment and are subject to change without prior notice. Hyundai Motor India Limited reserves the right to change specifications, colour, equipment, and schemes at any time without prior notice. The black shade on glass is due to lighting effect. Size and colour may appear to vary due to lighting and position effect.